ಸಂಪುಟ: 05 ಸಂಚಿಕೆ: 351 ಪುಟಗಳು: 08 ಗುರುವಾರ 05 ಮಾರ್ಚ್ 2026

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಮೊದಲು ನಮ್ಮ ಬಗ್ಗೆ ನಮಗೆ ನಂಬಿಕೆಯಿದ್ದಲ್ಲಿ ಮಾತ್ರ ಭಗವಂತನಲ್ಲಿ ನಂಬಿಕೆಯಿಡಲು ಸಾಧ್ಯ, ತನ್ನನ್ನೇ ನಂಬದವನು ಭಗವಂತನನ್ನು ಹೇಗೆ ತಾನೇ ನಂಬಲು ಸಾಧ್ಯ..

# ರೇಸ್‌ಕೋರ್ಸ್‌ನಿಂದ 2 ಸಾವಿರ ಉದ್ಯೋಗ ಸೃಷ್ಟಿ

## ● ಚಟ ಇರೋರು ಆಡ್ತಾರೆ ಬಿಡಿ ● ವಿರೋಧಿಗಳಿಗೆ ಡಿಕೆಶಿ ತಿರುಗೇಟು

• ಉದಯವಾಹಿನಿ, ಬೆಂಗಳೂರು

ರೇಸ್ ಕೋರ್ಸ್‌ನ್ನು ಬೆಂಗಳೂರಿನಿಂದ ಕುಣಿಗಲ್‌ಗೆ ಸ್ಥಳಾಂತರ ಮಾಡುವುದರಿಂದ 2 ಸಾವಿರ ಉದ್ಯೋಗ ಸೃಷ್ಟಿ ಆಗಲಿದೆ. ಹಾಗಾಗಿ ಇದಕ್ಕೆ ವಿರೋಧ ಏಕೆ? ಎಂದು ಡಿಸಿಎಂ ಡಿಕೆ ಶಿವಕುಮಾರ್ ತಿರುಗೇಟು ನೀಡಿದರು. ಮಾಗಡಿಯಲ್ಲಿ ಬುಧವಾರ ಮಾತನಾಡಿದ ಅವರು, ರಾಜ್ಯ ಸರ್ಕಾರದ ನಿರ್ಧಾರವನ್ನು ಸಮರ್ಥಿಸಿಕೊಂಡರು.

ಮೈಸೂರು ಮಹಾರಾಜರ ಕಾಲದಿಂದಲೂ ಕುಣಿಗಲ್‌ನಲ್ಲಿ ಕುದುರೆ ಸಾಕಲಾಗುತ್ತಿದೆ. ಬೆಂಗಳೂರು ರೇಸ್ ಕೋರ್ಸ್ ಅನ್ನು ಇಲ್ಲಿಗೆ ಸ್ಥಳಾಂತರಿಸುತ್ತೇವೆ ಎಂದರೆ ಇದಕ್ಕೆ ವಿರೋಧ ಮಾಡುತ್ತೀರಾ? ಇದರಿಂದ ಸುಮಾರು 2 ಸಾವಿರ ಜನರಿಗೆ ಕೆಲಸ ಸಿಗುತ್ತದೆ. ನಾವು ಕುಣಿಗಲ್ ಜನರಿಗೆ ರೇಸ್ ಆಡಿ ಎಂದು ಹೇಳಿಲ್ಲ. ರೇಸ್ ಕೋರ್ಸ್ ಬೆಂಗಳೂರಿನಲ್ಲಿದೆ ಎಂದು ಬೆಂಗಳೂರಿನ ಎಲ್ಲರೂ ರೇಸ್ ಆಡುತ್ತಿದ್ದಾರಾ? ನೀನು ಕೂಡ ರೇಸ್ ಆಡಬೇಡ ಎಂದು ವಿರೋಧಿ ಬಣಕ್ಕೆ ತಿರುಗೇಟು ನೀಡಿದರು.

ನೀನು ಎಲ್ಲಿ ಆಡುತ್ತಿದ್ದೀಯಾ, ಆ ಜಾಗ ಯಾವುದು ಎಂದು ನನಗೆ ಗೊತ್ತು. ಕುಣಿಗಲ್‌ಗೆ ಹೆಸರು ಬರುತ್ತದೆ. ಬೇರೆ ಊರುಗಳಿಂದ ಬಂದವರು, ಅದರ ಚಟ ಇರುವವರು ರೇಸ್ ಆಡುತ್ತಾರೆ.



ಚಟ ಇರುವವರು ವೈನ್ ಶಾಪಿಗೆ ಹೋಗುವುದಿಲ್ಲವೇ? ಚಟ ಇರುವವರು ಗೋವಾದಲ್ಲಿ ಕ್ಯಾಸಿನೋಗೆ ಹೋಗುವುದಿಲ್ಲವೇ? ರಾಮನಗರದವರು ಹೋಗಿ ಕ್ಯಾಸಿನೋ ಆಡುತ್ತಿರುವ ಫೋಟೋ ನೋಡಿದ್ದೇನೆ. ದೊಡ್ಡವರು ಆಡಿದ್ದಾರೋ, ಚಿಕ್ಕವರು ಆಡಿದ್ದಾರೋ ಎಂದು ನಾನು ಹೇಳುವುದಿಲ್ಲ. ಹೆಸರು ಹೇಳಿದರೆ ಪತ್ರಿಕೆಯವರು ಅದನ್ನೇ ಬರೆಯುತ್ತಾರೆ ಎಂದು ಹೇಳಿದರು.

ನಾವು ಶಾಶ್ವತವಲ್ಲ. ನಮ್ಮ ಕೆಲಸಗಳು ಮಾತ್ರ ಶಾಶ್ವತ. ಕೆಂಪೇಗೌಡರನ್ನು ನಾವು ನೆನೆಯುವುದು ಶಾಶ್ವತ. ಬಾಲಕೃಷ್ಣ ಅವರು ಚಕ್ರಬಾವಿಯಲ್ಲಿ ಒಂದು ಶಾಲೆ ಬೇಕು ಎಂದು ಕೇಳಿದರು.


### ಹೆಸರು ಬದಲಾವಣೆಯಿಂದ ಜಮೀನು ಮೌಲ್ಯ ಹೆಚ್ಚಳ

**ಬೆಂಗಳೂರು ದಕ್ಷಿಣ ಎಂದು ಹೆಸರು ಬದಲಾವಣೆ ಅದ ಬಳಿಕ ಭೂಮಿಯ ಮಾರಾಟ ಮೌಲ್ಯ ಹೆಚ್ಚಾಗಿದೆ. ಊರ ಜಮೀನು ಬೆಲೆ ಎಷ್ಟಾಗಿದೆ? ಮುಖ್ಯರಸ್ತೆಯಲ್ಲಿ ಎಕರೆಗೆ ಒಂದುವರೆ ಕೋಟಿ ಹಾಗೂ ಒಳಭಾಗದ ರಸ್ತೆಯಲ್ಲಿ ಎಕರೆಗೆ 75 ಲಕ್ಷ ಆಗಿದೆ. ಐದು ವರ್ಷದ ಹಿಂದೆ ಒಂದು ಲಕ್ಷ, ಎರಡು ಲಕ್ಷ, ಮೂರು ಲಕ್ಷ ಇತ್ತು. ಒಂದು ತೀರ್ಮಾನದಿಂದ ಎಲ್ಲವೂ ಬದಲಾವಣೆ ಆಗಿದೆ ಎಂದು ಸರ್ಕಾರದ ನಡೆಯನ್ನು ಸಮರ್ಥನೆ ಮಾಡಿಕೊಂಡರು**

ನಾನು ಚಿಕ್ಕವನಾಗಿದ್ದಾಗ ಚಕ್ರಬಾವಿಗೆ ಬರುತ್ತಿದ್ದೆ. ಈ ಮನವಿ ಬಗ್ಗೆ ನಾನು, ಸುರೇಶ್ ಅವರೆಲ್ಲಾ ಸೇರಿ ಚರ್ಚೆ ಮಾಡಿ ಸಾಕ್ಷಿಗುಡ್ಡೆ ಬಿಟ್ಟು ಹೋಗುತ್ತೇವೆ. ನಾನು ಇಂಧನ ಸಚಿವನಾಗಿದ್ದಾಗ ಎಷ್ಟು ಸ್ಟೇಷನ್ ಮಾಡಿದ್ದೇನೆ, ಹೆಚ್ ವಿಡಿಎಸ್ ಯೋಜನೆಯಲ್ಲಿ ನಾನು ಕೊಟ್ಟಿರುವ ಟ್ರಾನ್ಸ್‌ಫಾರ್ಮರ್‌ಗಳು, ಈ ಕೆರೆ ತುಂಬಿಸುವ ಯೋಜನೆ ಸೇರಿದಂತೆ ಮಾಗಡಿ ಕ್ಷೇತ್ರದ ನೀರಾವರಿ ಯೋಜನೆಗೆ 1 ಸಾವಿರ ಕೋಟಿ ಅನುದಾನ ನೀಡಿದ್ದೇನೆ ಎಂದರು. ಕುಣಿಗಲ್ ಕ್ಷೇತ್ರದ ನೀರಾವರಿ ಯೋಜನೆಗಳಿಗೆ 1 ಸಾವಿರ ಕೋಟಿ, ರಾಮನಗರ ಹಾಗೂ ಕನಕಪುರ ಕ್ಷೇತ್ರಗಳಿಗೆ 1 ಸಾವಿರ ಕೋಟಿ ಅನುದಾನ ನೀಡಲಾಗಿದೆ. ಈ ಬಗ್ಗೆ ಬಿಜೆಪಿಯವರು ಉತ್ತರ ನೀಡಬೇಕು. ನಿಮ್ಮ ಕಾಲದಲ್ಲಿ ನೀವು ಏನು ಮಾಡಿದ್ದೀರಿ ಎಂದು ಹೇಳಿ. ಟೀಕೆಗಳು ಸಾಯುತ್ತವೆ, ಕೆಲಸಗಳು ಉಳಿಯುತ್ತವೆ ಎಂಬುದಕ್ಕೆ ಇದೇ ಸಾಕ್ಷಿ ಎಂದು ಹೇಳಿದರು.

## ವಿನ್ಯಾಸಗಾರರು ಬೇಕಾಗಿದ್ದಾರೆ

ಪೇಜ್ ಮೇಕರ್, ಇನ್ ಡಿಸೈನರ್, ಕನ್ನಡ ಟೈಪ್ ಮಾಡಬಲ್ಲವರು. ಬೆಂಗಳೂರಿನಲ್ಲಿ ವಾಸವಿರುವ



ಬೆಂಗಳೂರು ಕಚೇರಿಯಲ್ಲಿ ಕೆಲಸ ಮಾಡಲು ಇಚ್ಛಿಸುವ (4 ಮಂದಿ) ಪತ್ರಿಕೋದ್ಯಮದಲ್ಲಿ ತೀವ್ರ ಆಸಕ್ತಿ, ಕನ್ನಡ ಭಾಷೆಯ ಮೇಲೆ ಹಿಡಿತ, ಸಾಮಾನ್ಯ ಜ್ಞಾನ, ಓದುವ ಹವ್ಯಾಸ ಹಾಗೂ ಉತ್ಸಾಹ ಕಾತುರವಿರುವ ಆಸಕ್ತರಿಗೆ ನಿರ್ದಿಷ್ಟ ಪದವಿಯ ಅಗತ್ಯವಿಲ್ಲ.
ವಯೋಮಿತಿ ಗರಿಷ್ಠ 25 ವರ್ಷ.
ಆಸಕ್ತರು ಕೂಡಲೇ ಈ ಕೆಳಗಿನ ವಿಳಾಸಕ್ಕೆ ತಮ್ಮ ಪೂರ್ಣ ವಿವರಗಳುಳ್ಳ ಅರ್ಜಿ ಸಲ್ಲಿಸಿ ಅಥವಾ ಮುಖತಃ ಭೇಟಿ ನೀಡಿ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
9448225696

ಉದಯ ವಾಹಿನಿ

#: 1230 'JAYAMAHAL 13th cross, 2nd phase, Girinagar, Bangalore-560085. (Near to bangalore one park, opposite mandya medical)
udayavahininews@gmail.com

## ಕರ್ನಾಟಕ ಸಾಲದ ರಾಜ್ಯವನ್ನಾಗಿಸಿದ ಕೀರ್ತಿ ಸಿದ್ದರಾಮಯ್ಯಗೆ ಸಲ್ಲುತ್ತದೆ

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ರಾಜ್ಯವನ್ನು 'ಸಾಲದ ರಾಜ್ಯ'ವನ್ನಾಗಿಸಿದ ಕೀರ್ತಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಲ್ಲುತ್ತದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ವಾಗ್ದಾಳಿ ನಡೆಸಿದ್ದಾರೆ. 'ಭ್ರಷ್ಟ ಕಾಂಗ್ರೆಸ್ ಸರ್ಕಾರದ ಅವಿವೇಕದ ಆರ್ಥಿಕ ನೀತಿಗಳಿಂದಾಗಿ ಕರ್ನಾಟಕ ಇಂದು ಸಾಲದ ಕೂಪಕ್ಕೆ ನೂಕಲ್ಪಟ್ಟಿದೆ. ಭಾರತೀಯ ರಿಸರ್ವ್ ಬ್ಯಾಂಕ್ ಹೇಳುವಂತೆ 2025–26ರ ಅಂತ್ಯಕ್ಕೆ ರಾಜ್ಯದ ಒಟ್ಟು ಸಾಲ ರೂ.8.14 ಲಕ್ಷ ಕೋಟಿಗೆ ಏರಿಕೆಯಾಗಿದ್ದೇ ಆದಲ್ಲಿ, ಜಿಎಸ್‌ಡಿಪಿಯ ಶೇ 26.5ರಷ್ಟು ದಾಟುವ ಮೂಲಕ ಆರ್ಥಿಕ ಶಿಸ್ತಿನ ಎಲ್ಲಾ ಮಿತಿಗಳನ್ನು ಉಲ್ಲಂಘಿಸಲಿದೆ. ಕೇವಲ ಬಡ್ಡಿ ಪಾವತಿಗಾಗಿಯೇ ರಾಜ್ಯ ಸರ್ಕಾರ ರೂ.48,000 ಕೋಟಿ ವ್ಯಯಿಸುತ್ತಿರುವುದು ನಮ್ಮ ಆರ್ಥಿಕ ತಜ್ಞ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಲೆಕ್ಕಾಚಾರ ಬುಡಮೇಲಾಗಿರುವುದನ್ನು ತೋರಿಸುತ್ತಿದೆ. ಇವರ ದುರಾಡಳಿತ ಮತ್ತು ಹಣಕಾಸು ನಿರ್ವಹಣೆಯ ವೈಫಲ್ಯದಿಂದ ರಾಜ್ಯದ ಬೊಕ್ಕಸ ಬರಿದಾಗಿದ್ದು, ಇದನ್ನು ಮುಚ್ಚಿಕೊಳ್ಳಲು ಸಾಧ್ಯವಿರುವ ಎಲ್ಲಾ ವಸ್ತುಗಳ ಬೆಲೆಯನ್ನೂ ಈ ಭ್ರಷ್ಟ ಕಾಂಗ್ರೆಸ್ ಸರ್ಕಾರ ಏರಿಕೆ ಮಾಡಿದೆ' ಎಂದು ಗುಡುಗಿದ್ದಾರೆ.

## ಒಗ್ಗಟ್ಟಿನಿಂದ ಒಕ್ಕೂಟ ವ್ಯವಸ್ಥೆಗೆ ಬಲ: ತಮಿಳುನಾಡು ಸಿಎಂಗೆ ಪತ್ರ

• ಉದಯವಾಹಿನಿ, ಬೆಂಗಳೂರು

'ಕೇಂದ್ರ ಮತ್ತು ರಾಜ್ಯಗಳ ನಡುವಿನ ಅಧಿಕಾರ ಹಾಗೂ ಆರ್ಥಿಕ ಹಂಚಿಕೆಯ ಅಸಮತೋಲನ ಸರಿಪಡಿಸಲು ಬಲವಾದ ಸಾಂಸ್ಥಿಕ ವೇದಿಕೆಯೊಂದನ್ನು ರಚಿಸಬೇಕಿದೆ' ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್‌ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ರ ಬರೆದಿದ್ದಾರೆ. 'ಪ್ರಸ್ತುತ ನಿಷ್ಕ್ರಿಯವಾಗಿರುವ 'ಅಂತರರಾಜ್ಯ ಮಂಡಳಿ'ಯನ್ನು ತಕ್ಷಣ ಪುನರುಜೀವನಗೊಳಿಸಿ. ಸಮಾನ ಮನಸ್ಕ ರಾಜ್ಯಗಳು ಒಟ್ಟುಗೂಡಿ ತಮ್ಮ ಸಮಸ್ಯೆಗಳನ್ನು ಮುಕ್ತವಾಗಿ ಚರ್ಚಿಸಲು ಅವಕಾಶ ಕಲ್ಪಿಸಬೇಕಿದೆ' ಎಂದಿದ್ದಾರೆ.

ಭಾರತದ ಸಾಂವಿಧಾನಿಕ ಚೌಕಟ್ಟಿನಲ್ಲಿ ಒಕ್ಕೂಟ ವ್ಯವಸ್ಥೆಯನ್ನು ಬಲಪಡಿಸುವ ಮತ್ತು ಕೇಂದ್ರ ರಾಜ್ಯ ಸಂಬಂಧದ ಕುರಿತು ರಾಷ್ಟ್ರಮಟ್ಟದ ಚರ್ಚೆಗೆ ಬೆಂಬಲ ವ್ಯಕ್ತಪಡಿಸಿರುವ ಸಿದ್ದರಾಮಯ್ಯ, 'ಒಕ್ಕೂಟ ವ್ಯವಸ್ಥೆಯ ಸಮತೋಲನವನ್ನು ಮರುಸ್ಥಾಪಿಸುವ ಹಾಗೂ ಭಾರತದ ಪ್ರಜಾಸತ್ತಾತ್ಮಕ ಚೌಕಟ್ಟನ್ನು ಬಲಪಡಿಸುವ ಯಾವುದೇ ರಚನಾತ್ಮಕ ಮತ್ತು ಸಕಾರಾತ್ಮಕ ಕಾರ್ಯಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಕರ್ನಾಟಕ ಸದಾ ಸಿದ್ಧವಾಗಿದೆ' ಎಂದೂ ಹೇಳಿದ್ದಾರೆ. 'ಒಕ್ಕೂಟ ವ್ಯವಸ್ಥೆ ಎನ್ನುವುದು ಕೇವಲ ಒಂದು ರಾಜಕೀಯ ಬೇಡಿಕೆಯಲ್ಲ, ಅದು ನಮ್ಮ ಸಂವಿಧಾನದ ಮೂಲಭೂತ ರಚನೆಯ ಅವಿಭಾಜ್ಯ ಅಂಗ. ಕಳೆದ ಕೆಲವು ವರ್ಷಗಳಿಂದ ಆರ್ಥಿಕ ಮತ್ತು ಶಾಸಕಾಂಗ ವಿಷಯಗಳಲ್ಲಿ ಅಧಿಕಾರವು ಕೇಂದ್ರದತ್ತ ಹೆಚ್ಚು ಕೇಂದ್ರೀಕೃತವಾಗುತ್ತಿದೆ. ಇದು ಸಂವಿಧಾನ ರಚನೆಕಾರರು ರೂಪಿಸಿದ್ದ ಕೇಂದ್ರ ಮತ್ತು ರಾಜ್ಯಗಳ ನಡುವಿನ ಸೂಕ್ಷ್ಮ ಸಮತೋಲನವನ್ನು ಕದಡಿದೆ.

ರಾಜ್ಯಗಳಿಗೆ ವಹಿಸಲಾಗಿರುವ ಜವಾಬ್ದಾರಿಗಳನ್ನು ಸಮರ್ಪಕವಾಗಿ ನಿರ್ವಹಿಸಲು ಮತ್ತು ಜನಪರ ಯೋಜನೆಗಳನ್ನು ಜಾರಿಗೊಳಿಸಲು ಅವುಗಳಿಗೆ ಅಗತ್ಯವಿರುವ ಅಧಿಕಾರ ಹಾಗೂ ಆರ್ಥಿಕ ಸ್ವಾತಂತ್ರ್ಯವನ್ನು ಒದಗಿಸುವುದು ಇಂದಿನ ತುರ್ತು ಅಗತ್ಯವಾಗಿದೆ' ಎಂದೂ ಪತ್ರದಲ್ಲಿ ಸಿದ್ದರಾಮಯ್ಯ ಹೇಳಿದ್ದಾರೆ.

**ಅಮೆರಿಕ-ಇಸ್ರೇಲ್ ಜಂಟಿ ದಾಳಿಗೂ ಬಗ್ಗದ ಇರಾನ್**

# ಸೇಡಿನ ರಣಕಹಳೆ ಕ್ಷಿಪಣಿಗಳ ಮಳೆ

## ಪ್ರತಿಕಾರದ ದಾಳಿಗೆ ಬೆದರಿದ ಟ್ರಂಪ್!



**ಅಮೆರಿಕದ ಅತಿದೊಡ್ಡ ರಾಡಾರ್ ನಾಶ; ಶತಕೋಟಿ ಡಾಲರ್ ನಷ್ಟ**



**ಟೆಹ್ರಾನ್:** ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧ ರಣಭೀಕರವಾಗಿ ಮಾರ್ಪಟ್ಟಿದೆ. ಅಮೆರಿಕ ಮತ್ತು ಇಸ್ರೇಲ್ ಜಂಟಿಯಾಗಿ ನಡೆಸುತ್ತಿರುವ ಸರಣಿ ದಾಳಿಗಳ ನಡುವೆಯೂ ಇರಾನ್ ಐದನೇ ದಿನವೂ ತನ್ನ ಪಟ್ಟು ಸಡಿಲಿಸಿಲ್ಲ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಇರಾನ್‌ನ ಮಿಲಿಟರಿ ಶಕ್ತಿಯನ್ನು ಕುಗ್ಗಿಸಿರುವುದಾಗಿ ಹೇಳಿಕೊಂಡಿದ್ದರೂ, ಟೆಹ್ರಾನ್‌ನ ಇಂದಿನ ನಿಲುವುಗಳನ್ನು ಗಮನಿಸಿದರೆ ಈ ಯುದ್ಧವು ಶೀಘ್ರದಲ್ಲಿ ಕೊನೆಗೊಳ್ಳುವ ಲಕ್ಷಣಗಳು ಕಾಣಿಸುತ್ತಿಲ್ಲ.

**ಐದನೇ ದಿನವೂ ಕ್ಷಿಪಣಿಗಳ ಅರ್ಭಟ, ನಾಯಕರ ಸಾವು:** ಯುದ್ಧವು ಈಗ ಅತ್ಯಂತ ನಿರ್ಣಾಯಕ ಹಂತಕ್ಕೆ ತಲುಪಿದೆ. ಐದನೇ ದಿನವೂ ಇಡೀ ಪ್ರದೇಶವು ಕ್ಷಿಪಣಿಗಳ ಘರ್ಜನೆಯಿಂದ ನಡುಗುತ್ತಿದೆ. ಇರಾನ್‌ನ ಪ್ರಮುಖ ಮಿಲಿಟರಿ ತಾಣಗಳ ಮೇಲೆ ಅಮೆರಿಕ-ಇಸ್ರೇಲ್ ಪಡೆಗಳು ಭಾರಿ ದಾಳಿ ನಡೆಸಿವೆ. ಇರಾನ್‌ನ ಸರ್ವೋಚ್ಚ ನಾಯಕ ಅಯತೊಲ್ಲಾ ಖಮೇನಿ ಸೇರಿದಂತೆ ಪ್ರಮುಖ ನಾಯಕರು ಸಾವನ್ನಪ್ಪಿದ್ದಾರೆ ಎಂಬ ವರದಿಗಳು ಟೆಹ್ರಾನ್‌ನಲ್ಲಿ ಆತಂಕ ಸೃಷ್ಟಿಸಿವೆ. ಆದರೂ ಇರಾನ್ ಸೈನ್ಯವು ತನ್ನ ಪ್ರತೀಕಾರದ ದಾಳಿಯನ್ನು ಮುಂದುವರಿಸಿದೆ.

**ಅರಬ್ ರಾಷ್ಟ್ರಗಳ ಮೇಲೆ ಇರಾನ್ ಕ್ಷಿಪಣಿ ಮಳೆ:** ಇರಾನ್ ಈ ಸಂಘರ್ಷವನ್ನು ಕೇವಲ ತನ್ನ ಗಡಿಗಷ್ಟೇ ಸೀಮಿತಗೊಳಿಸದೆ, ಅಮೆರಿಕದ ಮಿಲಿಟರಿ ನೆಲೆಗಳಿರುವ ಬಹ್ರೇನ್, ಕುವೈತ್, ಕತಾರ್ ಮತ್ತು ಯುಎಇ ರಾಷ್ಟ್ರಗಳ ಮೇಲೂ ಕ್ಷಿಪಣಿ ದಾಳಿ ಮಾಡಿದೆ. ಇಸ್ರೇಲ್ ಮೇಲೆ ಸುಮಾರು 70 ಕ್ಕೂ ಹೆಚ್ಚು ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ಹಾರಿಸುವ ಮೂಲಕ ಇರಾನ್ ತನ್ನ ಶಕ್ತಿ ಪ್ರದರ್ಶಿಸಿದೆ. ನಾವು ಶಾಂತಿ ಮತ್ತು ಯುದ್ಧ ಎರಡಕ್ಕೂ ಸಿದ್ಧ ಎಂದು ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಗ್ಚಿ ಎಚ್ಚರಿಸಿದ್ದಾರೆ. ಈ ಯುದ್ಧದ ಅವಧಿಯ ಬಗ್ಗೆ ಮಿಲಿಟರಿ ತಜ್ಞರಲ್ಲಿ ಭಿನ್ನಾಭಿಪ್ರಾಯಗಳಿವೆ. ಅಮೆರಿಕದ ಬೃಹತ್ ಫೈರ್ ಪವರ್ ಮುಂದೆ ಇರಾನ್ ಕೇವಲ 7 ರಿಂದ 10 ದಿನಗಳವರೆಗೆ ಮಾತ್ರ ತಡೆಯಲು ಸಾಧ್ಯ ಎಂಬುದು ಕೆಲವರ ವಾದ. ಆದರೆ, ಇರಾನ್ ಒಂದು ವೇಳೆ ಹಾರ್ಮುಜ್ ಜಲಸಂಧಿಯನ್ನು ಬಂದ್ ಮಾಡಿದರೆ ಜಾಗತಿಕ ತೈಲ ಬಿಕ್ಕಟ್ಟು ಉಂಟಾಗಿ, ಈ ಸಂಘರ್ಷ ತಿಂಗಳುಗಳವರೆಗೆ ಎಳೆಯಬಹುದು ಎಂಬ ಆತಂಕವೂ ಇದೆ. ಕಳೆದ ಯುದ್ಧಗಳು ಮತ್ತು ಇತ್ತೀಚಿನ ದಾಳಿಗಳಿಂದ ಇರಾನ್‌ನ ಶಸ್ತ್ರಾಸ್ತ್ರ ಸಂಗ್ರಹಕ್ಕೆ ಭಾರಿ ಹೊಡೆತ ಬಿದ್ದಿದೆ. ಆರಂಭದಲ್ಲಿ 3,000 ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ಹೊಂದಿದ್ದ ಇರಾನ್, ಈಗ ಸುಮಾರು ಅರ್ಧದಷ್ಟು ಕ್ಷಿಪಣಿ ಮತ್ತು ಲಾಂಚರ್‌ಗಳನ್ನು ಕಳೆದುಕೊಂಡಿದೆ ಎಂದು ಅಂದಾಜಿಸಲಾಗಿದೆ. ಪ್ರಸ್ತುತ ಇರಾನ್ ಬಳಿ ಸುಮಾರು 1,000 ದಿಂದ 1,500 ಕ್ಷಿಪಣಿಗಳು ಮಾತ್ರ ಉಳಿದಿರಬಹುದು ಎಂದು ಐಡಿಎಫ್ ವರದಿ ಮಾಡಿದೆ.

ಇರಾನ್‌ನ ಅಸಲಿ ಶಕ್ತಿ ಇರುವುದು ಭೂಗತ 'ಕ್ಷಿಪಣಿ ನಗರ'ಗಳಲ್ಲಿ. ಪರ್ವತಗಳ ಕೆಳಗೆ ಸುಮಾರು 500 ಮೀಟರ್ ಆಳದಲ್ಲಿ ನಿರ್ಮಿಸಲಾಗಿರುವ ಈ ಬಂಕರ್‌ಗಳಲ್ಲಿ ಸಾವಿರಾರು ಕಾಮಿಕೇಜ್ ಡ್ರೋನ್‌ಗಳು ಮತ್ತು ಕ್ಷಿಪಣಿಗಳನ್ನು ಅಡಗಿಸಿಡಲಾಗಿದೆ. ಇಂತಹ ಸುಸಜ್ಜಿತ ಭೂಗತ ನೆಲೆಗಳನ್ನು ನಾಶಪಡಿಸುವುದು ಅಮೆರಿಕದಂತಹ ಪ್ರಬಲ ರಾಷ್ಟ್ರಕ್ಕೂ ದೊಡ್ಡ ಸವಾಲಾಗಿ ಪರಿಣಮಿಸಿದೆ.

### ಅಮೆರಿಕ ಇಸ್ರೇಲ್‌ಗೆ ಇರಾನ್ ತಿರುಗೇಟು

**ಅಮೆರಿಕ , ಇಸ್ರೇಲ್‌ಗೆ ಇರಾನ್ ಅಗ್ಗದ ಡ್ರೋಣ್ ಮೂಲಕ ತಿರುಗೇಟು ನೀಡುತ್ತಿದೆ , ಇರಾನ್ ಬಳಿಯಿರುವ ಶಸ್ತ್ರಾಸ್ತ್ರಗಳು ಅಷ್ಟೇನೂ ಆಧುನಿಕ ಹಾಗೂ ಪರಿಣಾಮಕಾರಿ ಅಲ್ಲ. ಆದರೆ ಅವುಗಳ ಮಾರಕ ದಾಳಿಯಿಂದ ಆಗುತ್ತಿರುವ ಅಪಾರ ಹಾನಿಯನ್ನು ತಪ್ಪಿಸಲು ಮಾತ್ರ ಸಾಧ್ಯವಾಗುತ್ತಿಲ್ಲ. ಅವುಗಳನ್ನು ಧ್ವಂಸ ಮಾಡುವಲ್ಲಿ ಅಮೆರಿಕ 90% ರಷ್ಟು ಯಶಸ್ವಿಯಾದರೂ, ಆ ಕಾರ್ಯಾಚರಣೆ ಭಾರೀ ದುಬಾರಿಯಾಗುತ್ತಿದೆ. ಮಧ್ಯಪ್ರಾಚ್ಯದಾದ್ಯಂತ ಇರುವ ಅಮೆರಿಕದ ನೆಲೆಗಳು, ತೈಲಾಗಾರಗಳು, ರಾಯಭಾರ ಕಚೇರಿ, ಕಟ್ಟಡಗಳ ಮೇಲೆ ದಾಳಿ ಮಾಡಲು ಇರಾನ್ ಬಳಸುತ್ತಿರುವುದು ಶಾಹೇದ್-136 ಡ್ರೋನ್, ಇದರ ಬೆಲೆ ಅಂದಾಜು 2 ಲಕ್ಷ ರೂ. ಆದರೆ ಇವುಗಳನ್ನು ತಡೆಯಲು ಅಮೆರಿಕ ಬಳಸುತ್ತಿರುವ ಪ್ಯಾಕ್-3 ಪ್ರತಿಬಂಧಕದ ಬೆಲೆ ಬರೋಬ್ಬರಿ 36 ಕೋಟಿ ರೂ. ಆಗಿದೆ. ಹೀಗಿರುವಾಗ, ಇರಾನ್ ಹಾರಿಸುವ ಕ್ಷಿಪಣಿಗಳನ್ನು ತಡೆಯುವುದು ಅಮೆರಿಕದ ಪಾಲಿಗೆ ಕಷ್ಟಕರ ಹಾಗೂ ಅತಿ ದುಬಾರಿಯಾಗುತ್ತಿದೆ. ಒಂದರ ಹಿಂದೊಂದರಂತೆ ನುಗ್ಗಿಬರುವ ಎಲ್ಲಾ ಕ್ಷಿಪಣಿಗಳನ್ನು ಗುರುತಿಸಿ ಹೊಡೆಯುವುದು ಯಾವ ರಕ್ಷಣಾ ವ್ಯವಸ್ಥೆಗೂ ಸಾಧ್ಯವಿಲ್ಲವಾದ ಕಾರಣ, ಇವುಗಳಲ್ಲಿ ಕೆಲವಾದರೂ ಗುರಿಗಳನ್ನು ಧ್ವಂಸಗೊಳಿಸುವ ಸಾಧ್ಯತೆ ಇದ್ದೇ ಇರುತ್ತದೆ.**

### ಶತಕೋಟಿ ಡಾಲರ್ ಶಸ್ತ್ರಾಸ್ತ್ರ ನಾಶ

ಎರಡೂ ಕಡೆಯ ದಾಳಿಯಲ್ಲಿ ಶತಕೋಟಿ ಡಾಲರ್ ಮೌಲ್ಯದ ಮಿಲಿಟರಿ ಶಸ್ತ್ರಾಸ್ತ್ರಗಳು ನಾಶವಾಗಿವೆ. ಈ ಮಧ್ಯೆ, ಗಲ್ಫ್‌ನಲ್ಲಿ ಅಮೆರಿಕದ ಅತಿದೊಡ್ಡ ರಾಡಾರ್ ವ್ಯವಸ್ಥೆಯನ್ನ AN/FPS-132 ನಾಶ ಪಡಿಸಿರುವುದಾಗಿ ಇರಾನ್ ಹೇಳಿಕೊಂಡಿದೆ. 5,000 ಕಿಮೀಗಳ ಟ್ರ್ಯಾಕಿಂಗ್ ವ್ಯಾಪ್ತಿಯನ್ನು ಹೊಂದಿದ್ದ ರಾಡಾರ್ ವ್ಯವಸ್ಥೆಯನ್ನ ಹೊಡೆದುರುಳಿಸಲಾಗಿದೆ ಎಂದು IRGC ಹೇಳಿರುವುದಾಗಿ ಮಾಧ್ಯಮಗಳು ವರದಿ ಮಾಡಿವೆ. ಅತ್ಯಾಧುನಿಕ ವಾಯು ರಕ್ಷಣಾ ವ್ಯವಸ್ಥೆ ಹೊಂದಿದ್ದ AN/FPS-132 ರಾಡಾರ್ ವ್ಯವಸ್ಥೆಯು ಸಕಾಲದಲ್ಲಿ ಶತ್ರುಗಳ ಸಂಭಾವ್ಯ ದಾಳಿಯನ್ನ ಪತ್ತೆ ಮಾಡುತ್ತಿತ್ತು. ಅಮೆರಿಕ 2013 ರಲ್ಲಿ ಇದನ್ನ 1.1 ಶತಕೋಟಿ ಡಾಲರ್ ವೆಚ್ಚದಲ್ಲಿ ನಿರ್ಮಿಸಿ ಕತಾರ್‌ನಲ್ಲಿರುವ ಅಲ್ ಉದೈದ್ ವಾಯುನೆಲೆಯಲ್ಲಿ ಇರಿಸಿತ್ತು. ಖಂಡಾಂತರ ಕ್ಷಿಪಣಿಗಳನ್ನು ಪತ್ತೆಹಚ್ಚಲು ವಿನ್ಯಾಸಗೊಳಿಸಲಾದ ವಿಶಿಷ್ಟ ಸಾಧನ ಇದಾಗಿತ್ತು.

**5ನೇ ದಿನಕ್ಕೆ ಕಾಲಿಟ್ಟ ಯುದ್ಧ**

### ಟ್ರಂಪ್‌ಗೆ ಪೆಂಟಗನ್ ಎಚ್ಚರಿಕೆ

ಅಮೆರಿಕ, ಇಸ್ರೇಲ್ ಮತ್ತು ಇರಾನ್ ನಡುವಿನ ಸಂಘರ್ಷ ಮುಂದುವರಿದಿದೆ. ಒಂದು ವೇಳೆ ಅಮೆರಿಕವು ಇರಾನ್ ಮೇಲೆ ಇನ್ನು 10 ದಿನಗಳ ಕಾಲ ದಾಳಿಯನ್ನು ಮುಂದುವರಿಸಿದರೆ, ಅಮೆರಿಕದ ನಿರ್ಣಾಯಕ ಕ್ಷಿಪಣಿಗಳ ದಾಸ್ತಾನು ಕಡಿಮೆಯಾಗಬಹುದು ಎಂದು ಟ್ರಂಪ್‌ಗೆ ಪೆಂಟಗನ್ ಎಚ್ಚರಿಕೆ ನೀಡಿರುವುದಾಗಿ ವರದಿಯಾಗಿದೆ. ಟ್ರಂಪ್‌ಗೆ ಪೆಂಟಗನ್ ನೀಡಿರುವ ಕೆಲ ಸೋರಿಕೆಯಾಗಿವೆ ಎಂದು ಅಲ್‌ಜಜೀರಾ ವರದಿ ಮಾಡಿದೆ. ಆ ವರದಿ ಪ್ರಕಾರ, ದೀರ್ಘಕಾಲದ ಸಂಘರ್ಷದಿಂದ ಯುದ್ಧೋಪಕರಣಗಳ ದಾಸ್ತಾನು ಮರುಹೊಂದಿಸುವಿಕೆಗಾಗಿ ಹೆಚ್ಚಿನ ವೆಚ್ಚವನ್ನು ಭರಿಸಬೇಕಾಗುವ ಅಪಾಯವಿದೆ ಎಂದು ಪೆಂಟಗನ್ ಟ್ರಂಪ್‌ಗೆ ಮಾಹಿತಿ ನೀಡಿದೆ.

# ಜೆಜೆಎಂ ಸ್ಟಾಂಪ್ ಪೇಪರ್ ವಿಚಾರದಲ್ಲಿ ಹಗರಣ ಆರೋಪ

## ■ ಬಲಗಾರು ಗ್ರಾಮ ಪಂಚಾಯಿತಿಯಲ್ಲಿ 1.49 ಲಕ್ಷ ರೂ. ಬಿಲ್ ಆಗಿದೆ. ಆದರೆ ಬೋರ್ವೆಲ್ ಇಲ್ಲ ಎಂದು ಆಕ್ಷೇಪ

• ಉದಯವಾಹಿನಿ, ಬೆಂಗಳೂರು

ಜಲಜೀವನ್ ಮಿಷನ್ (ಜೆಜೆಎಂ) ಸ್ಟಾಂಪ್ ಪೇಪರ್ ವಿಚಾರದಲ್ಲಿ ಕ್ರಿಮಿನಲ್ ಚಟುವಟಿಕೆ ನಡೆದಿದೆ ಎಂದು ಬಿಜೆಪಿ ಆರೋಪ ಮಾಡಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಈ ಕುರಿತಾಗಿ ಸಿಬಿಐ ತನಿಖೆಗೆ ನೀಡಬೇಕು ಎಂದು ಮಾಜಿ ಸಚಿವ ಡಿ.ಎನ್.ಜೀವರಾಜ್ ಅವರು ಒತ್ತಾಯಿಸಿದ್ದಾರೆ.

ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಅವರು ಗಂಭೀರ ಆರೋಪ ಮಾಡಿದರು. ಶೃಂಗೇರಿ ಕ್ಷೇತ್ರದಲ್ಲಿ ಜೆಜೆಎಂ ಎಂಬುದು ಜಲಜೀವನ್ ಕಮಿಷನ್ ಆಗಿದೆ ಎಂದು ಅವರು ದಾಖಲೆಗಳ ಜೊತೆ ಆರೋಪಿಸಿದರು. 150 ಕೋಟಿ ರೂ.ಗಿಂತ ಹೆಚ್ಚು ಹಣವನ್ನು ಕೇಂದ್ರ ಸರ್ಕಾರ ನೀಡಿದೆ. ಆದರೆ, ಒಂದೇ ಒಂದು ಮನೆಗೆ ನೀರು ಲಭಿಸಿಲ್ಲ ಎಂದು ಆರೋಪಿಸಿದರು.

ಇದು ಜೆಜೆಎಂ ಸಂಬಂಧ ಸರಕಾರದ ಜೊತೆ ಅಂದರೆ ಜಿಲ್ಲಾ ಪಂಚಾಯಿತಿ ಜೊತೆ ಆದ ಒಪ್ಪಂದದ ಸ್ಟಾಂಪ್ ಪೇಪರನ್ನು ಪ್ರದರ್ಶಿಸಿದರು. 'ಐಎನ್‌ಕೆಎ 76845429815984 ಡಬ್ಲ್ಯು ನಂಬರಿನಲ್ಲಿ 2024ರಲ್ಲಿ ಒಂದೇ ದಿನ ಒಂದೇ ಸಮಯಕ್ಕೆ ಸ್ಟಾಂಪ್ ಪೇಪರ್ ಪಡೆದಂತೆ ಕಾಣುತ್ತಿದ್ದು, ಎನ್.ಆರ್.ಪುರ, ಕೊಪ್ಪ ತಾಲ್ಲೂಕಿನಲ್ಲಿ 9 ಒಪ್ಪಂದಗಳು



**ಜೆಜೆಎಂ ಅಡಿ ನೂರಾರು ಕೋಟಿಯ ಹಗರಣ**

ಆಗಿವೆ. ಇನ್ನೊಂದು ಸಂಖ್ಯೆಯ ಸ್ಟಾಂಪ್ ಪೇಪರಿನಲ್ಲಿ ಬೋರ್ವೆಲ್ ಕೊರೆಸಲು 11 ಒಪ್ಪಂದಗಳಾಗಿವೆ.

ಇದು ಸರ್ಕಾರದ ಜೊತೆಗಿನ ಒಪ್ಪಂದವಾಗಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವ ಪ್ರಿಯಾಂಕ್ ಖರ್ಗೆಯವರ ಕೆಳಗೆ ಬರುವ ಇಲಾಖೆ ಇದು ಎಂದು ವಿವರ ನೀಡಿದರು.

**ಪ್ರಕರಣ ಮುಚ್ಚಿ ಹಾಕಲು ಪ್ರಯತ್ನ:** ನಾವು ಪಡೆದ 30 ಒಪ್ಪಂದಗಳಲ್ಲಿ ಇದಿಷ್ಟು ಹಗರಣಗಳು ಪತ್ತೆಯಾಗಿದೆ. ಸ್ಟಾಂಪ್ ಪೇಪರ್ ನಕಲಿ ಆಗಿದೆ. ಸರಕಾರದ ಬೊಕ್ಕಸಕ್ಕೆ ಮೋಸ ಎನ್ನುವುದಕ್ಕಿಂತ ಇದು ಶೇ 100ರಷ್ಟು ಕ್ರಿಮಿನಲ್ ಚಟುವಟಿಕೆ ಎಂದು ಆರೋಪಿಸಿದರು. ಇದರ ಹಿಂದೆ ಶೃಂಗೇರಿ ಶಾಸಕರ ಎಡ- ಬಲ- ಹಾರ್ಟ್ ಎಲ್ಲರೂ ಇದ್ದಾರೆ. ಇದರಲ್ಲಿ ಶಾಸಕರ ಕೃಪಾಶೀರ್ವಾದದೊಂದಿಗೆ ಇಂಥ ಘಟನೆ ನಡೆದಿದೆ ಎಂದು ಜನರು ಮಾತನಾಡುತ್ತಿದ್ದಾರೆ ಎಂದು ದೂರಿದರು.

ಇನ್ನೊಂದು ಸ್ಟಾಂಪ್ ಪೇಪರ್ ಸ್ಕ್ಯಾನ್ ಮಾಡಿದರೆ ಇದು ಅಸಲಿ ಅಲ್ಲ ಎಂಬ ಅರ್ಥದ ಮಾಹಿತಿ ಬರುತ್ತಿದೆ. ಇದು ನಕಲಿಯೇ ಅಥವಾ ಅಸಲಿಯೇ ಎಂದು ತಿಳಿದಿಲ್ಲ ಎಂದು ಗಮನ ಸೆಳೆದರು. ಸ್ಥಳೀಯವಾಗಿ ತನಿಖೆ ನಡೆಸಿದರೆ ಇದನ್ನು ಮುಚ್ಚಿ ಹಾಕುವ ಸಾಧ್ಯತೆ ಇದೆ ಎಂದು ಹೇಳಿದರು.

ಕೊರೆಸಿದ ಬೋರ್ವೆಲ್ ಆಳದ ಕುರಿತು ತಿಳಿಯಲು ಮುಂದಾಗಿದ್ದೆ. ಇದಕ್ಕಾಗಿ ಕ್ಯಾಮರಾ ಒಳಬಿಟ್ಟು ಆಳ ತಿಳಿಯಲು ಸಾಧ್ಯವಿದೆ.

ಸ್ವಂತ ಖರ್ಚಿನಲ್ಲಿ 10 ಕೊಳವೆಬಾವಿ ಪರಿಶೀಲಿಸಿದ್ದು, ಕೊಪ್ಪ ತಾಲ್ಲೂಕು ಕಡೇಗದ್ದೆ ತಳಮಕ್ಕಿಯಲ್ಲಿ 228 ಅಡಿಯ ಆಳವಿರುವ ಕೊಳವೆಬಾವಿಗೆ 587 ಅಡಿಗೆ ಬಿಲ್ ಮಾಡಿದ್ದಾರೆ ಎಂದು ಟೀಕಿಸಿದರು. ಇನ್ನೊಂದು 260 ಅಡಿಯ ಕೊಳವೆಬಾವಿಗೆ 587 ಅಡಿಗೆ ಬಿಲ್ ಮಾಡಿದ್ದಾಗಿ ವಿವರಿಸಿದರು. ಇವುಗಳ ಹಣ ಪಾವತಿ ಆಗಿದೆ ಎಂದು ಆರೋಪಿಸಿದರು.

### ತೆಲಗಿ ಮಾದರಿಯಲ್ಲಿ ಅಕ್ರಮ

**ಹಿಂದೆ ಕರೀಂಲಾಲ್ ತೆಲಗಿ ಮೂಲಕ ಸ್ಟಾಂಪ್ ಪೇಪರ್ ಹಗರಣ ನಡೆದಿತ್ತು. ಹಿಂದೆ ಸ್ಟಾಂಪ್ ಪೇಪರ್ ಮೇಲ್ಭಾಗದಲ್ಲಿ ನೋಟಿನಂತೆ ಮಾತ್ರ ಇರುತ್ತಿತ್ತು. ನಕಲಿ ಸ್ಟಾಂಪ್ ಪೇಪರ್ ಮಾಡುವುದು ಸುಲಭವಿತ್ತು. ಸರಕಾರವು ಬಳಿಕ ಅದನ್ನು ಬದಲಿಸಿ, ನಂಬರ್, ಕ್ಯೂಆರ್ ಕೋಡ್ ಕೊಟ್ಟು ಇಸ್ಟಾಂಪಿಂಗ್ ಆ್ಯಪ್ ಬಿಡುಗಡೆ ಮಾಡಿದೆ. ಅದರಲ್ಲಿ ಸ್ಕ್ಯಾನ್ ಮಾಡಿದಾಗ ಖರೀದಿಸಿದವರ ಮಾಹಿತಿ, ನಂಬರ್ ಬರಬೇಕು. ಈ ಜೆಜೆಎಂನಡಿ ಕರೀಂಲಾಲ್ ಬುದ್ಧಿವಂತಿಕೆಗೆ ಮೀರಿದ ಹಗರಣ ನಡೆದಿದೆ ಎಂದು ಆರೋಪಿಸಿದರು.**

**ಈ ದಿನದ ದರ** ಪೆಟ್ರೋಲ್: 102.92 ₹/L ಡೀಸೆಲ್ : 91.52 ₹/L ಬಂಗಾರ: ₹16,451/Gram24ct ₹15,080/Gram22ct ಬೆಳ್ಳಿ: ₹285.00/Gram

# ಬೆಂಗಳೂರಿನ ಸುತ್ತಮುತ್ತಲಿನ ನಗರಗಳಿಗೂ ಬಿಎಂಟಿಸಿ ಬಸ್ ಸೇವೆ ವಿಸ್ತರಣೆ

• ಉದಯವಾಹಿನಿ, ಬೆಂಗಳೂರು



ಬೆಂಗಳೂರಿನಿಂದ ರಾಮನಗರ, ಚನ್ನಪಟ್ಟಣ, ಕನಕಪುರ, ಮಾಲೂರು ಸೇರಿದಂತೆ ಸುತ್ತಮುತ್ತಲಿನ ಪ್ರದೇಶಗಳಿಗೆ ಹಂತ-ಹಂತವಾಗಿ ಬಿಎಂಟಿಸಿ ಬಸ್ ಸೇವೆಯನ್ನು ಆರಂಭಿಸಲಾಗುತ್ತಿದೆ. ಬುಧವಾರ ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿರುವ ರಾಮನಗರಕ್ಕೆ ಬೆಂಗಳೂರಿನಿಂದ ಬಿಎಂಟಿಸಿ ಬಸ್ ಸಂಚಾರಕ್ಕೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಚಾಲನೆ ನೀಡಿದರು. ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಮೊದಲು ಬೆಂಗಳೂರು ಪಾಲಿಕೆಯಿಂದ 25ಕಿ.ಮೀ. ಅಂತರದವರೆಗೆ ಬಿಎಂಟಿಸಿ ಸಂಚಾರಕ್ಕೆ ಅನುಮತಿಸಲಾಗಿತ್ತು. ಅನಂತರ ಬಿಬಿಎಂಪಿಯ ವ್ಯಾಪ್ತಿಯ 40ಕಿ.ಮೀ. ಪರಿಧಿಯಲ್ಲಿ ಬಿಎಂಟಿಸಿ ಸಂಚರಿಸಲು ಅವಕಾಶ ನೀಡಲು ಮಂಡಳಿಯಲ್ಲಿ ಚರ್ಚಿಸಲಾಗಿತ್ತು. ಇದನ್ನು ಈ ಕರಡು ಅಧಿಸೂಚನೆಯನ್ನು ಸಾರ್ವಜನಿಕರ ಆಕ್ಷೇಪಣೆಗೆ ಪ್ರಕಟಿಸಲಾಗಿತ್ತು. ಆಕ್ಷೇಪಣೆಗಳನ್ನು ಪರಿಶೀಲಿಸಿದ ಬಳಿಕ ಅಂತಿಮ ಅಧಿಸೂಚನೆ ಹೊರಡಿಸಿದ್ದು, ಅದರಂತೆ ಇಂದು ರಾಮನಗರಕ್ಕೆ ಬಿಎಂಟಿಸಿ ಬಸ್ ಸಂಚಾರವನ್ನು ಆರಂಭಿಸಲಾಗಿದೆ ಎಂದು ತಿಳಿಸಿದರು. 6 ಬಸ್‌ಗಳು ಪ್ರತಿ ದಿನ 36 ಟ್ರಿಪ್‌ಗಳಲ್ಲಿ ಬೆಂಗಳೂರು ಮತ್ತು ರಾಮನಗರ ನಡುವೆ ಸಂಚರಿಸಲಿವೆ. ಮುಂದಿನ ವಾರದಿಂದ ರಾಮನಗರದಿಂದಲೇ ಚನ್ನಪಟ್ಟಣಕ್ಕೂ ಬಿಎಂಟಿಸಿ ಸಂಚಾರವನ್ನು ವಿಸ್ತರಣೆ ಮಾಡಲಾಗುತ್ತದೆ ಎಂದು ವಿವರಿಸಿದರು. ಬೆಂಗಳೂರಿನ ಬನಶಂಕರಿಯಿಂದ ಕನಕಪುರಕ್ಕೆ 8 ಬಸ್‌ಗಳು 48 ಟ್ರಿಪ್‌ಗಳಲ್ಲಿ ಪ್ರತಿದಿನ ಸಂಚರಿಸಲಿವೆ. ಬಿಡದಿಗೆ 12 ಬಸ್‌ಗಳು 78 ಟ್ರಿಪ್ ಸಾರಿಗೆ ಸೇವೆ ಒದಗಿಸುತ್ತಿವೆ. ಬೆಂಗಳೂರು ದಕ್ಷಿಣ ಜಿಲ್ಲೆಯ ಗ್ರಾಮೀಣ ಭಾಗಕ್ಕೂ ಬೇಡಿಕೆಯನ್ನು ಆದರಿಸಿ ಬಿಎಂಟಿಸಿ ಸಂಚಾರವನ್ನು ವಿಸ್ತರಣೆ ಮಾಡಲಾಗುವುದು ಎಂದು ಹೇಳಿದರು. ಬೆಂಗಳೂರು ಉತ್ತರ ಜಿಲ್ಲೆಯಲ್ಲಿ ಈಗಾಗಲೇ ದೊಡ್ಡಬಳ್ಳಾಪುರ, ದೇವನಹಳ್ಳಿಗೆ ಬಿಎಂಟಿಸಿ ಬಸ್ ಸಂಚಾರ ಇದೆ. ಕೋಲಾರ ಜಿಲ್ಲೆಯ ಮಾಲೂರು ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಕೇಂದ್ರಕ್ಕೂ ಬಸ್ ಸಂಚಾರವನ್ನು ಬಹುಶಃ ಮಾ.9ರಂದು ಆರಂಭಿಸಲಾಗುವುದು.

ಬೆಂಗಳೂರು ಉತ್ತರ ಜಿಲ್ಲೆಯ ಜಿಲ್ಲಾ ಉಸ್ತುವಾರಿ ಸಚಿವರಾಗಿರುವ ಕೆ.ಎಚ್. ಮುನಿಯಪ್ಪ ಅವರಿಗೆ ವಿಧಾನಮಂಡಲ ಅಧಿವೇಶನದಲ್ಲಿ ಪ್ರಶ್ನೋತ್ತರದ ಕಲಾಪಗಳು ಇಲ್ಲದೇ ಇದ್ದರೆ ಬಿಎಂಟಿಸಿ ಬಸ್ ಸಂಚಾರದ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ ಎಂದು ಹೇಳಿದರು. ಮಾಗಡಿ ತಾಲ್ಲೂಕಿಗೆ ಈಗಾಗಲೆ 39 ಬಸ್‌ಗಳು ಸಂಚರಿಸುತ್ತಿವೆ. ಬೆಂಗಳೂರಿನಿಂದ 40ಕಿ.ಮೀ. ವ್ಯಾಪ್ತಿಯಲ್ಲಿ ಬಿಎಂಟಿಸಿ ಸಂಚಾರಕ್ಕೆ ಅವಕಾಶ ಸಿಕ್ಕಿರುವುದರಿಂದ ಸಾರ್ವಜನಿಕರಿಗೂ ಅನುಕೂಲವಾಗುತ್ತಿದೆ ಮತ್ತು ಬೆಂಗಳೂರಿನ ಒತ್ತಡ ಕೂಡ ಕಡಿಮೆಯಾಗುವ ಅಂದಾಜಿದೆ ಎಂದು ಹೇಳಿದರು.

## ವಿಶೇಷಚೇತನ ವ್ಯಕ್ತಿಗಳಿಗೆ ಕೌಶಲ್ಯ ತರಬೇತಿ 100 ವಿಶೇಷಚೇತನರಿಗೆ ಪದವಿ ಪ್ರಧಾನ

• ಉದಯವಾಹಿನಿ, ಬೆಂಗಳೂರು

ವಿಶೇಷಚೇತನರನ್ನು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿ ಮಾಡಲು ಡಿಯಾಜಿಯೊ ಇಂಡಿಯಾ, ಅಂಗವಿಕಲ ವ್ಯಕ್ತಿಗಳ ಕೌಶಲ್ಯ ಮಂಡಳಿ ಸಹಭಾಗಿತ್ವದಲ್ಲಿ ಕೌಶಲ್ಯ ತರಬೇತಿ ನೀಡುತ್ತಿದ್ದು, ಈ ವರ್ಷದಲ್ಲಿ 100 ವಿಶೇಷಚೇತನರು ಪದವಿ ಪಡೆದುಕೊಂಡು ಉತ್ತೀರ್ಣರಾಗಿದ್ದಾರೆ. ನಗರದಲ್ಲಿ ನಡೆದ ಘಟಿಕೋತ್ಸವದಲ್ಲಿ ಉತ್ತೀರ್ಣ ವಿಶೇಷಚೇತನರಿಗೆ ಪದವಿ ಪ್ರದಾನ ಮಾಡಲಾಯಿತು. ಈ ವೇಳೆ ಮಾತನಾಡಿದ ಡಿಯಾಜಿಯೊ ಇಂಡಿಯಾದ ಮುಖ್ಯ ಹಣಕಾಸು ಅಧಿಕಾರಿ ಪ್ರದೀಪ್, ದೈಹಿಕ ವೈಖಲ್ಯ ಇರುವವರಲ್ಲೂ ಕೌಶಲ್ಯವಿರುತ್ತದೆ ಅವರಿಗೆ ಸೂಕ್ತ ತರಬೇತಿ ನೀಡಿದರೆ, ತಮ್ಮ ಸ್ವಪ್ರಯತ್ನದಿಂದಲೇ ಆರ್ಥಿಕವಾಗಿ ಸ್ವಾವಲಂಬಿಗಳಾಗಬಹುದು, ಇದಕ್ಕೆ ಅವರಿಗೂ ಸೂಕ್ತ ಕೌಶಲ್ಯ ತರಬೇತಿ ನೀಡುವುದು ಅನಿವಾರ್ಯ, ಹೀಗಾಗಿ ಕೌಶಲ್ಯ ಮಂಡಳಿಯ ಸಹಯೋಗದಲ್ಲಿ ಬೆಂಗಳೂರಿನಲ್ಲಿ ಆಸಕ್ತ ವಿಕಲಚೇತರಿಗೆ ಎಫ್‌ಬಿ ಸರ್ವಿಸಸ್, ಹಾಸ್ಪಟಾಲಿಸಿ ಆಪರೇಷನ್ಸ್, ಕಸ್ಟಮರ್ ಸರ್ವಿಸ್, ಸಾಫ್ಟ್ ಸ್ಕಿಲ್ಸ್ ಸೇರಿದಂತೆ ಹಲವು ರೀತಿಯ ತರಬೇತಿ ನೀಡಲಾಗುತ್ತಿದೆ.

ಇವರಿಗೆ ಅರ್ಹ ತರಬೇತುದಾರರಿಂದ ತರಬೇತಿ ಕೊಡಿಸಲಾಗುತ್ತಿದೆ. ಈ ಶೈಕ್ಷಣಿಕ ಸಾಲಿನಲ್ಲಿ 100 ವಿಶೇಷಚೇತನರಿಗೆ ಪದವಿ ವಿತರಿಸಲಾಗಿದ್ದು, ಭವಿಷ್ಯದಲ್ಲಿ ಇನ್ನಷ್ಟು ವಿಶೇಷಚೇತನರು ಇದರ ಪ್ರಯೋಜನ ಪಡೆದುಕೊಂಡು ತಮ್ಮ ಸ್ವಶಕ್ತಿಯಿಂದಲೇ ಜೀವನ ನಡೆಸುವ ಸಾಮರ್ಥ್ಯ ನಿರ್ಮಿಸಿಕೊಡಲಾಗುವುದು ಎಂದು ಹೇಳಿದರು. ಭಾರತಾದ್ಯಂತ ಈ ರೀತಿಯ ತರಬೇತಿ ನೀಡುತ್ತಾ ಬರಲಾಗಿದ್ದು, ಈ ಕೇಂದ್ರದಲ್ಲಿ ತರಬೇತಿ ಪಡೆದು ಉತ್ತೀರ್ಣರಾದ ವಿಕಲಚೇತನರಿಗೆ ಉದ್ಯೋಗ ಖಾತ್ರಿಯನ್ನೂ ನೀಡಲಾಗುತ್ತಿದೆ. ಇದಕ್ಕಾಗಿ ಸಾಕಷ್ಟು ಸಂಸ್ಥೆಗಳೊಂದಿಗೆ ಒಪ್ಪಂದ ಮಾಡಿಕೊಂಡಿದ್ದು, ಅರ್ಹ ಪದವೀಧರರಿಗೆ ಉದ್ಯೋಗ ಕೂಡ ದೊರೆಯಲಿದೆ ಎಂದರು.

## ಪರೀಕ್ಷೆಗೆ ಹೆದರಿ ಮನೆ ಬಿಟ್ಟು ಹೋದ ಇಬ್ಬರು ವಿದ್ಯಾರ್ಥಿನಿಯರು, ಆತಂಕದಲ್ಲಿ ಪೋಷಕರು

• ಉದಯವಾಹಿನಿ, ಬೆಂಗಳೂರು

ಈಗ ಪರೀಕ್ಷಾ ಸಮಯ ನಗರದ ಇಬ್ಬರು ಪಿಯುಸಿ ವಿದ್ಯಾರ್ಥಿನಿಯರು ಪರೀಕ್ಷೆಗೆ ಹೆದರಿ ಮನೆ ಬಿಟ್ಟು ಹೋಗಿದ್ದು, ಪೋಷಕರು ಆತಂಕಗೊಂಡಿದ್ದಾರೆ. ವಿದ್ಯಾರಣ್ಯಪುರದ ಎಂಎಸ್ ಪಾಳ್ಯದ ನಿವಾಸಿ ತನಿಷ್ಕಾ (19) ದ್ವಿತಿಯ ಪಿಯುಸಿ ವ್ಯಾಸಂಗ ಮಾಡುತ್ತಿದ್ದು ಜ.31 ರಂದು ಯಲಹಂಕದಲ್ಲಿರುವ ಕಾಲೇಜಿಗೆ ಹೋದವರು ನಾಪತ್ತೆಯಾಗಿದ್ದಾಳೆ ಈಕೆಯೊಂದಿಗೆ ಪ್ರಥಮ ಪಿಯುಸಿ ವ್ಯಾಸಂಗ ಮಾಡುತ್ತಿರುವ ತೇಜಸ್ವಿನಿ (18) ಸಹ ಹೋಗಿದ್ದು, ಇವರಿಬ್ಬರು ಇದುವರೆಗೂ ಮನೆಗೆ ಹಿಂದಿರುಗಿಲ್ಲ. ತನಿಷ್ಕಾ ಕಳೆದ ವರ್ಷ ಪರೀಕ್ಷೆಯಿಂದ ತಪ್ಪಿಸಿಕೊಳ್ಳಲು ಕೈಗೆ ಗಾಯ ಮಾಡಿಕೊಂಡಿದ್ದಳು ಎಂಬುವುದು ಗೊತ್ತಾಗಿದೆ. ಈ ಭಾರಿಯೂ ಪರೀಕ್ಷೆಗೆ ಹೆದರಿ ಮನೆ ಬಿಟ್ಟು ಹೋಗಿರಬಹುದೆಂದು ಆಕೆಯ ಕುಟುಂಬಸ್ಥರು ಶಂಕೆ ವ್ಯಕ್ತಪಡಿಸಿದ್ದಾರೆ.ಈ ಇಬ್ಬರು ವಿದ್ಯಾರ್ಥಿನಿಯರು ತಮ್ಮ ಮೊಬೈಲ್‌ಗಳನ್ನು ಮನೆಯಲ್ಲೇ ಬಿಟ್ಟು ಹೋಗಿರುವುದರಿಂದ ಅವರ ಹುಡುಕಾಟ ಪೊಲೀಸರಿಗೆ ತಲೆ ನೋವಾಗಿ ಪರಿಣಮಿಸಿದೆ. ಅವರು ಆಧಾರಕಾರ್ಡ್, ಕಾಲೇಜು ಬ್ಯಾಗ್ ಮಾತ್ರ ತೆಗೆದುಕೊಂಡು ಹೋಗಿದ್ದಾರೆ.ತಮ್ಮ ಮಕ್ಕಳು ಕಾಣೆಯಾಗಿರುವ ಬಗ್ಗೆ ವಿದ್ಯಾರಣ್ಯಪುರ ಠಾಣೆ ಪೊಲೀಸರಿಗೆ ಅವರ ಪೋಷಕರು ದೂರು ನೀಡಿದ್ದಾರೆ. 15 ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿ ನಾಲ್ಕು ತಂಡಗಳನ್ನಾಗಿ ಮಾಡಿಕೊಂಡು ರಾಜ್ಯದ ವಿವಿಧ ಭಾಗಗಳಲ್ಲಿ ಈ ಇಬ್ಬರು ವಿದ್ಯಾರ್ಥಿನಿಯರಿಗಾಗಿ ಹುಡುಕಾಟ ನಡೆಸುತ್ತಿದ್ದಾರೆ. ಈ ತಂಡಗಳು ಮಲೈ ಮಹದೇಶ್ವರ, ಕೋಲಾರ, ಮೈಸೂರು, ಮಂಗಳೂರು ಸೇರಿದಂತೆ ವಿವಿಧ ಭಾಗಗಳಲ್ಲಿ ಹುಡುಕಾಡುತ್ತಿದ್ದಾರೆ. ಈ ವಿದ್ಯಾರ್ಥಿನಿಯರು ಉಚಿತ ಬಸ್ ಪ್ರಯಾಣ ಸೌಲಭ್ಯವನ್ನು ಬಳಸಿಕೊಂಡು ಸುತ್ತಾಡುತ್ತಿರ ಬಹುದೆಂಬ ಅನುಮಾನ ವ್ಯಕ್ತವಾಗಿದೆ. ಈ ನಡುವೆ ಪೋಷಕರು ಎಲ್ಲೇ ಇದ್ದರೂ ಮನೆಗೆ ಸುರಕ್ಷಿತವಾಗಿ ಹಿಂದಿರುಗುವಂತೆ ಅಳಲು ತೋಡಿಕೊಂಡಿದ್ದಾರೆ.

## ಆಂಧ್ರದಲ್ಲಿ ಭೀಕರ ರಸ್ತೆ ಅಪಘಾತ, ಬೆಂಗಳೂರಿನ ಐವರ ಸಾವು

• ಉದಯವಾಹಿನಿ, ಬೆಂಗಳೂರು

ಮುಂದೆ ಹೋಗುತ್ತಿದ್ದ ಲಾರಿಗೆ ಹಿಂದಿನಿಂದ ಕಾರು ಡಿಕ್ಕಿ ಹೊಡೆದ ಪರಿಣಾಮ ನಗರದ ಮೂವರು ಮಹಿಳೆಯರು ಸೇರಿದಂತೆ ಐದು ಮಂದಿ ಸ್ಥಳದಲ್ಲೇ ದಾರುಣವಾಗಿ ಸಾವನ್ನಪ್ಪಿರುವ ಘಟನೆ ಆಂಧ್ರ ಪ್ರದೇಶದ ಪಲಮನೇರು ಬಳಿ ಬುಧವಾರ ಬೆಳಗ್ಗೆ ನಡೆದಿದೆ. ಮೃತಪಟ್ಟವರನ್ನು ಮೋಹನ್‌ರಾವ್, ನಾಗರಾಜರಾವ್, ಕುಸುಮಾ, ಪೂಜಾ ಮತ್ತು ಜಯಂತಿ ಎಂದು ಗುರುತಿಸಲಾಗಿದೆ. ಮೃತರ ಪೈಕಿ ಒಬ್ಬರು ರಾಜಾಜಿನಗರದವರು ಎಂದು ತಿಳಿದುಬಂದಿದೆ. ಎರಡು ಕುಟುಂಬಗಳ ಐದು ಮಂದಿ ಕಾರಿನಲ್ಲಿ ನಗರದಿಂದ ತಿರುಪತಿಗೆ ಹೋಗುತ್ತಿದ್ದರು.ಬುಧವಾರ ಬೆಳಿಗ್ಗೆ 9 ಗಂಟೆ ಸುಮಾರಿಗೆ ಇವರ ಕಾರು ಪಲಮನೇರುವಿನ ಗಂಗವರಂನ ಪಲ್ಲೇರುಜುಲು ರೆಸ್ಟೋರೆಂಟ್ ಬಳಿ ತೆರಳುತ್ತಿದ್ದಾಗ ಮುಂದೆ ಹೋಗುತ್ತಿದ್ದ ಲಾರಿಗೆ ಹಿಂದಿನಿಂದ ಡಿಕ್ಕಿ ಹೊಡೆದ ಪರಿಣಾಮ ಈ ಭೀಕರ ಅಪಘಾತ ಸಂಭವಿಸಿದೆ. ಸುದ್ದಿ ತಿಳಿದು ಗಂಗವರಂ ಠಾಣೆ ಪೊಲೀಸರು ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿದ್ದಾರೆ. ಪೊಲೀಸರ ಪ್ರಕಾರ, ಅತಿ ವೇಗ, ಚಾಲಕ ನಿದ್ರಾಹೀನತೆಯಿಂದ ಅಪಘಾತ ಸಂಭವಿಸಿರಬಹುದು ಎಂದು ಶಂಕಿಸಲಾಗಿದೆ.ಏತನ್ಮಧ್ಯೆ, ಮೃತರ ಸಂಬಂಧಿಕರಿಗೆ ಮಾಹಿತಿ ನೀಡಲಾಗಿದ್ದು, ಐವರ ಮೃತದೇಹಗಳನ್ನು ಆಸ್ಪತ್ರೆಗೆ ರವಾನಿಸಲಾಗಿದೆ. ಅಪಘಾತದಿಂದಾಗಿ ಈ ಮಾರ್ಗದಲ್ಲಿ ಕೆಲಕಾಲ ಸಂಚಾರ ಅಸ್ತವ್ಯಸ್ತವಾಗಿತ್ತು. ಖುದ್ದು ಪೊಲೀಸರು ಸ್ಥಳದಲ್ಲಿದ್ದು ಕ್ರೇನ್ ಮೂಲಕ ಕಾರನ್ನು ರಸ್ತೆ ಪಕ್ಕಕ್ಕೆ ತೆರವುಗೊಳಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟಿದ್ದಾರೆ.

## ಹಲವು ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಚಿಲ್ಲರೆ ಮದ್ಯ ಮಾರಾಟಗಾರರ ಪ್ರತಿಭಟನೆ

• ಉದಯವಾಹಿನಿ, ಬೆಂಗಳೂರು

ಕಳೆದ ಹಲವಾರು ದಿನಗಳಿಂದ ಬಾಕಿ ಇರುವ ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿ ಕರ್ನಾಟಕ ಕರ್ನಾಟಕದ ಚಿಲ್ಲರೆ ಮದ್ಯ ಮಾರಾಟಗಾರರ ಸಂಘವು ಪ್ರತಿಭಟನೆ ನಡೆಸಲು ಮುಂದಾಗಿದೆ. ಹೀಗಾಗಿ ರಾಜಧಾನಿ ಬೆಂಗಳೂರು ಸೇರಿದಂತೆ ರಾಜ್ಯಾದ್ಯಂತ ಬಾರ್ ಅಂಗಡಿಗಳು ತೆರೆಯುವುದು ಅನುಮಾನವಾಗಿದೆ. ಬೆಳಗ್ಗೆ 11 ಗಂಟೆಯಿಂದ ನಗರದ ಫ್ರೀಡಂಪಾರ್ಕ್‌ನಲ್ಲಿ ಸಂಘದ ಪದಾಧಿಕಾರಿಗಳು ಸರ್ಕಾರದ ಗಮನಸೆಳೆಯಲು ಬೃಹತ್ ಪ್ರತಿಭಟನೆ ನಡೆಸುತ್ತಿದ್ದು , ರಾಜ್ಯದ ಎಲ್ಲಾ ಜಿಲ್ಲಾ ತಾಲ್ಲೂಕು, ಹೋಬಳಿ ಮಟ್ಟದಿಂದಲೂ ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಲಿದ್ದಾರೆ. ಮದ್ಯದ ಅಂಗಡಿಗಳು ಎಂದಿನಂತೆ ಕಾರ್ಯ ನಿರ್ವಹಿಸುವ ಕುರಿತು ಸಂಘವು ಸ್ಪಷ್ಟನೆ ನೀಡಿಲ್ಲ. ಆದರೆ ಬಾರ್ ಸೇರಿದಂತೆ ಎಲ್ಲಾ ಮದ್ಯ ಮಾರಾಟ ಕೇಂದ್ರಗಳನ್ನು ಮುಚ್ಚಿಯೇ ಪ್ರತಿಭಟನೆ ನಡೆಸಿ ಸರ್ಕಾರದ ಗಮನಸೆಳೆಯುವುದು ಅವರ ಉದ್ದೇಶವಾಗಿದೆ. ಶುಕ್ರವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 2026-27ನೇ ಸಾಲಿನ ಆಯವ್ಯಯ ಮಂಡಿಸಲಿದ್ದು, ಸಂಘದ ಬಹುದಿನಗಳ ಬೇಡಿಕೆಯನ್ನು ಈಡೇರಿಸಬೇಕೆಂಬುದು ಕರ್ನಾಟಕದ ಚಿಲ್ಲರೆ ಮದ್ಯ ಮಾರಾಟಗಾರ ಸಂಘದ ಒತ್ತಾಯವಾಗಿದೆ. ಸರ್ಕಾರ, ಅಬಕಾರಿ ಇಲಾಖೆಯ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಸಂಘದ ಪದಾಧಿಕಾರಿಗಳು, ಇಲಾಖೆಯು ಸರ್ಕಾರಕ್ಕೆ ಸುಳ್ಳು ಮಾಹಿತಿ ನೀಡಿ 579 ಮದ್ಯ ಮಾರಾಟ ಸನ್ನದುಗಳನ್ನು ಹರಾಜು ಮಾಡಲು ಶಿಫಾರಸು ಮಾಡಿದೆ. ಇವುಗಳಲ್ಲಿ ಚಿಲ್ಲರೆ ಮದ್ಯದಂಗಡಿಗಳು, ಬಾರ್ ಮತ್ತು ರೆಸ್ಟೋರೆಂಟ್‌ಗಳು ಸೇರಿವೆ. ಈ ಸನ್ನದುಗಳು ದೀರ್ಘಕಾಲದಿಂದ ನವೀಕರಣವಾಗದೆ ಅಥವಾ ಅಂಗಡಿಗಳು ತೆರೆಯದೇ ಇದ್ದರೂ, ಅವುಗಳನ್ನು ಹೊಸದಾಗಿ ಹರಾಜು ಹಾಕಿ ಹಣ ಸಂಗ್ರಹಿಸುವ ಯೋಜನೆ ಇದೆ ಎಂದು ಆರೋಪಿಸಿದ್ದಾರೆ.

# 20 ಲಕ್ಷ ಅನರ್ಹ ಫಲಾನುಭವಿಗಳಿಗೆ ಗೇಟ್ ಪಾಸ್

### ಅನರ್ಹರಿಗೆ ಸರಕಾರದ ಸವಲತ್ತು ಸಿಗದಂತೆ ನೋಡಿಕೊಳ್ಳಬೇಕು ಎಂದು ಕೇಂದ್ರ ಸರ್ಕಾರ ಎಲ್ಲಾ ರಾಜ್ಯಗಳಿಗೆ ಕಟ್ಟುನಿಟ್ಟಿನ ಸೂಚನೆ

• ಉದಯವಹಿನಿ,ಬೆಂಗಳೂರು



ಅರ್ಹತೆ ಇಲ್ಲದಿದ್ದರೂ ಸರಕಾರದ ಫಲಾನುಭವಿಗಳ ಪಟ್ಟಿಗೆ ಒಳನುಸುಳಿ ಆಕ್ರಮವಾಗಿ ಸವಲತ್ತು ಪಡೆಯುತ್ತಿದ್ದ ರಾಜ್ಯದ ಸುಮಾರು 20 ಲಕ್ಷದಷ್ಟು ಅನರ್ಹ ಫಲಾನುಭವಿಗಳನ್ನು ಆಹಾರ ಮತ್ತು ನಾಗರೀಕ ಪೂರೈಕೆ ಇಲಾಖೆ ರದ್ದುಪಡಿಸಿ ಸರ್ಕಾರದ 'ಅನ್ನಭಾಗ್ಯ' ಯೋಜನೆಯಿಂದ ಗೇಟ್ ಪಾಸ್ ನೀಡಲಾಗಿದೆ. ಬರುವ ದಿನಗಳಲ್ಲಿ ಇದರ ಸಂಖ್ಯೆ ಇನ್ನಷ್ಟು ಹೆಚ್ಚಾಗುವ ಸಾಧ್ಯತೆ ಇದ್ದು ಅರ್ಹರನ್ನು ಹೊರೆತುಪಡಿಸಿ ಯಾವುದೇ ಕಾರಣಕ್ಕೂ ಅನರ್ಹರಿಗೆ ಸರಕಾರದ ಸವಲತ್ತು ಸಿಗದಂತೆ ನೋಡಿಕೊಳ್ಳಬೇಕು ಎಂದು ಕೇಂದ್ರ ಸರ್ಕಾರ ಎಲ್ಲಾ ರಾಜ್ಯಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದೆ. ಸರಕಾರದ ಸವಲತ್ತುಗಳು ನಿಜವಾದ ಫಲಾನುಭವಿಗಳಿಗೆ ತಲುಪಬೇಕು. ಆಗಲೇ ಆ ಯೋಜನೆಯ ಸದುದ್ದೇಶ ಈಡೇರುತ್ತದೆ. ಓಟ್ ಬ್ಯಾಂಕ್‌ಗಾಗಿ ಅನರ್ಹರನ್ನು ಸೇರ್ಪಡೆ ಮಾಡಬೇಡಿ ಎಂದು ಸೂಚನೆ ನೀಡಿತ್ತು.

ರಾಜ್ಯದಲ್ಲಿ ಹೆಚ್ಚಾಗಿದ್ದ ನಕಲಿ ಫಲಾನುಭವಿಗಳನ್ನು ತೆಗೆದುಹಾಕಲು ಕೇಂದ್ರ ಸರ್ಕಾರ 13 ಲಕ್ಷ ಕಾರ್ಡ್ ಪರಿಷ್ಕರಣೆ ಪಟ್ಟಿ ಮಾಡಿತ್ತು. ಅದರಲ್ಲಿ ರಾಜ್ಯ ಸರ್ಕಾರ 7 ಲಕ್ಷ ಕಾರ್ಡ್ ರದ್ದು ಮಾಡಲು ಪ್ರತ್ಯೇಕ ಪಟ್ಟಿ ಮಾಡಿತ್ತು. ಇದೀಗ ಆಹಾರ ಇಲಾಖೆ ಇಲ್ಲಿಯವರೆಗೆ20 ಲಕ್ಷ ಬಿಪಿಎಲ್ ಕಾರ್ಡ್ ರದ್ದುಪಡಿಸಿದೆ. ಜೊತೆಗೆ ಬಿಪಿಎಲ್ ನಿಂದ ಎಪಿಎಲ್‌ಗೆ 14.5 ಲಕ್ಷ ಕಾರ್ಡ್‌ಗಳನ್ನ ವರ್ಗಾವಣೆ ಮಾಡಿದೆ. ಕೇಂದ್ರ ಸರ್ಕಾರದ ಮಾನದಂಡಗಳ ಪ್ರಕಾರ ರಾಜ್ಯದಲ್ಲಿ ಸುಮಾರು 7.76 ಲಕ್ಷ ಪಡಿತರ ಚೀಟಿಗಳು ಅನರ್ಹ ಎಂದು ಗುರುತಿಸಲಾಗಿದೆ. ಇದಲ್ಲದೆ, ರಾಜ್ಯ ಸರ್ಕಾರದ ಕುಟುಂಬ ತಂತ್ರಾಂಶದ ದತ್ತಾಂಶದ ಅನ್ವಯ 13.87 ಲಕ್ಷಕ್ಕೂ ಅಧಿಕ ಕಾರ್ಡ್‌ಗಳು ಅನರ್ಹರ ಕೈಯಲ್ಲಿರುವುದು ಪತ್ತೆಯಾಗಿದೆ. ಈ ಹಿನ್ನೆಲೆಯಲ್ಲಿ, ಇಲಾಖೆಯು ಹಂತ ಹಂತವಾಗಿ ಅನರ್ಹ ಕಾರ್ಡ್ ಗಳನ್ನು ರದ್ದುಪಡಿಸುವ ಪ್ರಕ್ರಿಯೆಯನ್ನು ಚುರುಕುಗೊಳಿಸಿದೆ.ಇದರಲ್ಲಿ 9,826 ಎಪಿಎಲ್ ಕಾರ್ಡ್ ಅಮಾನತುಗೊಂಡಿದ್ದರೆ. 34,617 ಬಿಪಿಎಲ್ ಕಾರ್ಡ್ ರದ್ದಾಗಿದೆ.

ಇನ್ನುಳಿದ ನಾಲ್ಕು ಲಕ್ಷ ಕಾರ್ಡ್‌ಗಳು ಮರು ಪರಿಶೀಲನೆಯಲ್ಲಿ ರದ್ದುಗೊಂಡಿದೆ. ಮರು ಪರಿಶೀಲನೆಯಲ್ಲಿಯೂ 4 ಲಕ್ಷ ಕಾರ್ಡ್‌ಗಳನ್ನ ಬಿಪಿಎಲ್ ನಿಂದ ಎಪಿಎಲ್ ಗೆ ವರ್ಗಾವಣೆ ಮಾಡಲಾಗಿದೆ. ಬಿಪಿಎಲ್ ಕಾರ್ಡ್ ಪರಿಶೀಲನೆಯಲ್ಲಿ ಬಳ್ಳಾರಿಯಲ್ಲಿ 1 ಲಕ್ಷ 91 ಸಾವಿರ ಬಿಪಿಎಲ್ ಕಾರ್ಡ್ ರದ್ದು, ಎಪಿಎಲ್ ಗೆ ಶಿಫ್ಟ್ ಆಗಿದೆ.ವಿಜಯಪುರ ಜಿಲ್ಲೆ 95,037 ಬಿಪಿಎಲ್ ಕಾರ್ಡ್ ರದ್ದುಗೊಳಿಸಿ ಎಪಿಎಲ್ ಗೆ ವರ್ಗಾಯಿಸಲಾಗಿದೆ. ಕೊಡಗು ಜಿಲ್ಲೆ 94,423, ಬೆಂಗಳೂರಿನಲ್ಲಿ ಎರಡು ಲಕ್ಷ ಬಿಪಿಎಲ್ ಗೆ ಕಾರ್ಡ್ ರದ್ದುಗೊಳಿಸಲಾಗಿದೆ.ಕೇಂದ್ರ ಸರ್ಕಾರ 12 ಮಾನದಂಡ, ರಾಜ್ಯ ಸರ್ಕಾರ 4 ಮಾನದಂಡ ಆಧರಿಸಿ ಕಾರ್ಡ್ ಗಳನ್ನ ಪಟ್ಟಿಯಿಂದ ಕೈ ಬಿಡಲಾಗಿದೆ.

**ಅರ್ಹರಿಗೆ ಇದೆ ಅವಕಾಶ:** ಈ ಪ್ರಕ್ರಿಯೆಯಲ್ಲಿ ಕೆಲವೊಮ್ಮೆ ಅರ್ಹ ಫಲಾನುಭವಿಗಳ ಕಾರ್ಡ್‌ಗಳು ಕೂಡ ರದ್ದಾಗುವ ಸಾಧ್ಯತೆ ಇರುತ್ತದೆ. ಅಂತಹ ಸಂದರ್ಭದಲ್ಲಿ ಆತಂಕಪಡುವ ಅಗತ್ಯವಿಲ್ಲ. ತಮ್ಮ ಕಾರ್ಡ್ ಅರ್ಹತೆಯಿದ್ದರೂ ರದ್ದಾಗಿದ್ದರೆ, ಅಂತಹ ನಾಗರಿಕರು 45 ದಿನಗಳ ಒಳಗೆ ಅಗತ್ಯ ದಾಖಲೆಗಳೊಂದಿಗೆ ತಮ್ಮ ತಾಲ್ಲೂಕಿನ ತಹಶೀಲ್ದಾರ್ ಕಚೇರಿಗೆ ಮನವಿ ಸಲ್ಲಿಸಬಹುದು. ಅಧಿಕಾರಿಗಳು ದಾಖಲೆಗಳನ್ನು ಪರಿಶೀಲಿಸಿ, ಅರ್ಹತೆ ಖಚಿತಪಟ್ಟಲ್ಲಿ ಬಿಪಿಎಲ್ ಕಾರ್ಡ್ ಅನ್ನು ಮರುಸ್ಥಾಪನೆ ಮಾಡಲಿದ್ದಾರೆ ಎಂದು ಇಲಾಖೆ ಸ್ಪಷ್ಟಪಡಿಸಿದೆ.

**ಇ-ಕೆವೈಸಿ ಕಡ್ಡಾಯ:** ಪಡಿತರ ಸೋರಿಕೆ ಮತ್ತು ನಕಲಿ ಕಾರ್ಡ್ ಹಾವಳಿಗೆ ಕಡಿವಾಣ ಹಾಕಲು ಇಲಾಖೆಯು ಇ-ಕೆವೈಸಿಯನ್ನು ಕಡ್ಡಾಯಗೊಳಿಸಿದೆ. ರಾಜ್ಯದಲ್ಲಿ ಇನ್ನೂ 6,16,196 ಕಾರ್ಡ್‌ದಾರರು ಇ-ಕೆವೈಸಿ ಮಾಡಿಸಿಲ್ಲ. ಹೊರ ರಾಜ್ಯಗಳಿಂದ ಬಂದು ನೆಲೆಸಿರುವವರ ಪೈಕಿ ಸುಮಾರು 57,864 ಮಂದಿ ನಕಲಿ ಬಿಪಿಎಲ್ ಕಾರ್ಡ್‌ಗಳನ್ನು ಹೊಂದಿರುವುದು ಪತ್ತೆಯಾಗಿದೆ. ಇ-ಕೈವೈಸಿ ಪೂರ್ಣಗೊಳ್ಳದಿದ್ದಲ್ಲಿ ಅಂತಹ ಕಾರ್ಡ್‌ಗಳನ್ನು ಅನುಮಾನಾಸ್ಪದ ಎಂದು ಪರಿಗಣಿಸಿ ರದ್ದುಪಡಿಸುವ ಸಾಧ್ಯತೆಯೂ ಇದೆ.

**ಅನರ್ಹರಿಗೆ ದಂಡದ ಬಿಸಿ:** ಆದಾಯ ತೆರಿಗೆ ಪಾವತಿಸುವವರು, ಸರ್ಕಾರಿ ನೌಕರರು, 7.5 ಎಕರೆಗಿಂತ ಹೆಚ್ಚು ಕೃಷಿ ಭೂಮಿ ಹೊಂದಿರುವವರು, ವಾರ್ಷಿಕ 1.20 ಲಕ್ಷ ರೂಪಾಯಿಗಿಂತ ಹೆಚ್ಚು ಆದಾಯ ಹೊಂದಿರುವ ಕುಟುಂಬಗಳು ಬಿಪಿಎಲ್ ಕಾರ್ಡ್‌ಗೆ ಅರ್ಹರಲ್ಲ. ಇಂತಹ ಅನರ್ಹರನ್ನು ಪತ್ತೆಹಚ್ಚಲು ಸರ್ಕಾರ ಆದಾಯ ತೆರಿಗೆ ಇಲಾಖೆ, 'ಕುಟುಂಬ ತಂತ್ರಾಂಶ' ದಂತಹ ತಂತ್ರಜ್ಞಾನಗಳನ್ನು ಬಳಸಿಕೊಳ್ಳುತ್ತಿದೆ.

ಗಮನಾರ್ಹ ಸಂಗತಿಯೆಂದರೆ, ಇಲಾಖೆಯು ಪರಿಶೀಲನಾ ಪಟ್ಟಿಯನ್ನು ನ್ಯಾಯಬೆಲೆ ಅಂಗಡಿಗಳಿಗೆ ಕಳುಹಿಸಿದ ನಂತರ, ಹಲವು ಅನರ್ಹರು ಸ್ವಯಂಪ್ರೇರಿತರಾಗಿ ತಮ್ಮ ಹೆಸರನ್ನು ಕಾರ್ಡ್ ನಿಂದ ತೆಗೆದುಹಾಕಲು ಅರ್ಜಿ ಸಲ್ಲಿಸುತ್ತಿದ್ದಾರೆ. ಆದರೆ, ಇಷ್ಟು ದಿನಗಳ ಕಾಲ ಗೊತ್ತಿದ್ದೂ ಸರ್ಕಾರದ ಸೌಲಭ್ಯವನ್ನು ದುರ್ಬಳಕೆ ಮಾಡಿಕೊಂಡಿದ್ದಕ್ಕಾಗಿ, ಅವರು ಪಡೆದ ಪಡಿತರಕ್ಕೆ ಸಮನಾದ ಮೊತ್ತವನ್ನು ದಂಡವಾಗಿ ವಸೂಲಿ ಮಾಡಲು ಆಹಾರ ಇಲಾಖೆ ಕಠಿಣ ನಿರ್ಧಾರ ಕೈಗೊಂಡಿದೆ.

ಕರ್ನಾಟಕದಲ್ಲಿ ಬಿಪಿಎಲ್ ಕಾರ್ಡ್ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಸರ್ಕಾರ ನೀಡುವ ಪಡಿತರ ಚೀಟಿ ಆಗಿದ್ದು, ಕಡಿಮೆ ದರದಲ್ಲಿ ಪಡಿತರ ಹಾಗೂ ಆರೋಗ್ಯ ಸೇವೆಗಳನ್ನು ಪಡೆಯಬಹುದು. ಹೊಸ ಸದಸ್ಯರನ್ನು ಸೇರಿಸಲು ಪೋಷಕರ ಆಧಾರ್, ಮಕ್ಕಳ ಜನನ ಪ್ರಮಾಣಪತ್ರ, ಆದಾಯ ಪ್ರಮಾಣಪತ್ರ ಅಗತ್ಯವಾಗಿ ಪಡೆಯಬೇಕು.

**ಕೇಂದ್ರದ ಮಾನದಂಡಗಳು**

- ಆದಾಯ 1.20 ಲಕ್ಷಕ್ಕಿಂತ ಹೆಚ್ಚಿರುವ ಫಲಾನುಭವಿಗಳ ಸಂಖ್ಯೆ 5,80,415
- ಬೇರೆ ರಾಜ್ಯದಲ್ಲಿ ಇದ್ದು ಪಡಿತರ ಚೀಟಿ ಹೊಂದಿರುವ ಫಲಾನುಭವಿಗಳು 73,859
- 12 ತಿಂಗಳಿನಿಂದ ಅಕ್ಕಿಪಡೆಯದವರ ಸಂಖ್ಯೆ- 40,833
- ಪಿಎಂ ಕಿಸಾನ್ ಯೋಜನೆ ಅಡಿ 7.5 ಎಕರೆಗಿಂತ ಹೆಚ್ಚು ಭೂಮಿ ಇರುವವರು- 34,710
- ಕಂಪನಿಗಳು ಡೈರೆಕ್ಟ್ ಆಗಿರುವವರು- 21,402
- 6 ರಿಂದ 12 ತಿಂಗಳವರೆಗೂ ಅಕ್ಕಿ ಪಡೆಯದವರು 17,414
- ಜಿಎಸ್‌ಟಿ ಹೊಂದಿದ್ದೂ 25 ಲಕ್ಷಕ್ಕಿಂತ ಹೆಚ್ಚು ವಹಿವಾಟು 2,695
- 100 ವರ್ಷ ಮೇಲ್ಪಟ್ಟ ಪಡಿತರ ಫಲಾನುಭವಿಗಳು- 2050
- ಆಧಾರ್ ಸ್ಥಿತಿಯಲ್ಲಿ ಮೃತ ವ್ಯಕ್ತಿಗಳ ಸಂಖ್ಯೆ 1452
- 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಏಕ ಸದಸ್ಯ ಫಲಾನುಭವಿಗಳು- 793
- ಒಂದಕ್ಕಿಂತ ಹೆಚ್ಚು ಪಡಿತರ ಚೀಟಿ ಇರುವವರು 430
- ನಾಲ್ಕು ಚಕ್ರ ವಾಹನ ಇರುವವರು- 153

**ರಾಜ್ಯ ಸರ್ಕಾರ 4 ಮಾನದಂಡಗಳು**

- ಅಕ್ಕಿ ಪಡೆಯದವರು- 2,75,667
- ಆದಾಯ ತೆರಿಗೆದಾರರು- 98,473
- ವಾರ್ಷಿಕ ವರಮಾನ 1.20 ಲಕ್ಷಕ್ಕಿಂತ ಹೆಚ್ಚು ಇರುವವರು- 10,09,475
- ಸರ್ಕಾರಿ ನೌಕರರು -4,036
- ಒಟ್ಟು- 13,87,651

## ಡಿಕೆಶಿ ಕನಸಿನ ಯೋಜನೆ ಟನಲ್ ರಸ್ತೆ ನಿರ್ಮಾಣಕ್ಕೆ ಗ್ರೀನ್ ಸಿಗ್ನಲ್

• ಉದಯವಾಹಿನಿ, ಬೆಂಗಳೂರು



ನಗರದ ವಾಹನ ದಟ್ಟಣೆ ನಿವಾರಣೆಗೆ ಸಹಕಾರಿ ಆಗಲಿದೆ ಎಂದು ಭಾವಿಸಲಾಗಿರುವ ಟನಲ್ ರಸ್ತೆ ನಿರ್ಮಾಣಕ್ಕೆ ಅಂತೂ ಇಂತೂ ಗ್ರೀನ್‌ಸಿಗ್ನಲ್ ಸಿಕ್ಕಿದೆ. ಬಹುಕೋಟಿ ರೂ ವೆಚ್ಚದಲ್ಲಿ ನಿರ್ಮಿಸಲಾಗುತ್ತಿರುವ ಟನಲ್ ರಸ್ತೆ ನಿರ್ಮಾಣದ ಹೊಣೆಯನ್ನು ಅದಾನಿ ಗ್ರೂಪ್ ಸಂಸ್ಥೆ ವಹಿಸಿಕೊಂಡಿದೆ ಎಂದು ಬಿ.ಸ್ಮೈಲ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಡಿಸಿಎಂ ಡಿ.ಕೆ. ಶಿವಕುಮಾರ್ ಅವರ ಕನಸಿನ ಯೋಜನೆ ಎಂದೇ ಗುರುತಿಸಿಕೊಂಡಿರುವ ಈ ಟನಲ್ ರಸ್ತೆ ಯೋಜನೆಗೆ ಸಂಬಂಧಿಸಿದಂತೆ ಟೆಕ್ನಿಕಲ್ ಬಿಡ್ ಪರಿಶೀಲನೆ ಈಗಾಗಲೇ ಅಂತಿಮ ಹಂತದಲ್ಲಿ ಮುಕ್ತಾಯಗೊಂಡಿದೆ ಮುಂದಿನ 15 ದಿನಗಳಲ್ಲಿ ಕಾಮಗಾರಿ ಆರಂಭಕ್ಕೆ ಅಂತಿಮ ಮುದ್ರೆ ಬೀಳುವ ಸಾಧ್ಯತೆ ಇದೆ ಎನ್ನಲಾಗಿದೆ. 16.75 ಕಿಮೀ ಉದ್ದದ ಟನಲ್ ರಸ್ತೆ ಕಾಮಗಾರಿಯನ್ನು ಎರಡು ಪ್ಯಾಕೇಜ್‌ಗಳಲ್ಲಿ ಒಟ್ಟು 17,698 ಕೋಟಿ ರೂ. ಅಂದಾಜು ವೆಚ್ಚದಲ್ಲಿ ನಿರ್ಮಿಸಲು ಸರ್ಕಾರ ಟೆಂಡರ್ ಕರೆದಿತ್ತು. ಟೆಂಡರ್‌ನಲ್ಲಿ ನಾಲ್ಕು ಕಂಪನಿಗಳು ಭಾಗವಹಿಸಿದವು. ಅದರೆ ದಿಲೀಪ್ ಬಿಲ್ಡ್ ಕಾನ್ ಹಾಗೂ ರೈಲ್ವೆ ವಿಕಾಸ್ ನಿಗಮ್ ಲಿಮಿಟೆಡ್ ಕಂಪನಿಗಳು ತಾಂತ್ರಿಕ ಕಾರಣಗಳಿಂದ ಅರ್ಹತೆ ಕಳೆದುಕೊಂಡವು. ಅಂತಿಮ ಹಣಕಾಸು ಹಂತಕ್ಕೆ ಅದಾನಿ ಸಂಸ್ಥೆ, ಹೈದರಾಬಾದ್ ಮೂಲದ ವಿಶ್ವಸಮುದ್ರ ಕಂಪನಿಗಳು ಮಾತ್ರ ಅಂತಿಮ ಬಿಡ್ ಪ್ರವೇಶಿಸಿವೆ.

ಸರ್ಕಾರದ ಅಂದಾಜು ವೆಚ್ಚ 17,698 ಕೋಟಿ ರೂ. ಆದರೆ ಅದಾನಿ ಗ್ರೂಪ್ 22,267 ಕೋಟಿ ಬಿಡ್ ಮಾಡಿದೆ. ವಿಶ್ವಸಮುದ್ರ ಗ್ರೂಪ್ 25,474 ಕೋಟಿ ಬಿಡ್ ಮಾಡಿವೆ. ಎರಡೂ ಕಂಪನಿಗಳಲ್ಲಿ ಕಡಿಮೆ ಮೊತ್ತಕ್ಕೆ ಬಿಡ್ ಮಾಡಿರುವುದರಿಂದ ಅದಾನಿ ಗ್ರೂಪ್ ಗೇ ಟೆಂಡರ್ ಒಲಿಯುವ ಸಾಧ್ಯತೆ ಹೆಚ್ಚು ಎಂದು ಮೂಲಗಳು ತಿಳಿಸಿವೆ.

ಅದಾನಿ ಕುರಿತಾಗಿ ಆಗಾಗ ಟೀಕೆ ಮಾಡುತ್ತಿದ್ದ ಕಾಂಗ್ರೆಸ್ ಸರ್ಕಾರವೇ ಈಗ ಅದೇ ಅದಾನಿ ಗ್ರೂಪ್‌ಗೆ ಟೆಂಡರ್ ನೀಡಲಿದೆಯೇ ಎಂಬ ಪ್ರಶ್ನೆ ರಾಜಕೀಯ ವಲಯದಲ್ಲಿ ಚರ್ಚೆಗೆ ಕಾರಣವಾಗಿದೆ. ಮತ್ತೊಂದೆಡೆ, ಟನಲ್ ರಸ್ತೆ ಯೋಜನೆಯನ್ನು ವಿರೋಧಿಸುತ್ತಿದ್ದ ಬಿಜೆಪಿ, ಇದೀಗ ಅದಾನಿ ವಿರುದ್ಧ ಧ್ವನಿ ಎತ್ತುತ್ತದೆಯೇ ಎಂಬುದೂ ಕುತೂಹಲ ಹುಟ್ಟಿಸಿದೆ. ಕಳೆದ ಎರಡು ತಿಂಗಳಿಂದ ತಾಂತ್ರಿಕ ಅಡಚಣೆಗಳನ್ನು ಬಗೆಹರಿಸಲಾಗಿದ್ದು, ಹಣಕಾಸು ಪರಿಶೀಲನೆ ಪೂರ್ಣಗೊಂಡ ಬಳಿಕ ಮುಂದಿನ 15 ದಿನಗಳಲ್ಲಿ ಅಂತಿಮ ಒಪ್ಪಂದಕ್ಕೆ ಸಹಿ ಬೀಳುವ ಸಾಧ್ಯತೆ ಇದೆ. ಟ್ರಾಫಿಕ್‌ಸಮಸ್ಯೆಗೆ ಪರಿಹಾರ ಎನ್ನಲಾಗುತ್ತಿರುವ ಟನಲ್ ರಸ್ತೆ ಯೋಜನೆ ರಾಜಕೀಯವಾಗಿ, ಆರ್ಥಿಕವಾಗಿ ದೊಡ್ಡ ಚರ್ಚೆಗೆ ಕಾರಣವಾಗುತ್ತಿದೆ.

## ಖಮೇನಿ ಹತ್ಯೆ ಖಂಡಿಸಿ ರಾಜ್ಯದಲ್ಲಿ ಪೂರ್ವಾನುಮತಿಯಿಲ್ಲದೆ ಪ್ರತಿಭಟನೆ ಮಾಡುವಂತಿಲ್ಲ : ಗೃಹ ಸಚಿವ ಪರಮೇಶ್ವರ್

• ಉದಯವಾಹಿನಿ, ಬೆಂಗಳೂರು



ಇರಾನ್‌ನ ಅಧ್ಯಕ್ಷ ಆಯತೊಲ್ಲಾ ಆಲಿ ಖಮೇನಿ ಹತ್ಯೆಯನ್ನು ಖಂಡಿಸಿ ಬೆಂಗಳೂರು ರಾಜ್ಯಾದ್ಯಂತ ಪೂರ್ವಾನುಮತಿಯಿಲ್ಲದೆ ಪ್ರತಿಭಟನೆ ನಡೆಸಿದವರ ವಿರುದ್ಧ ಕಾನೂನು ರೀತಿಯಲ್ಲಿ ಸೂಕ್ತ ಕ್ರಮ ಕೈ ಗೊಳ್ಳಲಾಗುವುದು ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಎಚ್ಚರಿಸಿದ್ದಾರೆ. ನಗರದಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಮಾಜದ ಒಂದು ವರ್ಗ ಖಮೇನಿ ಅವರನ್ನು ತಮ್ಮ ಧರ್ಮ ಗುರು ಎಂದು ಭಾವಿಸಿದೆ.

ಹತ್ಯೆಯನ್ನು ಖಂಡಿಸಿ ಮೆರವಣಿಗೆ ನಡೆಸಲು ಯಾರೂ ಅನುಮತಿ ಕೇಳಿರಲಿಲ್ಲ, ನಾವು ಅನುಮತಿ ಕೊಟ್ಟಿರಲಿಲ್ಲ. ಆದರೂ ಪ್ರತಿಭಟನಾ ಮೆರವಣಿಗೆಗಳು ನಡೆದಿವೆ ಎಂದರು. ಹೈಕೋರ್ಟ್ ಆದೇಶದ ಪ್ರಕಾರ ಫ್ರೀಡಂ ಪಾರ್ಕ್‌ನಲ್ಲೇ ಪ್ರತಿಭಟನೆ ನಡೆಯಬೇಕು. ಅದರಂತೆ ಈ ಹಿಂದೆ ಕಾಂಗ್ರೆಸ್ ಪಕ್ಷವೂ ಮತಗಳ್ಳತನದ ವಿರುದ್ಧ, ಉದ್ಯೋಗಖಾತ್ರಿ ಯೋಜನೆಯನ್ನು ಕೇಂದ್ರ ಸರ್ಕಾರ ಬದಲಾವಣೆ ಮಾಡಿದಾಗ ಆಕ್ಷೇಪಿಸಿ ಪ್ರತಿಭಟನೆ ನಡೆಸಿತ್ತು. ಆದರೆ ಫ್ರೀಡಂಪಾರ್ಕ್ ಅನ್ನು ಬಿಟ್ಟು ಹೊರಗೆ ಪ್ರತಿಭಟನೆ ನಡೆಯದಂತೆ ಎಚ್ಚರಿಕೆ ವಹಿಸಿದ್ದೆವು. ಏಕಾಏಕಿ ಬೀದಿಗೆ ಬಂದು ಪ್ರತಿಭಟನೆ ಮಾಡುವುದು ನಿಯಮ ಬಾಹಿರ. ಇದರ ವಿರುದ್ಧ ದೂರು ಸ್ವೀಕರಿಸಲಾಗಿದೆ. ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ ಎಂದರು.

ದಕ್ಷಿಣ ಭಾರತದಲ್ಲಿನ ರಾಜ್ಯಗಳ ಮೇಲಾಗುತ್ತಿರುವ ತಾರತಮ್ಯವನ್ನು ವಿರೋಧಿಸಲು ಒಗ್ಗಟ್ಟು ಪ್ರದರ್ಶನವಾಗಬೇಕೆಂದು ಮೊದಲಿನಿಂದಲೂ ಕೇಳಿ ಬರುತ್ತಿರುವ ಬೇಡಿಕೆಯಾಗಿದೆ. ಕೇಂದ್ರ ಸರ್ಕಾರ ಜಿಎಸ್‌ಟಿ ತೆರಿಗೆಯಲ್ಲೂ ನಮಗೆ ನ್ಯಾಯೋಚಿತ ಪಾಲು ನೀಡುತ್ತಿಲ್ಲ. ದೊಡ್ಡಯೋಜನೆಗಳನ್ನೆಲ್ಲಾ ಉತ್ತರ ಭಾರತದ ರಾಜ್ಯಗಳಲ್ಲಿಯೇ ಆರಂಭಿಸಲಾಗುತ್ತಿದೆ? ಕರ್ನಾಟಕಕ್ಕೆ ಅನ್ಯಾಯವಾಗುತ್ತಿದೆ.

ಒಕ್ಕೂಟ ವ್ಯವಸ್ಥೆಯಲ್ಲಿ ದಕ್ಷಿಣ ಭಾರತದ ರಾಜ್ಯಗಳು ಸಂಘಟನಾತಕವಾಗಿ ಮುಂದಡಿ ಇಡಬೇಕೆಂದು ತಮಿಳುನಾಡಿನ ಸಿಎಂ ಸ್ಟ್ಯಾಲಿನ್ ಬರೆದಿರುವ ಪತ್ರ ಸಮರ್ಥನೀಯ ಎಂದರು.

## ಒಳಮೀಸಲಾತಿ ಅನುಷ್ಠಾನ ಮಾಡದಿದ್ದರೆ ಹೋರಾಟ ಅನಿವಾರ್ಯ

• ಉದಯವಾಹಿನಿ, ಬೆಂಗಳೂರು



ಒಳಮೀಸಲಾತಿ ಅನ್ವಯ ಶೇ.56ರ ಮೀಸಲಾತಿಯಡಿಯಲ್ಲೇ ವಿವಿಧ ಸರ್ಕಾರಿ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಬೇಕು. ಇಲ್ಲದಿದ್ದರೆ ಮುಂದೆ ಆಗುವ ಎಲ್ಲಾ ಅನಾಹುತಕ್ಕೆ ಕಾಂಗ್ರೆಸ್ ಸರ್ಕಾರ ಕಾರಣವಾಗುತ್ತದೆ ಎಂದು ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಎಚ್ಚರಿಕೆ ಕೊಟ್ಟಿದ್ದಾರೆ. ಪಕ್ಷದ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಒಳಮೀಸಲಾತಿ ಅನುಷ್ಠಾನ ಕುರಿತು ಗುರುವಾರ ನಡೆಯುವ ಸಚಿವ ಸಂಪುಟ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಬಗ್ಗೆ ಸ್ಪಷ್ಟವಾದ ತೀರ್ಮಾನವನ್ನು ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದರು. ಒಳಮೀಸಲಾತಿ ಪ್ರಕಾರ ಶೇ.56ರ ಮೀಸಲಾತಿ ಅಡಿಯೇ ಸರ್ಕಾರಿ ಹುದ್ದೆಗಳ ನೇಮಕಾತಿ ಮಾಡಿಕೊಳ್ಳಬೇಕೆಂದು ಪರಿಶಿಷ್ಟ ಸಮುದಾಯದ ಸಂಘಟನೆಗಳು ಸರ್ಕಾರಕ್ಕೆ ಒತ್ತಾಯಿಸಿವೆ. ಗುರುವಾರ ನಡೆಯುವ ಸಚಿವ ಸಂಪುಟ ಸಭೆಯಲ್ಲಿ ಸರ್ಕಾರದ ನಿರ್ಧಾರ ಹೊರಬೀಳದಿದ್ದರೆ ರಾಜ್ಯಾದ್ಯಂತ ಉಗ್ರ ಹೋರಾಟ ನಡೆಸುವುದಾಗಿ ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ಒಂದು ವೇಳೆ ಏನಾದರೂ ಅನಾಹುತ ಸಂಭವಿಸಿದರೆ ಸರ್ಕಾರ ಹೊಣೆಯಾಗಬೇಕಾಗುತ್ತದೆ ಎಂದು ಹೇಳಿದರು. ಹಿಂದಿನ ಮೀಸಲಾತಿ ಉಪಯೋಗಿಸಿಕೊಂಡು 54 ಸಾವಿರ ಹುದ್ದೆ ಭರ್ತಿ ಮಾಡುವುದಾಗಿ ಹೇಳಿದ್ದಾರೆ. ಒಂದೂವರೆ ಲಕ್ಷ ಉದ್ಯೋಗ ಭರ್ತಿ ಮಾಡದೆ, ಮೀಸಲಾತಿ ಅನುಷ್ಠಾನಕ್ಕೆ ತರದೆ ಹಳೆಯ ಶೇ.50ರ ಮೀಸಲಾತಿಯಡಿ ನೇಮಕಾತಿ ಮಾಡಿಕೊಳ್ಳು ಮುಂದಾಗಿದೆ. ಈ ಮೂಲಕ ಬೆಂಕಿ ಹಚ್ಚುವ ಕೆಲಸ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು. ಹಿಂದೆ ಬಿಜೆಪಿ ಅವಧಿಯಲ್ಲಿ 50 ರಿಂದ 56% ಮೀಸಲಾತಿ ನೀಡಿದ್ದೆವು. ಅದರ ಆಧಾರದ ಮೇಲೆ ನೇಮಕಾತಿ ಮಾಡಬೇಕು.

ನಿಮ್ಮ ಹಣಕಾಸು ಮುಗ್ಗಟ್ಟನ್ನು ಇಟ್ಟುಕೊಂಡು ಎಷ್ಟು ನೇಮಕ ಮಾಡುತ್ತೀರೋ ಮಾಡಿ. ಆದರೆ 56% ಒಳ ಮೀಸಲಾತಿ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಬೇಕು. ಕುಂಟು ನೆಪ ಹೇಳದೆ ಉದ್ಯೋಗ ನೀಡುವ ಕೆಲಸ ಮಾಡಬೇಕು. ಶೋಷಿತ, ಪೀಡಿತ ಸಮುದಾಯಕ್ಕೆ ನ್ಯಾಯ ಕೊಡಬೇಕೆಂದು 30 ವರ್ಷಗಳಿಂದ ಮೀಸಲಾತಿ ವಿಚಾರವಾಗಿ ನ್ಯಾಯಯುತ ಹೋರಾಟ ಮಾಡಿಕೊಂಡು ಬಂದಿದ್ದವು.

ಶೋಷಿತ ಸಮುದಾಯಕ್ಕೆ ನ್ಯಾಯ ಕೊಡುವ ಕೆಲಸ ಕಾಂಗ್ರೆಸ್ ಮಾಡಲಿಲ್ಲ. ನಮ್ಮ ಸರ್ಕಾರದ ಅವಧಿಯಲ್ಲಿ ಎಸ್ಸಿ-ಎಸ್ಟಿ ಸಮುದಾಯಕ್ಕೆ ಶೇ.6ರಷ್ಟು ಮೀಸಲಾತಿ ಕೊಡುವ ಕೆಲಸ ಬೊಮ್ಮಾಯಿ ಅವರ ಅಧಿಕಾರಾವಧಿಯಲ್ಲಿ ಮಾಡಲಾಗಿತ್ತು. ಆದರೆ ಕಾಂಗ್ರೆಸ್ ಸರ್ಕಾರಕ್ಕೆ ಮೂರು ವರ್ಷಗಳು ತುಂಬಿದೆ. ಸಿಎಂ ಸಿದ್ದರಾಮಯ್ಯ ಇಂತ ಗಂಭೀರ ವಿಚಾರವನ್ನ ಹಗುರವಾಗಿ ತೆಗೆದುಕೊಂಡಿದ್ದಾರೆ ಎಂದು ಆರೋಪಿಸಿದರು.

# ಒಳ ಮೀಸಲಾತಿಯ ಗೊಂದಲ

### ಮಲ್ಲಿಕಾರ್ಜುನ್ ಖರ್ಗೆ ಅವರಿಗೆ ಸುದೀರ್ಘ ವಿವರಣೆ ನೀಡಿದ ಸಚಿವ ಮಹದೇವಪ್ಪ

• ಉದಯವಾಹಿನಿ,ಬೆಂಗಳೂರು

ಒಳ ಮೀಸಲಾತಿಯ ಗೊಂದಲ ಕುರಿತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ ಅವರಿಗೆ ಸಚಿವರಾದ ಎಚ್.ಸಿ. ಮಹದೇವಪ್ಪ, ಡಾ.ಜಿ. ಪರಮೇಶ್ವರ್ ಅವರು ಸುದೀರ್ಘ ವಿವರಣೆ ನೀಡಿದ್ದಾರೆ. ಬುಧವಾರ ಬೆಳಗ್ಗೆ ಇಬ್ಬರು ಸಚಿವರು ಖರ್ಗೆ ಅವರ ಮನೆಗೆ ಭೇಟಿ ನೀಡಿ ಸುದೀರ್ಘ ಮಾತುಕತೆ ನಡೆಸಿದರು. ಒಳ ಮೀಸಲಾತಿ ವಿಚಾರ ರಾಜ್ಯ ಸರ್ಕಾರಕ್ಕೆ ದೊಡ್ಡ ತಲೆನೋವಾಗಿದೆ ಸುಮಾರು 30 ವರ್ಷಗಳಿಂದಲೂ ಎಡಗೈ ಸಮುದಾಯ ಒಳ ಮೀಸಲಾತಿಗಾಗಿ ಒತ್ತಾಯಿಸಿ ಪ್ರತಿಭಟನೆ ನಡೆಸುತ್ತಿತ್ತು. ಈ ಹಿಂದೆ ನ್ಯಾಯಮೂರ್ತಿ ಸದಾಶಿವ ಆಯೋಗ ನೀಡಿದ್ದ ವರದಿಯನ್ನು 2022ರಲ್ಲಿ ಬಿಜೆಪಿ ಸರ್ಕಾರ ತಿರಸ್ಕರಿಸಿತ್ತು. ಆದರೆ ಆಯೋಗದಲ್ಲಿ ಉಲ್ಲೇಖಿಸಲಾಗಿದ್ದ ಮಾದರಿಯಲ್ಲೇ ನಾಲ್ಕು ವರ್ಗೀಕರಣ ಮಾಡಿ ಮೀಸಲಾತಿಯನ್ನು ಹಂಚಿಕೆ ಮಾಡಲಾಗಿತ್ತು. ಜೊತೆಗೆ ಮೀಸಲಾತಿಯ ಪ್ರಮಾಣವನ್ನು ಶೇ. 15ರಿಂದ 17ಕ್ಕೆ ಹೆಚ್ಚಿಸಲಾಗಿತ್ತು. ರಾಜ್ಯಸರ್ಕಾರದ ಈ ನಿರ್ಧಾರ ಸಂವಿಧಾನದ ಷಡ್ಯೂಲ್ 9ಕ್ಕೆ ಸೇರ್ಪಡೆಯಾಗಿರಲಿಲ್ಲ. ಸಂಸತ್‌ನಲ್ಲೂ ಚರ್ಚೆಯಾಗಿರಲಿಲ್ಲ. ಹೀಗಾಗಿ ಅದು ಊರ್ಜಿವಾಗುವ ಬಗ್ಗೆ ನಾನಾ ರೀತಿಯ ಅನುಮಾನಗಳಿದ್ದವು. ಈ ನಡುವೆ 2024ರ ಆಗಸ್ಟ್ 1ರಂದು ಸುಪ್ರೀಂಕೋರ್ಟ್ ತೀರ್ಪು ನೀಡಿ ಒಳ ಮೀಸಲಾತಿ ವರ್ಗೀಕರಣಕ್ಕೆ ರಾಜ್ಯ ಸರ್ಕಾರಗಳಿಗೆ ಅಧಿಕಾರವಿದೆ ಎಂದು ಸ್ಪಷ್ಟಪಡಿಸಿತ್ತು. ಅದರ ಆಧಾರದ ಮೇಲೆ ಸಿದ್ದರಾಮಯ್ಯ ಸರ್ಕಾರ ಮೀಸಲಾತಿಯ ವರ್ಗೀಕರಣ ಪ್ರಕ್ರಿಯೆಗಳನ್ನು ಆರಂಭಿಸಿತ್ತು. ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರ ನೇತೃತ್ವದಲ್ಲಿ ಆಯೋಗ ರಚನೆ ಮಾಡಿ ಸಮರ್ಪಕವಾದ ದತ್ತಾಂಶ ಸಂಗ್ರಹಣೆಗಾಗಿ ಮನೆ ಮನೆ ಸಮೀಕ್ಷೆ ನಡೆಸಿದೆ. ಆದರೆ ಸಮೀಕ್ಷೆಯಲ್ಲಿ ಸಂಗ್ರಹಿಸಿದ ಅಂಕಿ ಅಂಶಗಳ ಬಗ್ಗೆಯೂ ಅನುಮಾನಗಳಿದ್ದು, ನಾಗಮೋಹನ್ ಅವರ ಆಯೋಗದ ಶಿಫಾರಸುಗಳ ಬಗ್ಗೆಯೂ ಬಲಗೈ ಸಮುದಾಯದಿಂದ ಆಕ್ಷೇಪಗಳು ವ್ಯಕ್ತವಾಗಿದ್ದವು. ಅದರ ನಡುವೆಯೇ ರಾಜ್ಯ ಸರ್ಕಾರ ಸಂಪುಟದಲ್ಲಿ ಚರ್ಚೆ ಮಾಡಿ ಮೀಸಲಾತಿ ವರ್ಗೀಕರಣಕ್ಕೆ ನಿರ್ಧಾರ ತೆಗೆದುಕೊಂಡಿತ್ತು. ಆದರೆ ಅಲ್ಲಿ ಬಿಂದು ಮಾದರಿಯನ್ನು ನಿಗದಿ ಮಾಡುವ ವೇಳೆ ಶೋಷಿತರಿಗೆ ಅನ್ಯಾಯ ಮಾಡಲಾಗಿದೆ ಎಂಬ ಆಕ್ಷೇಪಗಳು ಕೇಳಿ ಬಂದಿವೆ. ಈ ಹಿಂದೆ ಬಸವರಾಜ ಬೊಮ್ಮಾಯಿ ಸರ್ಕಾರ ಅನುಸರಿಸಿದ ಮಾನದಂಡಗಳನ್ನೇ ಪಾಲನೆ ಮಾಡಲಾಗಿದೆ ಎಂದು ಸಿದ್ದರಾಮಯ್ಯ ಅವರ ಸರ್ಕಾರ ಸಮರ್ಥಿಸಿಕೊಳ್ಳುತ್ತಿದೆ ಆದರೆ ರಾಜ್ಯಸರ್ಕಾರದ ನಿರ್ಧಾರಕ್ಕೆ ಬಲಗೈ ಸಮುದಾಯ, ಇತರ ಶೋಷಿತ ಅಲೆಮಾರಿ ಜನಾಂಗಗಳು ತೀವ್ರ ವಿರೋಧ ವ್ಯಕ್ತಪಡಿಸಿವೆ. ಪ್ರತಿಭಟನೆ ಕಾವು ಪಡೆಯುತ್ತಿದ್ದಂತೆ ರಾಜ್ಯ ಸರ್ಕಾರ ತನ್ನ ನಿರ್ಧಾರದಿಂದ ಹಿಂದೆ ಸರಿದಿದೆ ಶೇ. 15ರ ಪ್ರಮಾಣದಲಿನ ಹಳೆಯ ಮೀಸಲಾತಿಯಲ್ಲೇ ಸರ್ಕಾರಿ ಹುದ್ದೆಗಳಿಗೆ ನೇಮಕಾತಿ ಮಾಡಿದರೂ ಕೂಡ ಅಲ್ಲಿಯೂ ಒಳ ಮೀಸಲಾತಿ ಜಾರಿಯಾಗಲೇಬೇಕೆಂದು ಪಟ್ಟು ಹಿಡಿದಿದೆ ಎಡಗೈ ಸಮುದಾಯದ ಪ್ರಭಾವಿ ಸಚಿವರಾಗಿರುವ ಕೆ.ಎಚ್. ಮುನಿಯಪ್ಪ ಅವರು ತಮ್ಮದೇ ಸರ್ಕಾರದ ನಿರ್ಧಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ ಅನ್ಯಾಯವನ್ನು ಸರಿಪಡಿಸದೇ ಇದ್ದರೇ ತಾವು ಶಾಸಕ ಸ್ಥಾನ, ಸಚಿವ ಸ್ಥಾನ ಎರಡಕ್ಕೂ ರಾಜಿನಾಮೆ ನೀಡುವುದಾಗಿ ಬೆದರಿಕೆ ಹಾಕಿದ್ದಾರೆ ಎನ್ನಲಾಗಿದೆ. ಇದು ಕಾಂಗ್ರೆಸ್ ಸರ್ಕಾರಕ್ಕೆ ತೀವ್ರ ಮುಜುಗರ ಉಂಟುಮಾಡಿದೆ.

ಕಾಂಗ್ರೆಸ್ ಸರ್ಕಾರದಲ್ಲಿ ಬಲಗೈ ಸಮುದಾಯದ ಮೂವರು ಎಡಗೈ ಸಮುದಾಯದ ಇಬ್ಬರು ಸಚಿವರಿದ್ದಾರೆ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗಲೆಲ್ಲಾ ಬಲಗೈ ಸಮುದಾಯವೇ ಪ್ರಬಲವಾಗಿರುತ್ತದೆ ಎಂಬ ಮಾತಿದೆ. ಬಿಜೆಪಿಯಲ್ಲಿ ಎಡಗೈ ಸಮುದಾಯದ ನಾಯಕರು ಪ್ರಬಲಆಗಿದ್ದಾರೆ.

ಹೀಗಾಗಿ ಕಾಂಗ್ರೆಸ್ ಪಕ್ಷಕ್ಕೆ ಬಲಗೈ ಸಮುದಾಯವೇ ಪ್ರಮುಖ ವೋಟ್ ಬ್ಯಾಂಕ್ ಎಂದು ಬಿಂಬಿಸಲಾಗಿದೆ. ಪ್ರಭಾವಿ ನಾಯಕರು ಕಾಂಗ್ರೆಸ್ ಅಲ್ಲಿ ಇರುವುದರಿಂದಾಗಿ ಒಳ ಮೀಸಲಾತಿಯ ಗೊಂದಲದ ಬಗ್ಗೆ ಧರ್ಮ ಸಂಕಟಕ್ಕೆ ಸಿಲುಕಿದಂತಾಗಿದೆ. ಇತ್ತೀಚಿನ ರಾಜಕೀಯ ಬೆಳವಣಿಗೆಗಳು, ಮುನಿಯಪ್ಪ ಅವರ ಹೇಳಿಕೆ, ಸರ್ಕಾರದ ನಿಲುವುಗಳ ಬಗ್ಗೆ ಸಚಿವ ಮಹದೇವಪ್ಪ ಮತ್ತು ಪರಮೇಶ್ವರ ಅವರು ಮಲ್ಲಿಕಾರ್ಜುನ ಖರ್ಗೆ ಅವರಿಗೆ ವಿವರಣೆ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

**ಕಾಂಗ್ರೆಸ್ ಸರ್ಕಾರಕ್ಕೆ ತೀವ್ರ ಮುಜುಗರ**



**ಒತ್ತಡಕ್ಕೆ ಸಿಲುಕಿದ ಸರ್ಕಾರ**

ಈ ನಡುವೆ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿಯಿರುವ ಲಕ್ಷಾಂತರ ಹುದ್ದೆಗಳಿಗೆ ನೇಮಕಾತಿ ಕೈಗೊಳ್ಳಬೇಕೆಂದು ಉದ್ಯೋಗ ಆಕಾಂಕ್ಷಿಗಳು ಧಾರವಾಡದಲ್ಲಿ ಬೃಹತ್ ಪ್ರತಿಭಟನೆ ನಡೆಸಿದರು. ಒತ್ತಡಕ್ಕೆ ಸಿಲುಕಿದ ರಾಜ್ಯ ಸರ್ಕಾರ ವಿವಾದಿತ ಒಳ ಮೀಸಲಾತಿಯನ್ನು ನೆನೆಗುದಿಯಲ್ಲಿಟ್ಟು 50 ಸಾವಿರ ಹುದ್ದೆಗಳಿಗೆ ನೇಮಕಾತಿ ಮಾಡುವ ನಿರ್ಧಾರವನ್ನು ಸಂಪುಟದಲ್ಲಿ ತೆಗೆದುಕೊಂಡಿದೆ. ಇದಕ್ಕೆ ಎಡಗೈ ಸಮುದಾಯ ಪ್ರಬಲ ವಿರೋಧ ವ್ಯಕ್ತಪಡಿಸುತ್ತಿದೆ.

ಬಂಡೀಪುರದ ಮೇಲೆ ಎಐ ನಿಗಾ ; 360 ಡಿಗ್ರಿ ಚಿತ್ರಣ ತೋರಿಸುವ ಕ್ಯಾಮೆರಾ ಕಣ್ಗಾವಲು

# ಸದ್ಯ ಒಂದು ಹಂತಕ್ಕೆ ಪ್ರಾಯೋಗಿಕವಾಗಿ ಯಶಸ್ಸು

• ಉದಯವಾಹಿನಿ, ಚಾಮರಾಜನಗರ

ಬಂಡೀಪುರ ಹುಲಿ ರಕ್ಷಿತಾರಣ್ಯದ ಮೇಲೆ ಕಣ್ಗಾವಲು ಇಡುವ ನಿಟ್ಟಿನಲ್ಲಿ ಹೊಸ ಎಐ ತಂತ್ರಜ್ಞಾನ ಅಳವಡಿಸಿಕೊಳ್ಳಲು ಅಧಿಕಾರಿಗಳು ಮುಂದಾಗಿದ್ದಾರೆ. ಬಂಡೀಪುರ ಅಭಯಾರಣ್ಯ ದೇಶದ ಗಮನ ಸೆಳೆದಿರುವಂಥದ್ದು. ರಾಜ್ಯದಲ್ಲಿ ಹೆಚ್ಚು ಹುಲಿಗಳನ್ನು ಹೊಂದಿರುವ ಕಾಡು ಎಂಬ ಶ್ರೇಯ ಹೊಂದಿದೆ. ಇತ್ತೀಚಿನ ದಿನಗಳಲ್ಲಿ ಬಂಡೀಪುರ ಕಾಡಿನಿಂದ ಹುಲಿ, ಆನೆಗಳು ಹೊರ ಬರುತ್ತಿದ್ದು, ಮಾನವ-ಪ್ರಾಣಿ ಸಂಘರ್ಷಕ್ಕೆ ಕಾರಣವಾಗಿದೆ. ಹಾಗಾಗಿ ಇದೆಲ್ಲವನ್ನು ತಡೆಗಟ್ಟುವ ನಿಟ್ಟಿನಲ್ಲಿ ಬಂಡೀಪುರ ಕಾಡಿನ ಮೇಲೆ 24 ಗಂಟೆಯೂ 360 ಡಿಗ್ರಿಯಲ್ಲಿ ಕಣ್ಣಿಡುವ ತಂತ್ರಜ್ಞಾನದ ಕ್ಯಾಮರಾವನ್ನು ಬಂಡೀಪುರ ಅರಣ್ಯಾಧಿಕಾರಿಗಳು ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ತಂತ್ರಜ್ಞರ ಮೊರೆ ಹೋಗಿದ್ದಾರೆ. ಸದ್ಯ ಒಂದು ಹಂತಕ್ಕೆ ಪ್ರಾಯೋಗಿಕವಾಗಿ ಅದರಲ್ಲಿ ಯಶಸ್ಸನ್ನು ಸಹ ಕಾಣುತ್ತಿದ್ದಾರೆ. ಸದ್ಯ ಅಭಿವೃದ್ಧಿಪಡಿಸಿರುವ ಎಐ ತಂತ್ರಜ್ಞಾನದ ಕ್ಯಾಮೆರಾ 8–10 ಕಿ.ಮೀ. ಅಂತರದ ದೃಶ್ಯವನ್ನು ಸೆರೆ ಹಿಡಿಯುವುದರಲ್ಲಿ ಯಶಸ್ವಿಯಾಗಿದೆ.



**ನಾಡಿನತ್ತ ಹೆಜ್ಜೆ ಹಾಕಿದರೆ**

**ಅಲರ್ಟ್ ಮೆಸೇಜ್:** ಈ ಕ್ಯಾಮೆರಾ ತಾನು ಸೆರೆ ಹಿಡಿದ ಚಿತ್ರಣವನ್ನು ಒಂದೇ ಕೇಂದ್ರ ಸ್ಥಾನದಲ್ಲಿ ಕುಳಿತು ನಿಯಂತ್ರಿಸಬಹುದಾಗಿದೆ. ಹಾಗಾಗಿ ಕಾಡಿಗೆ ಬೆಂಕಿ ಬಿದ್ದರೆ, ಕಾಡಾನೆಗಳು ಹಾಗೂ ಆನೆಗಳು ಕಾಡು ದಾಟಿ, ನಾಡಿನತ್ತ ಹೆಜ್ಜೆ ಹಾಕಿದರೆ ಅದರ ಸುಳಿವನ್ನು ಕ್ಯಾಮೆರಾ ಸಂದೇಶ ನೀಡಬೇಕು ಎಂಬ ಬಗೆಯಲ್ಲಿ ತಂತ್ರಾಂಶವನ್ನು ಅಭಿವೃದ್ಧಿಪಡಿಸುವ ಕಾರ್ಯ ನಡೆದಿದೆ ಎಂಬುದು ಗಮನಾರ್ಹ. ಹೀಗೆ ಅಲರ್ಟ್ ಮೆಸೇಜ್ ಬರುವಂತಾದರೆ ಬೆಂಕಿಯನ್ನು ತಕ್ಷಣ ನಂದಿಸಲು ಸಾಧ್ಯವಾಗುತ್ತದೆ. ಅಲ್ಲದೇ ಕಾಡಾನೆ, ಹುಲಿಯಂತಹ ಪ್ರಾಣಿಗಳು ಯಾವ ಭಾಗದಿಂದ ಎತ್ತ ಸಾಗುತ್ತಿವೆ ಎಂಬ ಚಿತ್ರಣವೂ ಅಧಿಕಾರಿಗಳು, ಸಿಬ್ಬಂದಿಗೆ ತಕ್ಷಣಕ್ಕೆ ತಿಳಿಯಲಿದ್ದು, ನಿಯಂತ್ರಿಸಲು ಸಾಧ್ಯವಾಗಲಿದೆ. ಆ ನಿಟ್ಟಿನಲ್ಲಿಈ ಹೊಸ ಕ್ಯಾಮೆರಾಗಳು ಕ್ರಾಂತಿಕಾರಕ ಬದಲಾವಣೆಯನ್ನು ತರಬಲ್ಲವು ಎಂಬ ನಿರೀಕ್ಷೆ ಮೂಡಿದೆ.

**ಪ್ರಾಯೋಗಿಕ ಅಳವಡಿಕೆ:** ಸದ್ಯ ಇಂಥ ತಂತ್ರಜ್ಞಾನದ ಒಂದು ಕ್ಯಾಮೆರಾವನ್ನು ಬಂಡೀಪುರದಲ್ಲಿ ಅಳವಡಿಸಲಾಗಿದ್ದು, ಬೆಳಗಿನ ವೇಳೆ 8–10 ಕಿ.ಮೀ. ದೂರದವರೆಗೆ ಹಾಗೂ ರಾತ್ರಿ ವೇಳೆ 6–8 ಕಿ.ಮೀ. ದೂರದವರೆಗೆ ಕಾಡಿನ ಚಿತ್ರಣವನ್ನು ತೋರಿಸುತ್ತಿದೆ. ಬಂಡೀಪುರದ ಕೇಂದ್ರ ಕಚೇರಿಯಲ್ಲಿ ಕುಳಿತು 8 ಕಿ.ಮೀ. ದೂರದವರೆಗೆ ಅರಣ್ಯವನ್ನು ಈ ಕ್ಯಾಮೆರಾದಲ್ಲಿ 360 ಡಿಗ್ರಿ ಸುತ್ತಳತೆಯಲ್ಲಿ ವೀಕ್ಷಿಸಬಹುದಾಗಿದೆ ಎಂಬುದು ಹೊಸ ತಂತ್ರಜ್ಞಾನದ ವಿಶೇಷ. ಒಂದು ಕ್ಯಾಮೆರಾ ತನ್ನ ಸುತ್ತಳತೆಯಲ್ಲಿ ಯಾವುದೇ ಹೊಗೆ, ಬೆಂಕಿ ಕಾಣಿಸಿಕೊಂಡರು ಸಂದೇಶ ನೀಡುವಂತ ತಂತ್ರಾಂಶವನ್ನು ಸಿದ್ಧಪಡಿಸುವ ನಿಟ್ಟಿನಲ್ಲೂ ಸಕಾರಾತ್ಮಕ ಫಲಿತಾಂಶ ಬಂದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

> ಸದ್ಯ ಪ್ರಾಯೋಗಿಕ ರೀತಿಯಲ್ಲಿಎಐ ತಂತ್ರಜ್ಞಾನ ಅಳವಡಿಸಿ ಸಾಧ್ಯ, ಸಾಧ್ಯತೆಯನ್ನು ತಿಳಿದುಕೊಳ್ಳಲಾಗುತ್ತಿದ್ದು, ಸಕಾರಾತ್ಮಕ ಫಲಿತಾಂಶವನ್ನು ಕಾಣುತ್ತಿದ್ದೇವೆ. ಇದರಿಂದ ಸಾಕಷ್ಟು ಸುಧಾರಣೆ ಕಾಣಬಹುದಾಗಿದೆ.
> – ಪ್ರಭಾಕರನ್, ನಿರ್ದೇಶಕ, ಬಂಡೀಪುರ ಹುಲಿ ಯೋಜನೆ

**ಸದ್ಯ ಒಂದು ಹಂತಕ್ಕೆ ಪ್ರಾಯೋಗಿಕ**

ಬಂಡೀಪುರ ಹುಲಿ ರಕ್ಷಿತಾರಣ್ಯದ ಮೇಲೆ ಎಐ ಕಣ್ಗಾವಲು ಇಟ್ಟಿದೆ. ಮಾನವ- ಪ್ರಾಣಿ ಸಂಘರ್ಷ ತಡೆಯುವ ನಿಟ್ಟಿನಲ್ಲಿ ಎಐ ತಂತ್ರಜ್ಞಾನ ಅಳವಡಿಸಿಕೊಳ್ಳಲು ಅಧಿಕಾರಿಗಳು ಮುಂದಾಗಿದ್ದಾರೆ. ಸದ್ಯ ಒಂದು ಹಂತಕ್ಕೆ ಪ್ರಾಯೋಗಿಕವಾಗಿ ಅದರಲ್ಲಿ ಯಶಸ್ಸನ್ನು ಸಹ ಕಾಣುತ್ತಿದ್ದಾರೆ.

## ಮಿನಿ ನ್ಯೂಸ್

### ಬಲಗೈ ಪಂಗಡದ ಪ್ರತಿಭಟನೆ

• ಉದಯವಾಹಿನಿ, ಶ್ರೀರಂಗಪಟ್ಟಣ

ಪರಿಶಿಷ್ಟ ಜಾತಿಯ ಒಳಮೀಸಲಾತಿ ಹಂಚಿಕೆ ಸಂಬಂಧ ನ್ಯಾಯಮೂರ್ತಿ ನಾಗಮೋಹನದಾಸ್ ವರದಿ ಅನುಷ್ಠಾನ ವಿರೋಧಿಸಿ ಪರಿಶಿಷ್ಟ ಬಲಗೈ ಪಂಗಡದ ಕಾರ್ಯಕರ್ತರು ಇಲ್ಲಿ ಪ್ರತಿಭಟನೆ ನಡೆಸಿದರು. ಇಲ್ಲಿನ ಕುವೆಂಪು ವೃತ್ತದಲ್ಲಿ ಮಾನವ ಸರಪಳಿ ರಚಿಸಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಬೆಂಗಳೂರು ಮೈಸೂರು ಹೆದ್ದಾರಿ ಪ್ರತಿಭಟನಾ ಮೆರವಣಿಗೆ ನಡೆಸಿದರು. ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಪ್ರತಿಭಟನಾ ಸಭೆ ನಡೆಸಿದರು. ಚಿಂತಕ ದಿಲೀಪ್ ನರಸಯ್ಯ ಮಾತನಾಡಿ, ರಾಜ್ಯ ಸರ್ಕಾರ ರಾಜಕೀಯ ಲಾಭದ ದೃಷ್ಟಿಯಿಂದ ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಜಾರಿಗೆ ಮುಂದಾಗಿದೆ.

ಇದರಿಂದ ಪರಿಶಿಷ್ಟ ಜಾತಿಯ ಬಲಗೈ ಸಮುದಾಯಕ್ಕೆ ಅನ್ಯಾಯವಾಗಲಿದೆ. ಸಾರ್ವಜನಿಕ ಚರ್ಚೆಗೆ ಅವಕಾಶವನ್ನೇ ನೀಡಿಲ್ಲ. ನಾಗಮೋಹನದಾಸ್ ವರದಿ ಯಥಾವತ್ ಅನುಷ್ಠಾನ ಮಾಡುವುದು ಸಮ್ಮತವಲ್ಲ ಎಂದು ಹೇಳಿದರು. ಮುಖಂಡ ಮಹದೇವಸ್ವಾಮಿ ಮಾತನಾಡಿ, ಒಳ ಮೀಸಲಾತಿ ಹಂಚಿಕೆ ವಿಷಯ ಕಾನೂನುಬದ್ಧ ಆಗುವವರೆಗೆ ಜಾತಿ ಪ್ರಮಾಣ ಪತ್ರ ವಿತರಿಸಬಾರದು ಎಂದರು.

### ಒಳಗೆರೆ ಮಾರಮ್ಮ ದೇವಾಲಯದಲ್ಲಿ ಚಿನ್ನಾಭರಣ ಕಳವು

• ಉದಯವಾಹಿನಿ, ಯಳಂದೂರು

ತಾಲ್ಲೂಕಿನ ಯರಿಯೂರು ಗ್ರಾಮದ ಒಳಗೆರೆ ಮಾರಮ್ಮ ದೇವಸ್ಥಾನದಲ್ಲಿ ಅಂದಾಜು 6 ಲಕ್ಷ ಮೌಲ್ಯದ ಚಿನ್ನ, ಬೆಳ್ಳಿ ಆಭರಣಗಳು, ಕಾಣಿಕೆ ಹಣವನ್ನು ಕಳ್ಳರು ದೋಚಿದ್ದಾರೆ. ವಿಶೇಷ ಪೂಜೆಗಾಗಿ ದೇವಾಲಯದ ಬಾಗಿಲು ತೆರೆದಾಗ ಕಳುವಾಗಿರುವುದು ಗೊತ್ತಾಗಿದೆ. ಪ್ರತಿ ಮಂಗಳವಾರ ದೇವಳದಲ್ಲಿ ವಿಶೇಷ ಪೂಜೆ ನಡೆಯುತ್ತದೆ. ಬೆಳಿಗ್ಗೆ ದೇವಸ್ಥಾನ ಶುಚಿಗೊಳಿಸಲು ಬಾಗಿಲು ತೆರೆದಾಗ ಕಳುವಾಗಿರುವುದು ತಿಳಿದಿದೆ. ಕಳ್ಳರು ಕೆಸ್ತೂರು ರಸ್ತೆಯಲ್ಲಿ ಖಾಲಿಯಾದ ಕಾಣಿಕೆ ಹುಂಡಿಯನ್ನು ಎಸೆದಿದ್ದಾರೆ ಎಂದು ಯಾಜಮಾನರಾದ ಶೀನಿವಾಸ್, ಮಹದೇವ, ಮುಖಂಡರಾದ ಕುಮಾರ್, ಸಿದ್ದರಾಜು ತಿಳಿಸಿದ್ದಾರೆ. ಪಟ್ಟಣದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ತಾಲ್ಲೂಕು ಕಚೇರಿ ಅಧಿಕಾರಿಗಳು ಹಾಗೂ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

## ವೃತ್ತಿಯಲ್ಲಿ ಒತ್ತಡ ನಿಯಂತ್ರಣಕ್ಕೆ ಕ್ರೀಡೆ ಸಹಕಾರಿ ನಗರಸಭೆ ಅಧ್ಯಕ್ಷ ಕೆ.ಶೇಷಾದ್ರಿ

• ಉದಯವಾಹಿನಿ, ರಾಮನಗರ

ಪೌರ ಕಾರ್ಮಿಕರು ಸದಾ ಒತ್ತಡದಲ್ಲಿ ವೃತ್ತಿ ಮಾಡುತ್ತಿದ್ದಾರೆ. ಇವರಿಗೆ ದೈಹಿಕ ಮತ್ತು ಮಾನಸಿಕ ಶಕ್ತಿ ನೀಡಲು ಪೌರ ಕಾರ್ಮಿಕ ದಿನಾಚರಣೆಯಂದು ಕ್ರೀಡಾ ಕೂಟಗಳನ್ನು ಆಯೋಜಿಸಲಾಗಿತ್ತು ಎಂದು ನಗರಸಭೆ ಅಧ್ಯಕ್ಷ ಕೆ. ಶೇಷಾದ್ರಿ ಹೇಳಿದರು. ಪೌರ ಕಾರ್ಮಿಕ ದಿನಾಚರಣೆ ಅಂಗವಾಗಿ ಏರ್ಪಡಿಸಲಾಗಿದ್ದ ಪೌರ ಕಾರ್ಮಿಕರ ಕ್ರೀಡಾ ಕೂಟದಲ್ಲಿ ಜಯಗಳಿಸದವರಿಗೆ ಬುಧವಾರ ನಗರಸಭೆ ಸಭಾಂಗಣದಲ್ಲಿ ಬಹುಮಾನಗಳನ್ನು ವಿತರಣೆ ಮಾಡಿ ಮಾತನಾಡಿದ ಅವರು, ಕಾರ್ಮಿಕರು ಕ್ರೀಡಾಕೂಟದಲ್ಲಿ ಉತ್ಸಾಹದಿಂದ ಭಾಗವಹಿಸಿದ್ದರು. ಮುಂದಿನ ವರ್ಷ ವಿಶೇಷ ರೀತಿಯಲ್ಲಿ ಪೌರ ಕಾರ್ಮಿಕ ದಿನಾಚರಣೆ ಆಚರಣೆ ಮಾಡಲಾಗುವುದು ಎಂದು ಹೇಳಿದರು.

ಪೌರಾಯುಕ್ತ ಜಯಣ್ಣ ಮಾತನಾಡಿ, ಸಾರ್ವಜನಿಕರೊಂದಿಗೆ ದಿನನಿತ್ಯ ಒಡನಾಟವನ್ನು ಹೊಂದಿರುವ ಪೌರ ಸೇವಾ ನೌಕರರು ಸದಾ ಒತ್ತಡದಲ್ಲಿರುತ್ತಾರೆ. ಇಂತಹ ಸಂದರ್ಭದಲ್ಲಿ ಒತ್ತಡ ನಿವಾರಣೆಗೆ ಕ್ರೀಡೆಗಳು ಹೆಚ್ಚು ಸಹಕಾರಿಯಾಗಿದೆ. ಈ ನಿಟ್ಟಿನಲ್ಲಿ ಮುಂದಿನ ದಿನಗಳಲ್ಲಿ ಪೌರಕಾರ್ಮಿಕ ದಿನಾಚರಣೆಯನ್ನು ಅತ್ಯಂತ ಸಂಭ್ರಮದಿಂದ ಆಚರಣೆ ಮಾಡಲಾಗುವುದು ಎಂದು ಹೇಳಿದರು. ನಗರಸಭೆ ಎಇಇ ಸುಬ್ರಮಣಿ ಮಾತನಾಡಿ, ಪೌರಕಾರ್ಮಿಕರಿಗೆ



ಉದಯವಾಹಿನಿ ಚಿತ್ರ

45 ವರ್ಷಗಳ ಒಳಗಿನ ಮತ್ತು 45 ವರ್ಷ ಮೇಲ್ಪಟ್ಟವರ ಎರಡು ಗುಂಪುಗಳನ್ನಾಗಿ ಮಾಡಿ ಕ್ರೀಡಾಕೂಟಗಳನ್ನು ಆಯೋಜಿಸಲಾಗಿತ್ತು. ಕ್ರೀಡಾಕೂಟದಲ್ಲಿ ವಯೋಮಾನದ ತಾರತಮ್ಯವಿಲ್ಲದೆ ಎಲ್ಲಾ ಪೌರ ಸೇವ ನೌಕರರು ಸಹ ಅತ್ಯಂತ ಉತ್ಸಾಹದಿಂದ ಪಾಲ್ಗೊಂಡಿದ್ದರು. ಇದೇ ಸಂದರ್ಭದಲ್ಲಿ ನಗರಸಭೆ ಸದಸ್ಯರು ಸಹ ಕ್ರೀಡೆಯಲ್ಲಿ ಭಾಗವಹಿಸಿದ್ದು ಅತ್ಯಂತ ಸಂತಸದ ವಿಚಾರ ಎಂದರು.

ನಗರಸಭೆ ಉಪಾಧ್ಯಕ್ಷೆ ಗಿರಿಜಮ್ಮ ಗುರುವೇಗೌಡ, ಮಾಜಿ ಅಧ್ಯಕ್ಷೆ ಬಿ.ಸಿ.ಪಾರ್ವತಮ್ಮ, ಸದಸ್ಯರಾದ ಮಹಾಲಕ್ಷ್ಮಿ ಗೂಳಿಗೌಡ, ಮಂಜುಳಾ ವೆಂಕಟೇಶ್, ಪೌರ ಸೇವಾ ನೌಕರರ ಸಂಘದ ಜಿಲ್ಲಾಧ್ಯಕ್ಷ ವಿ. ವೆಂಕಟೇಶ್, ಪ್ರಧಾನ ಕಾರ್ಯದರ್ಶಿ ಕೊಲ್ಲಾಪುರಿ, ಖಜಾಂಚಿ ಪಿ.ನರಸಿಂಹ ಮತ್ತಿತರರಿದ್ದರು.

## ಕೆಎಸ್ಐಸಿ ಕಾರ್ಖಾನೆ ಮುಚ್ಚಲಾಗುತ್ತದೆ ಎಂಬುದು ವದಂತಿ

• ಉದಯವಾಹಿನಿ, ಮೈಸೂರು

ತಿ.ನರಸೀಪುರ ಪಟ್ಟಣದ ರೇಷ್ಮೆ ನೂಲು ಉತ್ಪಾದನಾ ಘಟಕದ ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡುವುದರಿಂದ ಕಾರ್ಖಾನೆ ಮುಚ್ಚಲಾಗುತ್ತದೆ ಎಂಬುದು ವದಂತಿ ಎಂದು ಕಾಂಗ್ರೆಸ್ ಮುಖಂಡ ಕೆ.ವಿ.ಮಲ್ಲೇಶ್ ಹೇಳಿದ್ದಾರೆ.

ತಿ.ನರಸೀಪುರ ಪಟ್ಟಣದಲ್ಲಿ ತಾಲ್ಲೂಕು ಕ್ರೀಡಾಂಗಣ ಇಲ್ಲ. ಇದನ್ನು ಮನಗಂಡು ಮುಖ್ಯಮಂತ್ರಿ ಸಿದ್ದರಾಮಯ್ಯ, ಜಿಲ್ಲಾ ಉಸ್ತುವಾರಿ ಸಚಿವ ಎಚ್.ಸಿ. ಮಹದೇವಪ್ಪ ಕ್ರೀಡಾಂಗಣ ನಿರ್ಮಾಣಕ್ಕೆ 6 ಕೋಟಿ ರೂ. ಅನುದಾನ ಮಂಜೂರು ಮಾಡಿಸಿದ್ದಾರೆ. ಪಟ್ಟಣದಲ್ಲಿ ಸ್ಥಳಾವಕಾಶದ ಕೊರತೆಯಿರುವುದರಿಂದ ಕೆಎಸ್ಐಸಿ ಸುಪರ್ದಿಯಲ್ಲಿರುವ 12 ಎಕರೆ ಪ್ರದೇಶದಲ್ಲಿ 5 ಎಕರೆಯನ್ನು ಬಳಸಿಕೊಳ್ಳಲು ನಿರ್ಧರಿಸಲಾಗಿದೆ.

ಈ ಬಗ್ಗೆ ಮೊದಲೇ ಕೆಎಸ್ಐಸಿ ಅಧಿಕಾರಿಗಳಿಗೆ ತಿಳಿಸಲಾಗಿದೆ. ಆಗ ಅವರು ಕ್ರೀಡಾಂಗಣ ನಿರ್ಮಾಣಕ್ಕೆ ಯಾವುದೇ ವಿರೋಧ ವ್ಯಕ್ತಪಡಿಸಿಲ್ಲ ಇಷ್ಟಾದರೂ ಪ್ರತಿಪಕ್ಷಗಳ ಕುಮ್ಮಕ್ಕಿನಿಂದ ಅವರು ಹೇಳುತ್ತಿರುವ ಸುಳ್ಳನ್ನೇ ನಿಜವೆಂದು ನಂಬಿ ಅಲ್ಲಿನ ಸಿಬ್ಬಂದಿ ಕಾರ್ಖಾನೆ ಮುಚ್ಚುತ್ತಾರೆ ಎಂದು ಪ್ರತಿಭಟನೆ ನಡೆಸುತ್ತಿರುವುದು ಅನಗತ್ಯವಾಗಿದೆ ಎಂದು ತಿಳಿಸಿದ್ದಾರೆ.

ಕೆಎಸ್ಐಸಿ ಉತ್ಪಾದನಾ ಘಟಕ ಮುಚ್ಚುವಂತಿದ್ದರೆ ಅದಕ್ಕೆ ಕ್ರೀಡಾಂಗಣ ನಿರ್ಮಾಣದ ಅಗತ್ಯವೇನು? ಇದನ್ನು ಮನಗಂಡು ಸಿಬ್ಬಂದಿ ಪ್ರತಿಭಟನೆ ವಾಪಸ್ ಪಡೆದು, ಕಾರ್ಖಾನೆಯ ಬೆಳವಣಿಗೆಗೆ ಸಹಕರಿಸಬೇಕು ಎಂದು ಮನವಿ ಮಾಡಿದ್ದಾರೆ.

**ಸ್ಥಳಾವಕಾಶದ ಕೊರತೆಯಿಂದ ಸಮಸ್ಯೆ:** ಕ್ರೀಡಾಂಗಣಕ್ಕೆ ಪಟ್ಟಣದಲ್ಲಿ ಸ್ಥಳಾವಕಾಶದ ಕೊರತೆ ಎದುರಾಗಿದೆ. ಕ್ರೀಡಾಂಗಣವನ್ನು ಪಟ್ಟಣದಿಂದ ಹೊರಗೆ ದೂರದಲ್ಲಿ ಎಲ್ಲೋ ನಿರ್ಮಿಸಲು ಸಾಧ್ಯವಿಲ್ಲ. ಹಾಗೊಮ್ಮೆ ನಿರ್ಮಿಸಿದರೆ ಅಲ್ಲಿಗೆ ಕ್ರೀಡಾಪಟುಗಳು ತೆರಳಿ ಅಭ್ಯಾಸ ನಡೆಸುವುದು ಕಷ್ಟಸಾಧ್ಯ ಎಂದು ಹೇಳಿದ್ದಾರೆ. ಕ್ರೀಡಾಂಗಣದ ಅಭಿವೃದ್ಧಿ ಜತೆಗೆ ಸರಕಾರ ಪಾರಂಪರಿಕ ಕಾರ್ಖಾನೆಯ ಅಭಿವೃದ್ಧಿಗೂ ಗಮನಹರಿಸಬೇಕಿದೆ.

ರಾಜಪ್ರಭುತ್ವದ ಅಡಿಯಲ್ಲಿ ಪ್ರಾರಂಭಗೊಂಡು ಪ್ರಜಾಪ್ರಭುತ್ವದಲ್ಲಿಯೂ ತನ್ನ ಅಸ್ತಿತ್ವ ಉಳಿಸಿಕೊಂಡಿರುವ ಕಾರ್ಖಾನೆಗೆ ಸರಕಾರ ಅಗತ್ಯ ಭೂಮಿ, ಹೆಚ್ಚುವರಿ ಸ್ಥಳಾವಕಾಶ ನೀಡಬೇಕು. ಅಲ್ಲದೆ, ಕಾರ್ಖಾನೆಯನ್ನು ಪಟ್ಟಣ ಹೊರಹೊಲಯಕ್ಕೆ ಸ್ಥಳಾಂತರಿಸಿ ಸುಸಜ್ಜಿತ ಕಟ್ಟಡ, ಸಿಬ್ಬಂದಿಗೆ ವಸತಿ ನಿಲಯ, ಹೊಸ ಯಂತ್ರೋಪಕರಣಗಳೊಂದಿಗೆ ಅಗತ್ಯ ಮೂಲಸೌಲಭ್ಯ ಕಲ್ಪಿಸಬೇಕು. ಆ ಮೂಲಕ ಪಾರಂಪರಿಕ ಕೊಂಡಿಯೊಂದನ್ನು ಕಾಪಾಡಬೇಕು ಎಂದು ಪ್ರಕಟಣೆ ಮೂಲಕ ಮನವಿ ಮಾಡಿದ್ದಾರೆ.



ಉದಯವಾಹಿನಿ ಚಿತ್ರ

> ತಿ ನರಸೀಪುರದಲ್ಲಿರುವ ಕೆಎಸ್ಐಸಿ ಕಾರ್ಖಾನೆಯನ್ನು ಮುಚ್ಚಿ, ಕ್ರೀಡಾಂಗಣ ನಿರ್ಮಿಸಲಾಗುತ್ತದೆ ಎನ್ನುವ ವಿಚಾರ ದೊಡ್ಡ ಮಟ್ಟದಲ್ಲಿ ಚರ್ಚೆಯಾಗುತ್ತಿದೆ. ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ. ಕ್ರೀಡಾಂಗಣ ನಿರ್ಮಾಣ ಮಾಡುವುದರಿಂದ ಕಾರ್ಖಾನೆ ಮುಚ್ಚಲಾಗುತ್ತದೆ ಎಂಬುದು ವದಂತಿ.
> –ಕೆ.ವಿ.ಮಲ್ಲೇಶ್, ಕಾಂಗ್ರೆಸ್ ಮುಖಂಡ

## ನಂದಿ ಬೆಟ್ಟದಲ್ಲಿ ಬೆಂಕಿ : ಹತ್ತಾರು ಎಕರೆ ಅರಣ್ಯ ನಾಶ

• ಉದಯವಾಹಿನಿ, ಚಿಕ್ಕಬಳ್ಳಾಪುರ

ವಿಶ್ವವಿಖ್ಯಾತ ಪ್ರವಾಸಿ ತಾಣ ನಂದಿ ಬೆಟ್ಟದಲ್ಲಿ ಸಂಜೆ ಆಕಸಿಕ ಬೆಂಕಿ ಕಾಣಿಸಿಕೊಂಡು ಗಿರಿಧಾಮದ ಸುತ್ತಲಿನ ಹತ್ತಾರು ಎಕರೆ ಅರಣ್ಯ ಪ್ರದೇಶ ಬೆಂಕಿಗಾಹುತಿಯಾದ ಘಟನೆ ಸಂಭವಿಸಿದ್ದು ಇದು ಕಿಡಿಗೇಡಿಗಳ ಕೃತ್ಯದಿಂದಲೇ ನಡೆದಿರಬಹುದೆಂಬ ಅನುಮಾನ ವ್ಯಕ್ತವಾಗಿದೆ. ನಂದಿ ಬೆಟ್ಟದ ಸುತ್ತಮುತ್ತ ಜಾನುವಾರು ಮೇಯಿಸಲು ಬರುವ ಹಾಗೂ ನಂದಿ ಬೆಟ್ಟ ವೀಕ್ಷಣೆ ಮಾಡಲು ಬರುವ ಕೆಲವು ಪೋಕಾರಿಗಳು ಒಣ ಹುಲ್ಲನ್ನು ಸುಡುತ್ತಿದ್ದಾರೆ ಎನ್ನುವ ಹನುಮಾನ ಎಲ್ಲೆಡೆ ಮೂಡಿದೆ. ಅದರಂತೆ ಸುಲ್ತಾನಪೇಟೆ ಗ್ರಾಮದ ಬಳಿಯ ಬೆಟ್ಟಗಳ ಬುಡದಿಂದ ಭಾರಿ ಬೆಂಕಿ ಹರಡಿದೆ ಮತ್ತು ಸರ್ಪ ಜ್ವಾಲೆಯು ಬೆಟ್ಟಗಳ ತುದಿಯವರೆಗೆ ಮೇಲಕ್ಕೆ ಹಾರಿತು.

ಪಾರಂಪರಿಕ ಪ್ರವಾಸೋದ್ಯಮ ತಾಣಗಳನ್ನು ಅಭಿವದ್ಧಿಪಡಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಘೋಷಿಸಿರುವ ಪಟ್ಟಿಯಲ್ಲಿ ನಂದಿ ಬೆಟ್ಟವೂ ಒಂದು. ಆದಾಗ್ಯೂ, ಜನಪ್ರಿಯ ಗಿರಿಧಾಮಕ್ಕೆ ಈ ಉತ್ತೇಜನಕ್ಕೆ ಬೆದರಿಕೆ ಹಾಕುವುದು ಹಳೆಯ ಅಭ್ಯಾಸವಾಗಿದ್ದು, ಇದು ಬೆಟ್ಟಗಳ ಪ್ರಗತಿಯನ್ನು ಹಾಳುಮಾಡುತ್ತಿದೆ, ಜೀವವೈವಿಧ್ಯತೆಗೆ ಹಾನಿ



ಉದಯವಾಹಿನಿ ಚಿತ್ರ

ಮಾಡುತ್ತಿದೆ. ಗ್ರಾಮಸ್ಥರು ತಮ ದನಗಳನ್ನು ಪೋಷಿಸಲು ಹೊಸ ಹುಲ್ಲು ಬೆಳೆಯಲು ಹಳೆಯ ಹುಲ್ಲನ್ನು ಸುಡುವ ಸಂದರ್ಭದಲ್ಲಿ ಬೆಟ್ಟಕ್ಕೆ ಬೆಂಕಿ ಹತ್ತಿ ಉರಿದಿದೆ ಎಂಬ ಶಂಕೆ ವ್ಯಕ್ತವಾಗಿದೆ. ಬೆಟ್ಟದ ಮಧ್ಯ ಭಾಗದಲ್ಲಿ ಹೊತ್ತಿಕೊಂಡ ಬೆಂಕಿ ಕ್ಷಣಕ್ಷಣಕ್ಕೂ ವ್ಯಾಪಿಸಿ, ಸುಲ್ತಾನ್ ಪೇಟೆ ಭಾಗದ ಕಡೆಗೆ ಕೆನ್ನಾಲಿಗೆ ಚಾಚಿದ ದಶ್ಯಗಳು ದೂರದಿಂದಲೇ ಗೋಚರಿಸಿವೆ ಎಂಬುದು ದಾರಿಹೋಕರ ಮಾಹಿತಿಯಾಗಿದ್ದು ಬೆಂಕಿಯ ಜ್ವಾಲೆಗಳು ಎತ್ತರಕ್ಕೆ ಏರಿ ದಟ್ಟ ಹೊಗೆ ಆಕಾಶ ಮುಟ್ಟಿದಂತಿದ್ದು, ಸ್ಥಳೀಯರು ಆತಂಕಗೊಂಡಿದ್ದಾರೆ. ಬೆಂಕಿ ಕಾಣಿಸಿಕೊಂಡ ಪ್ರದೇಶ ಕಡು ಬಂಡೆಗಲ್ಲುಗಳಿಂದ ಕೂಡಿದ್ದು, ಅಗ್ನಿಶಾಮಕ ದಳದ ವಾಹನಗಳು ನೇರವಾಗಿ ತಲುಪಲು ಸಾಧ್ಯವಾಗದಂತಹ ಸ್ಥಳವಾಗಿರುವುದರಿಂದ ಬೆಂಕಿ ನಂದಿಸುವ ಕಾರ್ಯದಲ್ಲಿ ಅಡಚಣೆ ಎದುರಾಗಿದೆ. ಸಿಬ್ಬಂದಿ ಪಾದಚಾರಿ ಮಾರ್ಗದಿಂದಲೇ ಮೇಲಕ್ಕೆ ತೆರಳಿ ಬೆಂಕಿ ನಿಯಂತ್ರಣಕ್ಕೆ ಪ್ರಯತ್ನಿಸುತಿದ್ದರಾದರೂ ಬೆಂಕಿಯ ತೀವ್ರತೆ ಹೆಚ್ಚಾಗಿ ಕಲ್ಲು ಬಂಡೆಗಳಲ್ಲಿ ತೆರಳಿ ಅಗ್ನಿಶಾಮಕ ಸಿಬ್ಬಂದಿ ಏನೂ ಮಾಡದ ಪರಿಸ್ಥಿತಿ ಉಂಟಾಗಿತ್ತು. ಘಟನೆಯ ದಶ್ಯಗಳನ್ನು ಸುಲ್ತಾನ್ ಪೇಟೆ ಸ್ಥಳೀಯರೊಬ್ಬರು ತಮ ಮೊಬೈಲ್ ಫೋನ್‌ಗಳಲ್ಲಿ ಸೆರೆ ಹಿಡಿದು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದು, ಈ ವಿಡಿಯೋಗಳು ಸಖತ್ ವೈರಲ್ ಆಗಿವೆ.ಸ್ಥಳಕ್ಕೆ ಪೊಲೀಸ್ ಸಿಬ್ಬಂದಿ ಭೇಟಿ ನೀಡಿ ಪರಿಸ್ಥಿತಿ ಅವಲೋಕನ ನಡೆಸಿರುವ ಬಗ್ಗೆ ಸ್ಥಳೀಯರಿಂದ ಮಾಹಿತಿ ಲಭ್ಯವಾಗಿದೆ.

ಬೆಂಕಿ ಅನಾಹುತದ ನಿಖರ ಕಾರಣ ಮತ್ತು ಹಾನಿ ಪ್ರಮಾಣ ಕುರಿತು ಅಧಿಕತ ಮಾಹಿತಿ ತಿಳಿದು ಬಂದಿಲ್ಲ. ಒಟ್ಟಾರೆಯಾಗಿ ಬೆಂಕಿಯ ಕೆನ್ನಾಲಿಗೆಗೆ ಅನೇಕ ಪ್ರಾಣಿ ಸಂಕುಲ ಆಹುತಿ ಆಗಿದ್ದಿರಬಹುದೆಂದು ಅಂದಾಜಿಸಲಾಗಿದೆ. ಪ್ರಕೃತಿ ಸೌಂದರ್ಯದ ಸಂಕೇತವಾದ ನಂದಿ ಬೆಟ್ಟದಲ್ಲಿ ಬೇಸಿಗೆಯಲ್ಲಿ ಈ ರೀತಿಯ ಘಟನೆಗಳು ಆಗಿಂದಾಗ್ಗೆ ಸಂಭವಿಸುವುದು ಪರಿಸರ ಪ್ರೇಮಿಗಳಲ್ಲಿ ತೀವ್ರ ಆತಂಕ ಮೂಡಿಸಿದೆ. ಜಿಲ್ಲಾಡಳಿತ ಅರಣ್ಯ ಇಲಾಖೆ ಇಂತಹ ಘಟನೆಗಳ ಬಗ್ಗೆ ಜಾಗೃತಿವಹಿಸಲಿ ಎನ್ನುವುದು ಸಾರ್ವಜನಿಕರ ಆಗ್ರಹವಾಗಿದೆ.

## ಮೂಲಸೌಕರ್ಯವಿಲ್ಲದೆ ಸೊರಗಿದ ಉಪ್ಪಾರ ಬೀದಿ : ರಂಗನಾಥಪುರದಲ್ಲಿ ಅದ್ವಾನ

• ಉದಯವಾಹಿನಿ, ಗುಂಡ್ಲುಪೇಟೆ

ತಾಲ್ಲೂಕಿನ ರಂಗನಾಥಪುರ ಗ್ರಾಮದ ಉಪ್ಪಾರ ಬೀದಿಗೆ ರಸ್ತೆ ಹಾಗೂ ಒಳಚರಂಡಿ ವ್ಯವಸ್ಥೆಯಿಲ್ಲದೆ ಅಶುಚಿತ್ವದ ಜೊತೆಗೆ ವಾಸಿಗಳಿಗೆ ತಿರುಗಾಡಲು ಸಹ ಮಾರ್ಗವಿಲ್ಲದೆ ಪರಿತಪಿಸುವಂತಾಗಿದೆ ಎಂದು ಗ್ರಾಮದ ಉಪ್ಪಾರ ಬೀದಿಯ ಮುಖಂಡ ರಂಗಪ್ಪ ಆರೋಪಿಸಿದ್ದಾರೆ. ನಿಟ್ರೆ ಗ್ರಾಮಪಂಚಾಯತಿ ವ್ಯಾಪ್ತಿಯ ರಂಗನಾಥಪುರ ಗ್ರಾಮದ ಉಪ್ಪಾರ ಬೀದಿಯಲ್ಲಿ ಸುಮಾರು 20 ಕುಟುಂಬಗಳು ವಾಸಿಸುತ್ತಿವೆ ಆದರೆ ಗ್ರಾಮಪಂಚಾಯತಿ ವತಿಯಿಂದ ಬಡಾವಣೆಗೆ ಬೇಕಾದ ಮೂಲ ಸೌಕರ್ಯ ಕಲ್ಪಿಸುವಲ್ಲಿ ಗ್ರಾಮಪಂಚಾಯತಿ ಆಡಳಿತ ಮಂಡಳಿ ವಿಫಲವಾಗಿರುವ ಹಿನ್ನೆಲೆ ನಿವಾಸಿಗಳು ಪರದಾಡುವಂತಾಗಿದೆ. ಗ್ರಾಮದ ಈ ಬಡಾವಣೆಯಲ್ಲಿ ಕಳೆದ ಹತ್ತು ವರ್ಷಗಳಿಂದ 20 ಕುಟುಂಬಗಳು ವಾಸವಾಗಿವೆ , ಕಳೆದ ಬಾರಿ ಚುನಾವಣಾ ಸಂದರ್ಭದಲ್ಲಿ ಬೀದಿಯ ಕೆಳಭಾಗಗಳಲ್ಲಿ ರಸ್ತೆ ಹಾಗೂ ಒಳಚರಂಡಿ ವ್ಯವಸ್ಥೆ ಮಾಡಿದ್ದನ್ನ ಹೊರತುಪಡಿಸಿ ನಿವಾಸಿಗಳ ಸಂಚಾರಕ್ಕೆ ಸುಗಮ ವ್ಯವಸ್ಥೆ ಮಾಡುವಲ್ಲಿ ಅಧಿಕಾರಿಗಳು ನಿರ್ಲಕ್ಷ್ಯ ತೋರಿದ್ದಾರೆ ಎಂಬ ಗಂಭೀರ ಆರೋಪ ಮಾಡಿದ್ದಾರೆ. ಬಡಾವಣೆಯ ನೀರು ಹರಿದು ಹೋಗಲು ತಾತ್ಕಾಲಿಕ ವ್ಯವಸ್ಥೆ ಮಾಡಲಾಗಿತ್ತಾದರೂ ಕೆಲ ಪ್ರಭಾವಿಗಳು ಜೆಸಿಬಿ ಬಳಸಿ ಚರಂಡಿ ಮುಚ್ಚುವುದರ ಮೂಲಕ ರಸ್ತೆಗೆ ಬಿಟ್ಟಿದ್ದ ಸ್ಥಳವನ್ನ ಅತಿಕ್ರಮಿಸಿ ತಂತಿ ಬೇಲಿ ಅಳವಡಿಸಿಕೊಂಡಿರುವುದರಿಂದ ಪ್ರತಿನಿತ್ಯ ತೊಂದರೆ ಅನುಭವಿಸುತ್ತಿದ್ದೇವೆ ಹಾಗಾಗಿ ಅಕ್ರಮವಾಗಿ ತಂತಿಬೇಲಿ ಅಳವಡಿಸಿರುವುದನ್ನ ತೆರವುಗೊಳಿಸಿ ಬಡಾವಣೆ ನಿವಾಸಿಗಳಿಗೆ ತಿರುಗಾಡಲು ಸೂಕ್ತ ವ್ಯವಸ್ಥೆ ಕಲ್ಪಿಸಿಕೊಡಬೇಕು ಎಂದು ಒತ್ತಾಯಿಸಿದ್ದಾರೆ.



ಉದಯವಾಹಿನಿ ಚಿತ್ರ

> ಗ್ರಾಮದ ಉಪ್ಪಾರ ಬಡಾವಣೆಯಲ್ಲಿನ ರಸ್ತೆ ಜಾಗವು ಕಂದಾಯ ಇಲಾಖೆಗೆ ಸೇರಿರುವ ಹಿನ್ನೆಲೆ ರಸ್ತೆ ವ್ಯವಸ್ಥೆ ಮಾಡುವ ನಿಟ್ಟಿನಲ್ಲಿ ನಿರ್ಧಾರ ತೆಗೆದುಕೊಳ್ಳುವ ಅಧಿಕಾರ ಪಂಚಾಯತಿಗಿಲ್ಲ, ನಿವಾಸಿಗಳ ಆರೋಪದಂತೆ ಅತಿಕ್ರಮಿಸಿರುವವರು ದಾಖಲಾತಿ ನೀಡಬೇಕಾಗುತ್ತದೆ, ಗ್ರಾಮಠಾಣ ವ್ಯಾಪ್ತಿಗೆ ಸೇರಿದ್ದರೆ ಅಳತೆ ಮಾಡುವ ಮೂಲಕ ನೋಟೀಸ್ ಜಾರಿ ಮಾಡುವ ಅಧಿಕಾರವಿರುತ್ತದೆ, ಕೂಡಲೇ ಸ್ಥಳಪರಿಶೀಲನೆ ನಡೆಸಿ ಒತ್ತುವರಿ ಮಾಹಿತಿ ಪಡೆದು ತಿಳಿವಳಿಕೆ ನೀಡಲಾಗುವುದು.
> –ಶೋಭಾ, ಪಿಡಿಓ , ನಿಟ್ರೆ ಗ್ರಾಮಪಂಚಾಯತಿ

## ಬಿಎಂಟಿಸಿ, ವಾಯು ವಜ್ರ ಬಸ್ ಸೌಲಭ್ಯಕ್ಕೆ ಚಾಲನೆ

• ಉದಯವಾಹಿನಿ, ರಾಮನಗರ

ಬೆಂಗಳೂರು ನಗರದಿಂದ 40 ಕಿ.ಮೀ. ಸುತ್ತಮುತ್ತಲ ಜನರಿಗೆ ಅನುಕೂಲವಾಗಲೆಂದು ಬಿಎಂಟಿಸಿ ಬಸ್ ವ್ಯವಸ್ಥೆ ಕಲ್ಪಿಸಲಾಗುತ್ತಿದ್ದು, ಸದ್ಯದಲ್ಲಿಯೇ ಮಾಲೂರು, ಎಚ್.ಕ್ರಾಸ್ ಸ್ಥಳಗಳಿಗೆ ನಗರ ಸಾರಿಗೆ ಸೇವೆ ಒದಗಿಸಲಾಗುವುದು ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು. ನಗರದ ಬಸ್ ನಿಲ್ದಾಣದಲ್ಲಿ ಬುಧವಾರ ರಾಮನಗರದಿಂದ ಬೆಂಗಳೂರು ನಗರಕ್ಕೆ ಬಿಎಂಟಿಸಿ ಹಾಗೂ ವಾಯು ವಜ್ರ, ಹವಾ ನಿಯಂತ್ರಿತ ಬಸ್ ಸೌಲಭ್ಯಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಸೂಕ್ತ ಸ್ಥಳಾವಕಾಶ ನೀಡಿದರೆ ರಾಮನಗರ ಮತ್ತು ಹಾರೋಹಳ್ಳಿಯಲ್ಲಿ ತಕ್ಷಣ ಬಸ್ ನಿಲ್ದಾಣ ನಿರ್ಮಾಣ ಕಾರ್ಯ ಪ್ರಾರಂಭಿಸಲಾಗುವುದು ಹಾಗೂ ಜಿಲ್ಲೆಯ ಬಿಡದಿ, ಚನ್ನಪಟ್ಟಣಕ್ಕೆ ಹೆಚ್ಚುವರಿ ಬಸ್ ಸೌಲಭ್ಯ ಕಲ್ಪಿಸಲಾಗುವುದು ಎಂದು ತಿಳಿಸಿದರು. ಮಹಿಳೆಯರಿಗೆ ನೀಡಿರುವ ಉಚಿತ ಸಾರಿಗೆ ಸೌಲಭ್ಯ ಶಕ್ತಿ ಯೋಜನೆಯಡಿ ಇದುವರೆಗೆ 690 ಕೋಟಿ ಮಹಿಳೆಯರು ರಾಜ್ಯದಲ್ಲಿ ಪ್ರಯಾಣಿಸಿದ್ದಾರೆ. ಅಲ್ಲದೆ ಸರ್ಕಾರದ ಯೋಜನೆಯಿಂದ ರಾಜ್ಯದಲ್ಲಿ ಹೊಸ ಉದ್ಯೋಗಗಳು ಸೃಷ್ಟಿಯಾಗಿವೆ ಎಂದರು.

ಶಾಸಕ ಇಕ್ಬಾಲ್ ಹುಸೇನ್ ಮಾತನಾಡಿ, ರಾಮನಗರ ಜಿಲ್ಲಾ ಕೇಂದ್ರದಲ್ಲಿ ಸೂಕ್ತ ಬಸ್ ನಿಲ್ದಾಣದ ಅಗತ್ಯವಿದ್ದು ಸಚಿವರು ಇತ್ತ ಗಮನಹರಿಸಬೇಕು. ಬಸ್ ನಲ್ದಾಣವಿಲ್ಲದೆ ಪ್ರಯಾಣಿಕರು



ಉದಯವಾಹಿನಿ ಚಿತ್ರ

ಪರದಾಡುತ್ತಿದ್ದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಹೊಸ ಬಸ್ ನಿಲ್ದಾಣ ನಿರ್ಮಾಣಕ್ಕೆ ಕ್ರಮವಹಿಸಬೇಕು ಎಂದು ಮನವಿ ಮಾಡಿದರು.

ಜಿಲ್ಲಾಧಿಕಾರಿ ಯಶವಂತ್ ವಿ.ಗುರುಕರ್, ಬೆಮಸಾಸಂ ಅಧ್ಯಕ್ಷರಾದ ಆರಾಧ್ಯ, ಉಪಾಧ್ಯಕ್ಷ ನಿಕೇತ್‌ಕುಮಾರ್, ನಗರಸಭೆ ಅಧ್ಯಕ್ಷ ಕೆ.ಶೇಷಾದ್ರಿ, ಜಿಲ್ಲಾ ಗ್ಯಾರಂಟಿ ಸಮಿತಿ ಅಧ್ಯಕ್ಷ ಕೆ.ರಾಜು, ತಾಲ್ಲೂಕು ಅಧ್ಯಕ್ಷ ವಿ.ಎಚ್.ರಾಜು, ಅಶೋಕ್, ರಾಮನಗರ ಪ್ರಾಧಿಕಾರದ ಅಧ್ಯಕ್ಷ ಚೇತನ್‌ಕುಮಾರ್, ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ಕೆ.ಟಿ ಶಿವಕುಮಾರ್, ಮುಖ್ಯ ಸಂಚಾರ ವ್ಯವಸ್ಥಾಪಕ ಪ್ರಭಾಕರ್ ರೆಡ್ಡಿ ಮತ್ತಿತರರು ಇದ್ದರು.

## ಕುಡಿವ ನೀರಿನ ಸಮಸ್ಯೆ ಆಗದಂತೆ ಕ್ರಮವಹಿಸಲು ಸೂಚನೆ

• ಉದಯವಾಹಿನಿ, ಚಿಕ್ಕನಾಯಕನಹಳ್ಳಿ

ತಾಲ್ಲೂಕಿನ 27 ಗ್ರಾಮ ಪಂಚಾಯಿತಿ, ಪುರಸಭೆ ಹಾಗೂ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಎಲ್ಲೂ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಅಧಿಕಾರಿಗಳು ಮುನ್ನೆಚ್ಚರಿಕೆ ವಹಿಸಬೇಕು ಎಂದು ಶಾಸಕ ಸಿ.ಬಿ. ಸುರೇಶ್‌ಬಾಬು ಸೂಚನೆ ನೀಡಿದರು. ತಾಲ್ಲೂಕು ಆಡಳಿತ ಸೌಧದಲ್ಲಿ ನಡೆದ ಟಾಸ್ಕ್ ಫೋರ್ಸ್ ಸಮಿತಿ ಸಭೆಯಲ್ಲಿ ಮಾತನಾಡಿದರು. ಗ್ರಾಮಗಳಲ್ಲಿ ನೀರು ವ್ಯರ್ಥವಾಗಿ ಹರಿಯದಂತೆ ನೋಡಿಕೊಳ್ಳುವುದು ವಾಟರ್‌ಮನ್‌ಗಳ ಕರ್ತವ್ಯ. ಅವರು ಸರಿಯಾದ ರೀತಿಯಲ್ಲಿ ಕಾರ್ಯನಿರ್ವಹಿಸುವಂತೆ ಅಧಿಕಾರಿಗಳು ನಿಗಾ ಇಡಬೇಕು. ನೀರಿನ ಲಭ್ಯತೆ ಬಗ್ಗೆ ಪ್ರತಿವಾರ ನಿಖರ ಮಾಹಿತಿ ನೀಡಬೇಕು. ನೀರಿನ ಅಭಾವವಿರುವ ಕಡೆಗಳಲ್ಲಿ ಅಗತ್ಯವಿದ್ದರೆ ಖಾಸಗಿ ಬೋರ್‌ವೆಲ್‌ಗಳಿಂದ ನೀರನ್ನು ಪಡೆದು ಸಾರ್ವಜನಿಕರಿಗೆ ವಿತರಿಸಲು ಕ್ರಮ ಕೈಗೊಳ್ಳಬೇಕು ಎಂದರು. ಸರ್ಕಾರಿ ಬೋರ್‌ವೆಲ್‌ಗಳ ಸ್ಥಿತಿಗತಿಯ ಬಗ್ಗೆ ಅಧಿಕಾರಿಗಳಿಗೆ ಪೂರ್ಣ ಮಾಹಿತಿ ಇರಬೇಕು. ಪ್ರಸ್ತುತ ಜಾತ್ರೆ ಹೆಚ್ಚಿರುವುದರಿಂದ ಸಾಂಕ್ರಾಮಿಕ ರೋಗ ಹರಡುವ ಸಾಧ್ಯತೆ ಹೆಚ್ಚು. ಆದ್ದರಿಂದ ಆರೋಗ್ಯ ಇಲಾಖೆ ಮತ್ತು ಪಂಚಾಯಿತಿ ಅಧಿಕಾರಿಗಳು ಜಾತ್ರಾ ಸ್ಥಳಗಳಲ್ಲಿ ನೈರ್ಮಲ್ಯಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಬೇಸಿಗೆ ಹಿನ್ನೆಲೆಯಲ್ಲಿ ಜಾನುವಾರುಗಳಿಗೆ ಮೇವು ಮತ್ತು ನೀರಿನ ಕೊರತೆಯಾಗದಂತೆ



ಉದಯವಾಹಿನಿ ಚಿತ್ರ

**ನೈರ್ಮಲ್ಯಕ್ಕೆ ಹೆಚ್ಚಿನ ಆದ್ಯತೆ**

ಪಶುಪಾಲನಾ ಇಲಾಖೆ ಗಮನಹರಿಸಬೇಕು ಎಂದು ಹೇಳಿದರು. ತಹಶೀಲ್ದಾರ್ ಮಮತಾ ಎಂ.ಮಾತನಾಡಿ, ನೋಡೆಲ್ ಅಧಿಕಾರಿಗಳು ಪಂಚಾಯಿತಿಗಳೊಂದಿಗೆ ಸಕ್ರಿಯ ಸಂಪರ್ಕದಲ್ಲಿರಬೇಕು. ನಾನು ಗ್ರಾಮಗಳಿಗೆ ಭೇಟಿ ನೀಡಿದಾಗ ನೀರು ಪೋಲಾಗುತ್ತಿರುವುದು ಕಂಡುಬಂದಿದೆ. ಇದನ್ನು ತಕ್ಷಣ ನಿಲ್ಲಿಸಬೇಕು. ಬೋರ್‌ವೆಲ್‌ಗಳ ಆಳ, ನೀರಿನ ಲಭ್ಯತೆಯ ದಾಖಲೆಗಳೊಂದಿಗೆ ಸಭೆಗೆ ಹಾಜರಾಗಬೇಕು ಎಂದರು. ಪಶು ಇಲಾಖೆ ಸಹಾಯಕ ನಿರ್ದೇಶಕ ಕಾಂತರಾಜು ಮಾತನಾಡಿ, ತಾಲ್ಲೂಕಿನ ರೈತರಲ್ಲಿ ಮುಂದಿನ 49 ವಾರಗಳಿಗೆ ಆಗುವಷ್ಟು ಮೇವಿನ ಸಂಗ್ರಹವಿದೆ. ಸದ್ಯಕ್ಕೆ ಮೇವಿನ ಅಭಾವ ಉಂಟಾಗುವ ಸಾಧ್ಯತೆ ಇಲ್ಲ ಎಂದು ಮಾಹಿತಿ ನೀಡಿದರು. ಸದ್ಯಕ್ಕೆ ನೀರಿನ ಸಮಸ್ಯೆ ಎದುರಿಸುತ್ತಿರುವ ಹೊನ್ನೇಬಾಗಿ, ಸಿದ್ದನಕಟ್ಟೆ ಹಾಗೂ ದಸೂಡಿಯ ಮಾಳಮ್ಮನಹಟ್ಟಿ ಗ್ರಾಮಗಳಲ್ಲಿ ತಕ್ಷಣವೇ ಸಮಸ್ಯೆ ಬಗೆಹರಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

## ಮಣ್ಣು ಸಾಗಣೆ: ಕ್ರಮಕ್ಕೆ ಆಗ್ರಹ

• ಉದಯವಾಹಿನಿ, ತುಮಕೂರು

ಹೋಬಳಿಯ ಬಂದ್ರ ಗ್ರಾಮದಲ್ಲಿ ಸರ್ಕಾರಕ್ಕೆ ಸೇರಿದ ಗೋಮಾಳದಿಂದ ಅಕ್ರಮವಾಗಿ ಮಣ್ಣು ತೆಗೆದು ಸಾಗಣೆ ಮಾಡುತ್ತಿದ್ದು, ಕ್ರಮ ಕೈಗೊಳ್ಳುವಂತೆ ಗ್ರಾಮಸ್ಥರು ಒತ್ತಾಯಿಸಿದ್ದಾರೆ. ಗೋಮಾಳದಲ್ಲಿ ಅಕ್ರಮವಾಗಿ ಜೆಸಿಬಿ ಯಂತ್ರ ಬಳಸಿ ಟಿಪ್ಪರ್, ಟ್ರ್ಯಾಕ್ಟರ್‌ಗಳ ಮೂಲಕ ರಾತ್ರೋರಾತ್ರಿ ಸಾವಿರಾರು ಟನ್‌ಗಳಷ್ಟು ಮಣ್ಣು ತೆಗೆದು ಬೇರೆಡೆ ದಾಸ್ತಾನು ಮಾಡಲಾಗುತ್ತಿದೆ. ನಂತರ ರಾಜಾರೋಷವಾಗಿ ಮಾರಾಟ ಮಾಡಲಾಗುತ್ತಿದೆ. ಸರ್ಕಾರಕ್ಕೆ ಸಂದಾಯವಾಗಬೇಕಿದ್ದ ತೆರಿಗೆ ಕಟ್ಟದೆ ವಂಚಿಸಲಾಗುತ್ತಿದೆ ಎಂದು ಆರೋಪಿಸಿದ್ದಾರೆ.



ಉದಯವಾಹಿನಿ ಚಿತ್ರ


ಈ ಬಗ್ಗೆ ಗಣಿ, ಭೂ ವಿಜ್ಞಾನ ಇಲಾಖೆಗೆ ದೂರು ಸಲ್ಲಿಸಿದ್ದರೂ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಗಣಿ ಇಲಾಖೆ, ಕಂದಾಯ ಇಲಾಖೆ ಅಧಿಕಾರಿಗಳು, ಪೊಲೀಸರು ಶಾಮೀಲಾಗಿ ಅಕ್ರಮವಾಗಿ ಮಣ್ಣು ತೆಗೆದು ಮಾರಾಟ ಮಾಡಲು ನೆರವಾಗುತ್ತಿದ್ದಾರೆ. ಜಿಲ್ಲಾ ಆಡಳಿತ ಕಣ್ಣುಮುಚ್ಚಿ ಕುಳಿತಿದೆ ಎಂದು ದೂರಿದ್ದಾರೆ. ರೈತರೊಬ್ಬರು ತಮ್ಮ ಜಮೀನಿಗೆ ಮಣ್ಣು ಸಾಗಣೆ ಮಾಡಿದರೆ ಪ್ರಕರಣ ದಾಖಲಿಸಲಾಗುತ್ತಿದೆ. ಆದರೆ ದಂಧೆ ನಡೆಸುವವರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಭೂ ಮಾಫಿಯಾಗೆ ಜಿಲ್ಲಾ ಆಡಳಿತ ಮಣಿದಿದೆ. ಮಣ್ಣು ಸಾಗಣೆ ತಡೆಯದಿದ್ದರೆ ಹೋರಾಟ ನಡೆಸಲಾಗುವುದು ಎಚ್ಚರಿಸಿದ್ದಾರೆ.

# ನಿಮ್ಮೆಲ್ಲರ ಆಶೀರ್ವಾದ ನನ್ನ ಮೇಲೆ ಮುಂದಕ್ಕಾದರೂ ಇರುತ್ತದೆ

### ನಾವು ಸುಳ್ಳು ಹೇಳುವವರಲ್ಲ, ಅತ್ತು ನಾಟಕ ಮಾಡುವವರಲ್ಲ: ಡಿಕೆ ಸುರೇಶ್ ಟಾಂಗ್ ಕೊಟ್ಟಿದ್ದು ಯಾರಿಗೆ?

• ಉದಯವಾಹಿನಿ, ಮಾಗಡಿ

ನಾವು ಸುಳ್ಳು ಹೇಳುವವರಲ್ಲ, ಅತ್ತು ನಾಟಕ ಮಾಡುವವರಲ್ಲ. ಬೆಂಗಳೂರು ದಕ್ಷಿಣ ಜಿಲ್ಲೆಯನ್ನು ನಂ.1 ಮಾಡುವುದು ಶಿವಕುಮಾರ್ ಅವರ ಕನಸು. ಹೀಗಂದವರು ಬಮೂಲ್ ಅಧ್ಯಕ್ಷ ಡಿ.ಕೆ.ಸುರೇಶ್. ಮಾಗಡಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು,ಮಾಗಡಿ ಜನತೆ ಅದೃಷ್ಟವಂತರು, ನನ್ನನ್ನು ಸೋಲಿಸಿ ನನ್ನಿಂದಲೂ ಕೆಲಸ ಮಾಡಿಸಿಕೊಳ್ಳುತ್ತಿದ್ದೀರಿ ಎಂದರು. ಮಾಗಡಿ ಕೆಂಪೇಗೌಡರು ಬೆಂಗಳೂರನ್ನು ಕಟ್ಟಿದರು. ಬೆಂಗಳೂರು ದಕ್ಷಿಣ ಜಿಲ್ಲೆಗೆ ನೀರಿನ ಅಭಾವ ನೀಗಿಸುವ ಕೆಲಸವನ್ನ ಡಿ.ಕೆ.ಶಿವಕುಮಾರ್ ಅವರು ಮಾಡುತ್ತಿದ್ದಾರೆ. ಬೆಂಗಳೂರು ದಕ್ಷಿಣ ಜಿಲ್ಲೆಯನ್ನು ರಾಜ್ಯದಲ್ಲಿಯೇ ನಂ.1 ಮಾಡುವ ಕನಸು ಶಿವಕುಮಾರ್ ಅವರದ್ದು ಎಂದು ಅವರು ಬಣ್ಣಿಸಿದರು. ನಾವು ಸುಳ್ಳು ಹೇಳಿ ಕೆಲಸ ಮಾಡುವವರಲ್ಲ, ನಿಮ್ಮ ಬಳಿ ಅತ್ತು ಕರೆದು ನಾಟಕ ಮಾಡುವವರಲ್ಲ. ನಾನು ಕೊಟ್ಟ ಮಾತನ್ನು ಉಳಿಸಿಕೊಳ್ಳುವವನು, ಕೊಟ್ಟ ಭರವಸೆ ಈಡೇರುವ ತನಕ ವಿಶ್ರಾಂತಿ ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದರು.



ಮಾಗಡಿಯ ಅಭಿವೃದ್ಧಿ 2027– 28 ಕ್ಕೆ ಅಚ್ಚರಿ ಮೂಡಿಸಲಿದೆ. ಪಟ್ಟಣದ ಒಳಗೆ ರಸ್ತೆಗಳು ಅತ್ಯಂತ ಅಚ್ಚುಕಟ್ಟಾಗಿವೆ. ಜೊತೆಗೆ ಗ್ರಾಮೀಣ ಪ್ರದೇಶದ ರಸ್ತೆಗಳು ಸಹ ಅತ್ಯುತ್ತಮ ಸ್ಥಿತಿಯಲ್ಲಿವೆ. ಈ ಕ್ಷೇತ್ರದಲ್ಲಿ 1 ಸಾವಿರ ಕೋಟಿಗೂ ಅಧಿಕ ಮೊತ್ತದ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ ಎಂದರು.

92 ಕೋಟಿ ರೂಪಾಯಿ ವೆಚ್ಚದಲ್ಲಿ 115 ಕಿ.ಮೀ ದೂರದಿಂದ ಕಾವೇರಿ ನೀರನ್ನು ತಂದು ಚಕ್ರಬಾವಿ ಸೇರಿದಂತೆ ಸುತ್ತಮುತ್ತಲ ಕೆರೆಗಳಿಗೆ ತುಂಬಿಸುವ ಕಾರ್ಯ ಇದಾಗಿದೆ. ಚಕ್ರಬಾವಿ ಕೆರೆಗೆ ನೀರನ್ನು ತುಂಬಿಸುವ ಯೋಜನೆ ಊಹಿಸಲು ಸಾಧ್ಯವಾಗದಂತಹ ಯೋಜನೆ ಎಂದು ಹೇಳಿದರು.

ಕಾವೇರಿ ನದಿ ದೂರವಿದೆ ಅಂದರೆ ಪಶ್ಚಿಮದಿಂದ ಪೂರ್ವಕ್ಕೆ ನೀರನ್ನು ತಂದು ಕೆರೆಗಳನ್ನು ತುಂಬಿಸುವ ಕಾರ್ಯ ಮಾಡಲಾಗುತ್ತಿದೆ. ವೈ.ಜಿ.ಗುಡ್ಡಕ್ಕೆ ಕಾವೇರಿ ನೀರು ಬರುತ್ತಿದೆ ಎಂದು ಯಾರೂ ಊಹಿಸಿರಲಿಲ್ಲ. ನಾನು ಸಂಸದನಾಗಿದ್ದಾಗ ಸ್ಥಳೀಯ ನಾಯಕರಾದ ಚಂದ್ರೇಗೌಡರ ಒಟ್ಟಿಗೆ ಸ್ಥಳಕ್ಕೆ ಭೇಟಿ ಮಾಡಿ ಅದಕ್ಕೆ ಹೇಗೆ ನೀರನ್ನು ತುಂಬಿಸಬಹುದು ಅಧಿಕಾರಿಗಳ ಬಳಿ ಚರ್ಚೆ ನಡೆಸಿದೆ ಎಂದರು. ಹಿಂದಿನ ಸರ್ಕಾರದಲ್ಲಿ ಡಿ.ಕೆ.ಶಿವಕುಮಾರ್ ಅವರು ನೀರಾವರಿ ಸಚಿವರಾಗಿದ್ದಾಗ ಈ ಭಾಗದ ಮುಖ್ಯ ಇಂಜಿನಿಯರ್ ಆಗಿದ್ದ ಮೋಹನ್ ಅವರ ಬಳಿ ನೀರು ಹರಿಸುವ ಕುರಿತು ಚರ್ಚೆ ನಡೆಸಿದೆ. ಕಾವೇರಿ ನೀರನ್ನು ಕಣ್ವ ಜಲಾಶಯಕ್ಕೆ ತಂದು ನಂತರ ಹೇಗೆ ಮಂಚನಬೆಲೆ ವೈ.ಜಿ ಗುಡ್ಡಕ್ಕೆ ತರಬಹುದು ಎಂದು ಯೋಜನೆ ತಯಾರಿಸಲು ಹೇಳಿದೆ. ಆನಂತರ ಇದರ ಸಾಧ್ಯತೆಗಳನ್ನು ಚರ್ಚೆ ನಡೆಸಿ ಸತ್ತೇಗಾಲದಿಂದ ವೈ.ಜಿ.ಗುಡ್ಡಕ್ಕೆ ಕಾವೇರಿ ನೀರು ತರಲಾಗಿದೆ ಎಂದರು. ಮಾಗಡಿ ಜನತೆ ಅದೃಷ್ಟವಂತರು. ನನ್ನನ್ನು ಸೋಲಿಸಿ ನನ್ನಿಂದಲೂ ಕೆಲಸ ಮಾಡಿಸಿಕೊಳ್ಳುತ್ತಿದ್ದೀರಿ. ಡಿ.ಕೆ.ಶಿವಕುಮಾರ್ ಅವರಿಂದಲೂ ಕೆಲಸ ಮಾಡಿಸಿಕೊಳ್ಳುತ್ತಿದ್ದೀರಿ. ಶಾಸಕ ಬಾಲಕೃಷ್ಣ ಎಲ್ಲೆಲ್ಲಿ ಕೆಲಸ ಆಗುತ್ತದೆಯೋ ಅಲ್ಲೆಲ್ಲ ಕಥೆ ಕಟ್ಟುತ್ತಾ ಇರುತ್ತಾರೆ ಎಂದು ಹಾಸ್ಯ ಚಟಾಕಿ ಹಾರಿಸಿದರು.

> ನನ್ನ ಮೇಲೆ ನಿಮ್ಮೆಲ್ಲರ ಆಶೀರ್ವಾದ ಮುಂದಕ್ಕಾದರೂ ಇರುತ್ತದೆ ಎಂದು ಭಾವಿಸಿದ್ದೇನೆ. ನನ್ನ ಮೇಲೆ ನಂಬಿಕೆ ಇಟ್ಟವರ ಋಣವನ್ನ ಉಸಿರು ಇರುವ ತನಕ ತೀರಿಸುತ್ತೇನೆ. ಬಮುಲ್ ಅಧ್ಯಕ್ಷನನ್ನಾಗಿ ನನ್ನನ್ನು ಆಯ್ಕೆ ಮಾಡಲಾಗಿದೆ. ಅಂದರೆ ಪ್ರತಿದಿನ ಹಾಲು, ಮೊಸರು, ತುಪ್ಪ ತೆಗೆದುಕೊಳ್ಳಿ, ಹಸು ಕಟ್ಟಿ ಎಂದು ಹೇಳುವ ಕೆಲಸ ನೀಡಿದ್ದೀರಿ. ರೈತರನ್ನು ಕಾಪಾಡುವ ಕಾರ್ಯವನ್ನು ನನ್ನ ಎಲ್ಲಾ ಸಹೋದ್ಯೋಗಿಗಳು ಹಾಗೂ ನಾವು ಮಾಡಲಿದ್ದೇವೆ.
> –ಡಿಕೆ ಸುರೇಶ್, ಮಾಜಿ ಸಂಸದ

**ಬಾಕಿ ಕೆಲಸ ತ್ವರಿತಗೊಳಿಸಲು ಸೂಚಿಸಿ**

ಪರಿಸರ ಇಲಾಖೆಯ ಒಂದಷ್ಟು ತೊಡಕುಗಳು ಇದ್ದ ಕಾರಣ ಇನ್ನೊಂದೆರಡು ಕಿಲೋಮೀಟರ್ ಕಾಮಗಾರಿ ಬಾಕಿಯಿದೆ. ಮೇ ತಿಂಗಳ ಹೊತ್ತಿಗೆ ಕಾಮಗಾರಿ ಮುಗಿಯಲಿದೆ. ಇನ್ನು ವರ್ಷದ 365 ದಿನವೂ ವೈ.ಜಿ.ಗುಡ್ಡ ಕಾವೇರಿ ನೀರಿನಿಂದ ತುಂಬಿರಲಿದೆ. ಅಂದರೆ ಅಷ್ಟೂ ದಿನವೂ ನಿಮ್ಮ ಕೆರೆಗಳು ತುಂಬಿರುತ್ತವೆ. ಉಪಮುಖ್ಯಮಂತ್ರಿಯವರು ಅಧಿಕಾರಿಗಳಿಗೆ ಸೂಚನೆ ನೀಡಿ ಇನ್ನೆರಡು ವರ್ಷದೊಳಗೆ ಈ ಯೋಜನೆಯನ್ನು ಸಂಪೂರ್ಣಗೊಳಿಸಬೇಕು. ಕಟ್ಟುನಿಟ್ಟಿನ ಆದೇಶ ನೀಡಬೇಕು ಎಂದು ಮನವಿ ಮಾಡುತ್ತೇನೆ ಎಂದರು.

ಅಂತರಾಳದಿಂದ... EDITORIAL

# ತನಿಖಾ ಸಂಸ್ಥೆಗಳ ದುರುಪಯೋಗಕ್ಕೆ ಕೇಜ್ರಿವಾಲ್ ಪ್ರಕರಣ ಹಿಡಿದ ಕನ್ನಡಿ

ಅಬಕಾರಿ ನೀತಿ ಪ್ರಕರಣದಲ್ಲಿ ಕೇಜ್ರಿವಾಲ್ ಅವರು ಬಿಡುಗಡೆ ಆಗಿರುವುದು, ತನಿಖಾ ಸಂಸ್ಥೆಗಳನ್ನು ರಾಜಕೀಯ ಉದ್ದೇಶಗಳಿಗಾಗಿ ಕೇಂದ್ರ ಸರ್ಕಾರ ಬಳಸಿಕೊಳ್ಳುತ್ತಿದೆ ಎನ್ನುವ ಆರೋಪಗಳನ್ನು ಬಲಪಡಿಸುತ್ತಿದೆ.ತನಿಖಾ ಸಂಸ್ಥೆಗಳ ದುರುಪಯೋಗದ ಮೂಲಕ ವಿರೋಧ ಪಕ್ಷಗಳ ನಾಯಕರ ಮೇಲೆ ಕೇಂದ್ರ ಸರ್ಕಾರ ಹಿಂಸಾತ್ಮಕ ಅಭಿಯಾನ ನಡೆಸುತ್ತಿದೆ ಎನ್ನುವ ಆರೋಪಗಳಿಗೆ ಸಿಬಿಐ ವಿಶೇಷ ನ್ಯಾಯಾಲಯದ ಇತ್ತೀಚಿನ ತೀರ್ಪು ಪುಷ್ಟಿ ನೀಡುವಂತಿದೆ. ಅಬಕಾರಿ ನೀತಿಗೆ ಸಂಬಂಧಿಸಿದ ಪ್ರಕರಣದಲ್ಲಿ, ಆಮ್ ಆದ್ಮಿ ಪಕ್ಷದ (ಎಎಪಿ) ನಾಯಕ ಮತ್ತು ದೆಹಲಿಯ ಮಾಜಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಮತ್ತು ಇತರ ಇಪ್ಪತ್ತೆರಡು ಜನರನ್ನು ನ್ಯಾಯಾಲಯ ಆರೋಪಗಳನ್ನು ನಿಗದಿಪಡಿಸದೆಯೇ ಬಿಡುಗಡೆ ಮಾಡಿದೆ. ಸಿಬಿಐ ವಿಶೇಷ ನ್ಯಾಯಾಲಯ ನೀಡಿರುವ ತೀರ್ಪು ಮತ್ತು ಅವಲೋಕನವು, ಮಾಜಿ ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯಾ, 'ತೆಲಂಗಾಣ ಜಾಗೃತಿ' ಸಂಘಟನೆಯ ಅಧ್ಯಕ್ಷೆ ಕೆ. ಕವಿತಾ ಸೇರಿದಂತೆ ವಿಚಾರಣೆ ಎದುರಿಸದೆಯೇ ಬಿಡುಗಡೆಯಾದ ಎಲ್ಲರೂ ನೆಮ್ಮದಿಯ ಉಸಿರು ಬಿಡುವಂತೆ ಮಾಡಿದೆ; ಈ ತೀರ್ಪು, ತನಿಖೆ ನಡೆಸಿದ ಕೇಂದ್ರೀಯ ತನಿಖಾ ತಂಡದ (ಸಿಬಿಐ) ಕಾರ್ಯವೈಖರಿಯ ಬಗೆಗಿನ ಕಟುಟೀಕೆಯೂ ಆಗಿದೆ.



ಆರೋಪಿಗಳು ಸಂಚು ರೂಪಿಸುವ ಅಥವಾ ಅಪರಾಧ ಎಸಗುವ ಉದ್ದೇಶ ಹೊಂದಿದ್ದರು ಎನ್ನುವುದನ್ನು ಸಾಬೀತುಪಡಿಸುವಲ್ಲಿ ವಿಫಲ ಆಗಿರುವ ತನಿಖಾ ಸಂಸ್ಥೆ, ಊಹೆಗಳ ಆಧಾರದಲ್ಲಿ ಸಂಚಿನ ಸಂಕಥನವೊಂದನ್ನು ಕಟ್ಟಲು ಪ್ರಯತ್ನಿಸಿದೆ ಎಂದು ಕಟು ಶಬ್ದಗಳಲ್ಲಿ ಟೀಕಿಸಿದೆ. ಪ್ರಕರಣದಲ್ಲಿನ ವಿರೋಧಾಭ್ಯಾಸಗಳು ಮತ್ತು ಸಿಬಿಐ ತನಿಖಾ ವಿಧಾನದಲ್ಲಿನ ಲೋಪಗಳನ್ನು ನ್ಯಾಯಾಲಯ ತನ್ನ ತೀರ್ಪಿನಲ್ಲಿ ಗುರ್ತಿಸಿದೆ.

ನಿರ್ದಿಷ್ಟ ಉದ್ಯಮಿಗಳಿಗೆ ಅನುಕೂಲ ಮಾಡಿಕೊಡುವುದಕ್ಕೆ ಪೂರಕವಾಗಿ ಅಬಕಾರಿ ನೀತಿಯನ್ನು ರೂಪಿಸಲು 100 ಕೋಟಿ ಪಡೆಯಲಾಗಿದೆ ಎಂದುಆರೋಪಿಸಿ, ವಿವಿಧ ಸೆಕ್ಷನ್‌ಗಳ ಅಡಿ ಯಲ್ಲಿ ಸಿಬಿಐ 2022ರ ಆಗಸ್ಟ್‌ನಲ್ಲಿ ಪ್ರಕರಣ ದಾಖಲಿಸಿತ್ತು. ಆ ಪ್ರಕರಣದಲ್ಲಿ, ಆಗ ದೆಹಲಿಯ ಮುಖ್ಯಮಂತ್ರಿಯಾಗಿದ್ದ ಅರವಿಂದ ಕೇಜ್ರಿವಾಲ್ ಹಾಗೂ ಮತ್ತಿತರ ನಾಯಕರನ್ನು ಬಂಧಿಸಿ ಜೈಲಿಗೆ ಕಳುಹಿಸಲಾಗಿತ್ತು. ಕೇಜ್ರಿವಾಲ್ ಅವರು ಆರು ತಿಂಗಳು ಹಾಗೂ ಸಿಸೋಡಿಯಾ ಅವರು ಎರಡು ವರ್ಷಗಳ ಕಾಲ ಜೈಲಿನಲ್ಲಿದ್ದರು. ಜಾಮೀನು ಪಡೆಯುವು ದಕ್ಕಾಗಿ ಆರೋಪಿಗಳು ದೀರ್ಘಕಾಲದ ಕಾನೂನು ಹೋರಾಟ ನಡೆಸ ಬೇಕಾಯಿತು. ವಿಚಾರಣೆಯ ನಂತರ ನಿರ್ದೋಷಿಗಳ ಬಿಡುಗಡೆಯಾಗಿದೆ ಎಂದು ಈ ಪ್ರಕರಣವನ್ನು ಭಾವಿಸುವಂತಿಲ್ಲ. ಆರೋಪಗಳ ಜೊತೆಗೆ ಪ್ರಕರಣಕ್ಕೆ ಸಂಬಂಧಿಸಿದ ವಿಚಾರಣೆ ಗಳನ್ನು ರದ್ದುಪಡಿಸಿರುವ ಕೋರ್ಟ್, ಇದು ವಿಚಾರಣೆಗೆ ಅರ್ಹವಾದ ಪ್ರಕರಣವೇ ಅಲ್ಲ ಎಂದು ಹೇಳಿರುವುದನ್ನು ಗಮನಿಸಬೇಕು. ತೀರ್ಪು ಪ್ರಕಟವಾದ ನಂತರ ಭಾವೋದ್ವೇಗದಿಂದ ಕಣ್ಣೀರು ಸುರಿಸಿರುವ ಕೇಜ್ರಿವಾಲ್ ಅವರು, ತಮ್ಮ ವಿರುದ್ಧದ ಭ್ರಷ್ಟಾಚಾರ ಪ್ರಕರಣವು ಸ್ವಾತಂತ್ರ್ಯ ಭಾರತದ ಇತಿಹಾಸದಲ್ಲಿಯೇ ಬಹುದೊಡ್ಡ ರಾಜಕೀಯ ಪಿತೂರಿ ಎಂದು ಹೇಳಿದ್ದಾರೆ. ಅವರ ವಾದಕ್ಕೆ ನ್ಯಾಯಾಲಯದ ತೀರ್ಪು ಇಂಬು ನೀಡುವಂತಿದೆ. ಇಷ್ಟಾದರೂ, ವಿಶೇಷ ನ್ಯಾಯಾಲಯದ ತೀರ್ಪನ್ನು ಹೈಕೋರ್ಟ್‌ನಲ್ಲಿ ಸಿಬಿಐ ಪ್ರಶ್ನಿಸಿದೆ. ಈ ಪ್ರಕರಣ ಮಾತ್ರವಲ್ಲದೆ, ಕೇಜ್ರಿವಾಲ್ ಮತ್ತು ಇತರರು ಇದೇ ಬಗೆಯ ಆರೋಪಗಳನ್ನು ಜಾರಿ ನಿರ್ದೇಶನಾಲಯದಿಂದಲೂ (ಇಡಿ) ಎದುರಿಸುತ್ತಿದ್ದಾರೆ. ವಿಶೇಷ ನ್ಯಾಯಾಲಯದ ತೀರ್ಪು ಅತ್ಯಂತ ಸ್ಪಷ್ಟವಾಗಿದೆ ನ್ಯಾಯಾಂಗ ಪರಿಶೀಲನೆಯಲ್ಲಿ ಪ್ರಕರಣವು ವಿಫಲವಾಗಿದೆ ಎನ್ನುವ ಅಭಿಪ್ರಾಯವು ಪ್ರಕರಣದ ಹಿಂದಿನ ರಾಜಕೀಯ ಪ್ರತೀಕಾರದ ಆರೋಪಗಳನ್ನು ದೃಢಗೊಳಿಸುವಂತಿದೆ. ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್ ಅವರ, ಅನ್ಯಾಯವು ಎಲ್ಲೆಡೆಯೂ ನ್ಯಾಯಕ್ಕೆ ಬೆದರಿಕೆಯಾಗಿದೆ' ಎನ್ನುವ ಪ್ರಸಿದ್ಧ ಮಾತನ್ನು ನ್ಯಾಯಮೂರ್ತಿ ಜಿತೇಂದ್ರ ಸಿಂಗ್ ಅವರು ತಮ್ಮ ತೀರ್ಪಿನ ಕೊನೆಯಲ್ಲಿ ಉಲ್ಲೇಖಿಸಿದ್ದಾರೆ. ಅಬಕಾರಿ ನೀತಿ ಪ್ರಕರಣದಲ್ಲಿ ಕೇಜ್ರಿವಾಲ್ ಅವರಿಗೆ ಗಂಭೀರ ಹಿನ್ನಡೆ ಉಂಟಾಗುವಂತೆ ರಾಜಕೀಯ ಸಂಕಥನವನ್ನು ಬಿಜೆಪಿ ಹಾಗೂ ಕೇಂದ್ರ ಸರ್ಕಾರ ವಿನ್ಯಾಸಗೊಳಿಸಿದ್ದವು. ಅದರಿಂದಾಗಿ ಕೇಜ್ರಿವಾಲ್ ಅವರ ವರ್ಚಸ್ಸಿಗೆ ಧಕ್ಕೆಯಾಗಿತ್ತು ಹಾಗೂ ಅವರು ಅಧಿಕಾರ ಕಳೆದುಕೊಂಡರು. ಪ್ರಸಕ್ತ ತೀರ್ಪು ಮಾಜಿ ಮುಖ್ಯಮಂತ್ರಿಯ ರಾಜಕೀಯ ಭವಿಷ್ಯದ ಮೇಲೆ ಯಾವ ರೀತಿಯ ಪರಿಣಾಮ ಬೀರುತ್ತದೆ ಎನ್ನುವುದನ್ನು ಕಾದುನೋಡಬೇಕು. ಆದರೆ, ತನಿಖಾ ಸಂಸ್ಥೆಗಳನ್ನು ಕೇಂದ್ರ ಸರ್ಕಾರ ತನ್ನ ರಾಜಕೀಯ ಲಾಭಕ್ಕೆ ಬಳಸಿಕೊಳ್ಳುತ್ತಿದೆ ಎನ್ನುವ ವಿರೋಧ ಪಕ್ಷಗಳ ದೀರ್ಘಕಾಲದ ವಾದವನ್ನು ಪ್ರಸಕ್ತ ತೀರ್ಪು ದೃಢಪಡಿಸುತ್ತಿದೆ.

# ಪರೀಕ್ಷೆ ಭಯವಲ್ಲ ಅವಕಾಶ: ದ್ವಿತೀಯ ಪಿಯುಸಿ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶಿ



**ವಿಶ್ವಾಸ್.ಡಿ.ಗೌಡ**
**ಉದಯವಾಹಿನಿ, ವಿಶೇಷ**

ಪ್ರಸ್ತುತ ರಾಜ್ಯದಾದ್ಯಂತ ದ್ವಿತೀಯ ಪಿಯುಸಿ ಪರೀಕ್ಷೆಗಳು ನಡೆಯುತ್ತಿವೆ. ಇದೇ ಸಮಯದಲ್ಲಿ ಮುಂದಿನ ದಿನಗಳಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳೂ ಆರಂಭವಾಗಲಿವೆ. ವಿದ್ಯಾರ್ಥಿಗಳ ಜೀವನದಲ್ಲಿ ಈ ಎರಡೂ ಪರೀಕ್ಷೆಗಳು ಮಹತ್ವದ ಘಟ್ಟವಾಗಿವೆ. ಈ ಹಂತದಲ್ಲಿ ಹಲವಾರು ವಿದ್ಯಾರ್ಥಿಗಳು ಆತಂಕ, ಒತ್ತಡ, ಭಯದಿಂದ ಬಳಲುವುದು ಸಹಜ. ಆದರೆ ಪರೀಕ್ಷೆಯನ್ನು ಭಯದಿಂದ ಅಲ್ಲ, ಧೈರ್ಯ ಮತ್ತು ಆತ್ಮವಿಶ್ವಾಸದಿಂದ ಎದುರಿಸುವುದು ಯಶಸ್ಸಿನ ಮೊದಲ ಹೆಜ್ಜೆಯಾಗಿದೆ. ಒಬ್ಬ ಶಿಕ್ಷಕರಾಗಿ ಕೆಲವು ಸರಳ ಆದರೆ ಪರಿಣಾಮಕಾರಿ ಸಲಹೆಗಳನ್ನು ವಿದ್ಯಾರ್ಥಿಗಳಿಗೆ ನೀಡುವುದು ಅಗತ್ಯ ಆಗಿದೆ. ಮೊದಲನೆಯದಾಗಿ, ವಿದ್ಯಾರ್ಥಿಗಳು ಪೂರ್ವ ತಯಾರಿಯ ಮಹತ್ವವನ್ನು ಅರಿತುಕೊಳ್ಳಬೇಕು. ಪರೀಕ್ಷೆ ಹತ್ತಿರ ಬಂದಾಗ ಮಾತ್ರ ಓದುವುದಕ್ಕಿಂತ ವರ್ಷಪೂರ್ತಿ ಯೋಜಿತವಾಗಿ ಓದುವುದು ಉತ್ತಮ. ಪ್ರತಿದಿನ ಸ್ವಲ್ಪ ಸಮಯ ಮೀಸಲಿಟ್ಟು ಪಾಠಗಳನ್ನು ಪುನರವಲೋಕನ ಮಾಡುವುದು ಬಹಳ ಉಪಯುಕ್ತ. ದಿನಚರಿ ರೂಪಿಸಿಕೊಂಡು ಅದರ ಪ್ರಕಾರ ಓದಿದರೆ ವಿಷಯಗಳನ್ನು ಸುಲಭವಾಗಿ ನೆನಪಿನಲ್ಲಿ ಉಳಿಸಿಕೊಳ್ಳಬಹುದು. ಎರಡನೆಯದಾಗಿ, ಮಾದರಿ ಪ್ರಶ್ನೆಪತ್ರಿಕೆಗಳನ್ನು ಅಭ್ಯಾಸ ಮಾಡುವ ಅಭ್ಯಾಸ ಬೆಳೆಸಿಕೊಳ್ಳಬೇಕು. ಹಳೆಯ ಪ್ರಶ್ನೆಪತ್ರಿಕೆಗಳನ್ನು ಬಗೆಹರಿಸುವುದರಿಂದ ಪ್ರಶ್ನೆಗಳ ಸ್ವರೂಪ ತಿಳಿಯುತ್ತದೆ ಮತ್ತು ಸಮಯ ನಿರ್ವಹಣೆಯೂ ಕಲಿಯಬಹುದು. ಪರೀಕ್ಷೆಯಲ್ಲಿ ಸಮಯವನ್ನು ಸರಿಯಾಗಿ ಬಳಸುವುದು ಅತ್ಯಂತ ಮುಖ್ಯ. ಆದ್ದರಿಂದ ಅಭ್ಯಾಸ ಮಾಡುವಾಗಲೇ ಸಮಯವನ್ನು ಗಮನದಲ್ಲಿಟ್ಟುಕೊಂಡು ಬರೆಯುವ ಅಭ್ಯಾಸ ಮಾಡಬೇಕು.

ಮೂರನೆಯದಾಗಿ, ಆತ್ಮವಿಶ್ವಾಸವನ್ನು ಕಾಪಾಡಿಕೊಳ್ಳುವುದು ಬಹಳ ಮುಖ್ಯ. ''ನನಗೆ ಸಾಧ್ಯ'' ಎಂಬ ಮನೋಭಾವ ವಿದ್ಯಾರ್ಥಿಗಳಲ್ಲಿ ಇರಬೇಕು. ಕೆಲವು ಪ್ರಶ್ನೆಗಳು ಕಠಿಣವಾಗಬಹುದು. ಆದರೆ ಅದರಿಂದ ಹೆದರಬಾರದು. ನಾವು ಓದಿದ ವಿಷಯಗಳ ಮೇಲೆ ನಂಬಿಕೆ ಇಟ್ಟು ಧೈರ್ಯವಾಗಿ ಉತ್ತರ ಬರೆಯಬೇಕು. ಆತ್ಮವಿಶ್ವಾಸವೇ ಯಶಸ್ಸಿನ ಬಾಗಿಲು ತೆರೆದಿಡುವ ಕೀಲಿಯಾಗಿದೆ.



ಉದಯವಾಹಿನಿ ಚಿತ್ರ

ನಾಲ್ಕನೆಯದಾಗಿ, ಆರೋಗ್ಯ ಮತ್ತು ವಿಶ್ರಾಂತಿಯ ಮೇಲೂ ಗಮನ ಕೊಡಬೇಕು. ಕೆಲವು ವಿದ್ಯಾರ್ಥಿಗಳು ರಾತ್ರಿ ತುಂಬಾ ಹೊತ್ತು ಓದಿ ನಿದ್ರೆಯನ್ನು ಕಡೆಗಣಿಸುತ್ತಾರೆ. ಆದರೆ ಉತ್ತಮ ನಿದ್ರೆ ಇಲ್ಲದಿದ್ದರೆ ಮನಸ್ಸು ಚುರುಕಾಗಿ ಕೆಲಸ ಮಾಡುವುದಿಲ್ಲ. ದಿನಕ್ಕೆ ಕನಿಷ್ಠ 7-8 ಗಂಟೆಗಳ ನಿದ್ರೆ ಅಗತ್ಯ. ಜೊತೆಗೆ ಆರೋಗ್ಯಕರ ಆಹಾರ ಸೇವಿಸುವುದು ಮತ್ತು ಸ್ವಲ್ಪ ವ್ಯಾಯಾಮ ಮಾಡುವುದರಿಂದ ಮನಸ್ಸು ಶಾಂತವಾಗಿರುತ್ತದೆ.

ಐದನೆಯದಾಗಿ, ಪರೀಕ್ಷೆ ದಿನದ ಸಿದ್ಧತೆಗೂ ಮಹತ್ವ ಇದೆ. ಪರೀಕ್ಷೆಗೆ ಹೋಗುವ ಮೊದಲು ಅಗತ್ಯವಿರುವ ಎಲ್ಲಾ ವಸ್ತುಗಳನ್ನು ಪ್ರವೇಶಪತ್ರ, ಪೆನ್, ಪೆನ್ಸಿಲ್ ಇತ್ಯಾದಿಗಳನ್ನು ಸಿದ್ಧವಾಗಿಟ್ಟುಕೊಳ್ಳಬೇಕು. ಪರೀಕ್ಷಾ ಕೇಂದ್ರಕ್ಕೆ ಸ್ವಲ್ಪ ಮುಂಚಿತವಾಗಿ ತಲುಪುವುದು ಒಳ್ಳೆಯದು. ಪ್ರಶ್ನೆಪತ್ರಿಕೆ ಬಂದಾಗ ಮೊದಲು ಸಂಪೂರ್ಣವಾಗಿ ಓದಿ ನಂತರ ಉತ್ತರ ಬರೆಯಲು ಆರಂಭಿಸಬೇಕು. ಇನ್ನೂ ಒಂದು ಮುಖ್ಯ ಸಂಗತಿ ಎಂದರೆ ಭಯ ಮತ್ತು ಒತ್ತಡವನ್ನು ದೂರ ಮಾಡುವುದು. ಪರೀಕ್ಷೆ ಜೀವನದ ಅಂತಿಮ ಗುರಿಯಲ್ಲ. ಇದು ಕೇವಲ ಒಂದು ಹಂತ ಮಾತ್ರ. ವಿಫಲತೆ ಬಂದರೂ ಅದನ್ನು ಪಾಠವಾಗಿ ತೆಗೆದುಕೊಂಡು ಮುಂದೆ ಸಾಗಬಹುದು.

ಆದ್ದರಿಂದ ಭಯಪಡುವ ಅಗತ್ಯವಿಲ್ಲ. ಧೈರ್ಯ, ಪರಿಶ್ರಮ ಮತ್ತು ಸಕಾರಾತ್ಮಕ ಮನೋಭಾವ ಇದ್ದರೆ ಯಶಸ್ಸು ಖಚಿತ. ಕೊನೆಯದಾಗಿ, ಪೋಷಕರು ಮತ್ತು ಶಿಕ್ಷಕರು ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡಬೇಕು. ಅವರ ಮೇಲೆ ಅನಾವಶ್ಯಕ ಒತ್ತಡ ಹಾಕದೇ, ಧೈರ್ಯ ತುಂಬುವ ಮಾತುಗಳನ್ನು ಹೇಳಬೇಕು. ವಿದ್ಯಾರ್ಥಿಗಳು ತಮ್ಮ ಸಾಮರ್ಥ್ಯದ ಮೇಲೆ ನಂಬಿಕೆ ಇಟ್ಟು, ಶಾಂತ ಮನಸ್ಸಿನಿಂದ ಪರೀಕ್ಷೆಯನ್ನು ಎದುರಿಸಿದರೆ ಉತ್ತಮ ಫಲಿತಾಂಶವನ್ನು ಸಾಧಿಸಬಹುದು. ಪರೀಕ್ಷೆಗಳು ನಮ್ಮ ಸಾಮರ್ಥ್ಯವನ್ನು ತೋರಿಸಿಕೊಳ್ಳುವ ಅವಕಾಶಗಳಾಗಿವೆ. ಆದ್ದರಿಂದ ವಿದ್ಯಾರ್ಥಿಗಳು ಭಯವನ್ನು ಬದಿಗಿಟ್ಟು ಆತ್ಮವಿಶ್ವಾಸದಿಂದ ಮುಂದುವರಿದರೆ ಅವರ ಯಶಸ್ಸಿನ ಪಥ ಸುಗಮವಾಗುತ್ತದೆ. ಧೈರ್ಯ, ಪರಿಶ್ರಮ ಮತ್ತು ಸರಿಯಾದ ತಯಾರಿ ಇವೇ ಯಶಸ್ಸಿನ ಮೂರು ಮಂತ್ರಗಳು.

## ದಿನಕ್ಕೊಂದು ಮುಕ್ತಕ:110



**ಸಾಮಾಜಿಕ ಕಳಕಳಿ**
**ಹೆಚ್.ಎಸ್. ಪ್ರತಿಮಾ**
ಲೇಖಕರು
ಸಾಮಾಜಿಕ ಚಿಂತಕಿ ಹಾಗೂ ಶಿಕ್ಷಕಿ, ಹಾಸನ

**ಹೆಣ್ಣು ಮಗು ಬೇಡೆಂದು ಜರಿಯುವರು ಎಲ್ಲೆಡೆಯು**
**ಹೆಣ್ಣುಬೇಕು ನಿಭಾಯಿಸಲು ಮನೆಯನು**
**ಹೆಣ್ಣಿಲ್ಲದೇ ಜಗವ ನಡೆಯಲಿಕೆ ಸಾಧ್ಯವೇ**
**ಹೆಣ್ಣುಲ್ಲವೇ ಸಕಲ ಲಕ್ಷ್ಮಿದೇವಿ**

ಈ ಮುಕ್ತಕದಲ್ಲಿ ಹೆಣ್ಣು ಮಗುವಿನ ಬಗ್ಗೆ ಚಂದವಾಗಿ ವರ್ಣಿಸಲಾಗಿದೆ. ಹೆಣ್ಣು ಮಗುವಿಲ್ಲದೆ ಪ್ರಪಂಚದಲ್ಲಿ ಯಾವ ಕೆಲಸವೂ ಸಾಧ್ಯವಿಲ್ಲ. ಎಲ್ಲಾ ರೂಪದಲ್ಲೂ ಹೆಣ್ಣು ಮಗಳನ್ನು ಕಾಣುತ್ತೇವೆ. ತಾಯಿಯಾಗಿ, ಅಕ್ಕನಾಗಿ, ತಂಗಿಯಾಗಿ, ಅತ್ತೆಯಾಗಿ, ಅತ್ತಿಗೆಯಾಗಿ, ಅವಳನ್ನು ದೇವರಿಗೂ, ಹಲವು ರೀತಿಯ ಪಾತ್ರಧಾರಿಯಾಗಿ ಎಲ್ಲಾ ಪಾತ್ರಕ್ಕೂ ತಕ್ಕಂತೆ ಜೀವನದಲ್ಲಿ ನಡೆದುಕೊಂಡು ಹೋಗುವಳು.




ತ್ಯಾಗಮಯಿಯಾಗಿ ಅವಳನ್ನು ದೇವತೆಯಂತೆ ಕಾಣುವ ಸಮಾಜವು ಆಗಿದ್ದರು. ಸಹ ಮೇಲಿನ ಮುಕ್ತಕದಂತೆ ಹೆಣ್ಣು ಮಗು ಬೇಡ ಎಂದು ಜರಿಯುತ್ತಾರೆ. ಆದರೆ ಮನೆಯನ್ನು ಎಲ್ಲಾ ರೀತಿಯಲ್ಲಿ ನಿಭಾಯಿಸಲು ಹೆಣ್ಣು ಬೇಕು ಎನ್ನುತ್ತಾರೆ. ಹೆಣ್ಣಿಲ್ಲದೆ ಪ್ರಪಂಚದಲ್ಲಿ ಯಾವ ಕೆಲಸವೂ ಸಾಧ್ಯವೇ ಇಲ್ಲ ಎಂಬಂತೆ ವರ್ತಿಸುತ್ತಾರೆ. ಆಕೆ ಇಲ್ಲ ಎಂದರೆ ಕಾರ್ಯಗಳೇನು ನಿರ್ವಹಿಸಲು ಸಾಧ್ಯವಿಲ್ಲ ಎನ್ನುತ್ತಾರೆ. ಸಕಲವೆಲ್ಲವೂ ಹೆಣ್ಣೆಂಬುದನ್ನು ಅರಿತುಕೊಳ್ಳಬೇಕು. ಲೋಕದ ಕಲ್ಯಾಣಕ್ಕಾಗಿ ಹೆಣ್ಣನ್ನು ಗೌರವಿಸಬೇಕು.

# ಸ್ವೀಚ್‌ಗೇರ್‌ಗಳ ದುರಸ್ತಿ ಕಾರ್ಯವನ್ನು ಕಂಪನಿಗೆ ವಹಿಸುವಂತೆ ಮನವಿ

• ಉದಯವಾಹಿನಿ, ಬೆಂಗಳೂರು

ಎಂಇಐ ಕಂಪನಿಯ ಉತ್ಪನ್ನಗಳನ್ನು ಖರೀದಿಸಲು 4(ಜಿ) ವಿನಾಯಿತಿಯಡಿ ಅನುಮೋದಿಸಿರುವ ಕಾರ್ಯ ದೇಶಗಳನ್ನು ಕಂಪನಿಗೆ ನೀಡುವ ಕುರಿತು, Karnataka Power Transmission Corporation Limited ಸಂಸ್ಥೆಗೆ ಅಗತ್ಯವಿರುವ ಸಂಪೂರ್ಣ 11ಕೆವಿ ಸ್ವೀಚ್‌ಗೇರ್‌ಗಳನ್ನು ಎಂಇಐ ಕಂಪನಿ ವತಿಯಿಂದ ಖರೀದಿಸುವ ಬಗ್ಗೆ, ಎಲ್ಲಾ ಸ್ವೀಚ್‌ಗೇರ್ ದುರಸ್ತಿ ಕಾರ್ಯವನ್ನು ಎಂಇಐ ಕಂಪನಿಗೆ ನೀಡುವ ಕುರಿತು ಮನವಿ. ಎಂಇಐ ಕಂಪನಿಯ ಅಧ್ಯಕ್ಷರಾದ ಶ್ರೀ ಎಸ್. ಮನೋಹರ್‌ರವರು ಹಾಗೂ ಅಧಿಕಾರಿಗಳು ಬುಧವಾರ Karnataka Power Transmission Corporation Limited ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ Dr. Ram Prasath Manohar V ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ 4(ಜಿ) ವಿನಾಯಿತಿಯಡಿ ಅನುಮೋದನೆಗೊಂಡಿರುವ ಕಾರ್ಯದೇಶಗಳನ್ನು ಎಂಇಐ ಕಂಪನಿಗೆ ನೀಡುವಂತೆ ವಿನಂತಿಸಲಾಯಿತು. ಜೊತೆಗೆ, ಸಂಸ್ಥೆಗೆ ಅಗತ್ಯವಿರುವ ಸಂಪೂರ್ಣ 11ಕೆವಿ ಸ್ವೀಚ್‌ಗೇರ್ ಗಳನ್ನು ಎಂಇಐ ಕಂಪನಿ ಮೂಲಕವೇ ಖರೀದಿಸುವಂತೆ, ಎಲ್ಲಾ ಸ್ವೀಚ್‌ಗೇರ್‌ಗಳ ದುರಸ್ತಿ ಕಾರ್ಯವನ್ನು ಕಂಪನಿಗೆ ವಹಿಸುವಂತೆ ಮನವಿ ಮಾಡಲಾಯಿತು. ಈ ಸಭೆಯಲ್ಲಿ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀಮತಿ, ಅನಿತಾ ಸಿ, ಅಧಿಕಾರಿಗಳಾದ ಶರಣಪ್ಪ, ತಿಮ್ಮಣ್ಣ, ಸಂತೋಷ್ ಮತ್ತು ಮಂಜುನಾಥ್ ಉಪಸ್ಥಿತರಿದ್ದರು.


ಉದಯವಾಹಿನಿ ಚಿತ್ರ

# ಕ್ರಿಸ್ಪಿ ಮಶ್ರೂಮ್ ಪಕೋಡ ಹೀಗೆ ಮಾಡಿ

ಸಾಮಾನ್ಯವಾಗಿ ಸಂಜೆ ಕಾಫಿ ಅಥವಾ ಟೀ ಜೊತೆ ಬಿಸಿಬಿಸಿಯಾಗಿ ಏನಾದರೂ ತಿನ್ನುವುದು ಕೆಲವರಿಗೆ ಅಭ್ಯಾಸವಾಗಿರುತ್ತದೆ. ಅಲ್ಲದೇ ಮಕ್ಕಳು ಕೂಡ ಸಂಜೆ ಶಾಲೆಯಿಂದ ಬಂದವರೇ ತಿನ್ನಲು ಏನಾದರೂ ಕೇಳುತ್ತಾರೆ. ಇದಕ್ಕಾಗಿ ಇವತ್ತಿನ ನಮ್ಮ ರೆಸಿಪಿಯಲ್ಲಿ ಗರಿಗರಿಯಾದ ಮಶ್ರೂಮ್ ಪಕೋಡ ಯಾವ ರೀತಿ ಮಾಡುವುದು ಎಂಬುದನ್ನು ತಿಳಿಸಿಕೊಡುತ್ತಿದ್ದೇವೆ. ಇದನ್ನು ಚಿಕ್ಕಮಕ್ಕಳಿಂದ ಹಿಡಿದು ದೊಡ್ಡವರು ಕೂಡ ಇಷ್ಟಪಟ್ಟು ತಿನ್ನುತ್ತಾರೆ. ಹಾಗಿದ್ರೆ ಇದನ್ನು ಯಾವ ರೀತಿ ಮಾಡುವುದು ಎಂಬುದನ್ನು ತಿಳಿದುಕೊಳ್ಳಿ.

**ಬೇಕಾಗುವ ಸಾಮಗ್ರಿಗಳು:** ಮಶ್ರೂಮ್ 200-250 ಗ್ರಾಂ, ಕಡಲೆ ಹಿಟ್ಟು 2 ಕಪ್ ಅಕ್ಕಿ ಹಿಟ್ಟು 2 ಚಮಚ, ಖಾರದ ಪುಡಿ 1 ಚಮಚ, ಅರಿಶಿನ ಪುಡಿ ಕಾಲು ಚಮಚ, ಗರಂ ಮಸಾಲಾ ಅರ್ಧ ಚಮಚ, ಶುಂಠಿ ಬೆಳ್ಳುಳ್ಳಿ ಪೇಸ್ಟ್ 1 ಚಮಚ, ಜೀರಿಗೆ ಪುಡಿ ಅಥವಾ ಜೀರಿಗೆ ಸ್ವಲ್ಪ, ಇಂಗು ಸ್ವಲ್ಪ, ಉಪ್ಪು ರುಚಿಗೆ ತಕ್ಕಷ್ಟು, ಸೋಡಾ, ಒಂದು ಚಿಟಿಕೆ, ಎಣ್ಣೆ ಕರಿಯಲು ಬೇಕಾದಷ್ಟು

**ಮಾಡುವ ವಿಧಾನ:** ಮೊದಲು ಮಶ್ರೂಮ್ ಅನ್ನು ಚೆನ್ನಾಗಿ ತೊಳೆದು ಸಣ್ಣದಾಗಿ ಕತ್ತರಿಸಿ ನೀರು ಚೆನ್ನಾಗಿ ಒಣಗಿಸಿಕೊಳ್ಳಿ. ಈಗ ಒಂದು ಬೌಲ್‌ನಲ್ಲಿ ಕಡಲೆ ಹಿಟ್ಟು ಹಾಕಿಕೊಳ್ಳಿ. ಅದಕ್ಕೆ ಅಕ್ಕಿ ಹಿಟ್ಟು, ಖಾರದ ಪುಡಿ, ಅರಿಶಿನ, ಗರಂ ಮಸಾಲಾ, ಉಪ್ಪು, ಶುಂಠಿ ಬೆಳ್ಳುಳ್ಳಿ ಪೇಸ್ಟ್, ಇಂಗು ಮತ್ತು ಸೋಡಾ ಸೇರಿಸಿ ಮಿಕ್ಸ್ ಮಾಡಿ. ನಂತರ ಸ್ವಲ್ಪ ಸ್ವಲ್ಪ ನೀರು ಹಾಕುತ್ತಾ ಬಜ್ಜಿ ಹಿಟ್ಟಿನ ರೀತಿ ಕಲಸಿಕೊಳ್ಳಿ. ಬಳಿಕ ಈ ಹಿಟ್ಟಿಗೆ ಕತ್ತರಿಸಿದ ಮಶ್ರೂಮ್ ಹಾಕಿ ಚೆನ್ನಾಗಿ ಮಿಕ್ಸ್ ಮಾಡಿ. ಮಶ್ರೂಮ್ ಮೇಲೆ ಹಿಟ್ಟು ಚೆನ್ನಾಗಿ ಹಿಡಿಯಬೇಕು. ಒಡೆಯದಂತೆ ನಿಧಾನವಾಗಿ ಮಾಡಿ. 2-3 ನಿಮಿಷ ಬಿಟ್ಟುಕೊಳ್ಳಿ. ಈಗ ಒಲೆಯ ಮೇಲೆ ಬಾಣಲೆ ಇಟ್ಟು ಎಣ್ಣೆ ಹಾಕಿ ಮೀಡಿಯಮ್ ಉರಿಯಲ್ಲಿ ಕಾಯಿಸಿ. ಎಣ್ಣೆ ಕಾದ ನಂತರ ಮಶ್ರೂಮ್ ಮಿಶ್ರಣವನ್ನು ಚಮಚದಿಂದ ಅಥವಾ ಕೈಯಿಂದ ಚಿಕ್ಕ ಚಿಕ್ಕ ಉಂಡೆಗಳಾಗಿ ಹಾಕಿ ಕರಿಯಿರಿ. ಎರಡು ಬದಿಯೂ ಚೆನ್ನಾಗಿ ಬಣ್ಣ ಬರುವವರೆಗೆ ಕರಿಯಿರಿ. ಗೋಲ್ಡನ್ ಬ್ರೌನ್ ಆದರೆ ಸಾಕು. ಕರಿದ ನಂತರ ಟಿಶ್ಯೂ ಪೇಪರ್ ಮೇಲೆ ಇಟ್ಟು ಹೆಚ್ಚಿನ ಎಣ್ಣೆ ಹೀರಿಕೊಳ್ಳಲು ಬಿಡಿ. ಈಗ ಗರಿಗರಿಯಾದ ಮಶ್ರೂಮ್ ಪಕೋಡ ಸವಿಯಲು ಸಿದ್ಧ. ಚಟ್ನಿ, ಸಾಸ್ ಅಥವಾ ಟೊಮ್ಯಾಟೋ ಕೆಚಪ್ ಜೊತೆಗೆ ಮಶ್ರೂಮ್ ಪಕೋಡ ಒಳ್ಳೆಯ ರುಚಿ ಕೊಡುತ್ತದೆ.



# ಕೂದಲ ಬೆಳವಣಿಗೆಗೆ ಮನೆಯಲ್ಲೇ ತಯಾರಿಸಿ ನೈಸರ್ಗಿಕ ಹೇರ್‌ಪ್ಯಾಕ್

ನಿಮ್ಮ ಕೂದಲನ್ನು ಸೊಂಪಾಗಿ ಬೆಳೆಯುವಂತೆ ಮಾಡುವುದು ಸುಲಭದ ಕೆಲಸವೇನಲ್ಲ. ಆದರೆ ದುಬಾರಿ ಸಲೂನ್ ಚಿಕಿತ್ಸೆಗಳಲ್ಲಿ ನಿಮ್ಮ ದುಡ್ಡು ಖಾಲಿ ಮಾಡುವ ಮೊದಲು, ನಿಮ್ಮ ಅಡುಗೆಮನೆಯಲ್ಲೇ ನಿಮ್ಮ ಕೂದಲನ್ನು ಚೆನ್ನಾಗಿ ಬೆಳೆಯುವಂತೆ ಮಾಡಬಲ್ಲ, ಕೂದಲಿನ ಆರೋಗ್ಯವನ್ನು ಕಾಪಾಡಬಲ್ಲ ಹಲವಾರು ಸಾಮಾಗ್ರಿಗಳಿವೆ. ಅವುಗಳನ್ನು ಬಳಸಿ ಕೂದಲಿಗೆ ಪೋಷಣೆಯನ್ನು ನೀಡಬಹುದು

**ಮೊಸರು ಮತ್ತು ಮೊಟ್ಟೆ:** ನಿರಂತರವಾಗಿ ಒಡೆಯುವ ದುರ್ಬಲ ಕೂದಲಿಗೆ ಗಂಭೀರವಾದ ಪ್ರೋಟೀನ್‌ಹಸ್ತಕ್ಷೇಪದ ಅಗತ್ಯವಿದೆ. ಮೊಟ್ಟೆಗಳು ನೈಸರ್ಗಿಕ ಪೆಪ್ಟೈಡ್ ತುಂಬಿರುತ್ತವೆ, ಅದು ನಿಮ್ಮ ಕೂದಲಿನ ಶಾಫ್ಟ್‌ನ ಉದ್ದಕ್ಕೂ ಹಾನಿಗೊಳಗಾದ, ರಂಧ್ರವಿರುವ ಕಲೆಗಳನ್ನು ತಾತ್ಕಾಲಿಕವಾಗಿ ತುಂಬುತ್ತದೆ. ಒಂದು ಸಂಪೂರ್ಣ ಮೊಟ್ಟೆಯೊಂದಿಗೆ ನಾಲ್ಕು ಚಮಚ ಮೊಸರನ್ನು ಬೆರೆಸಿ ಬಿಳಿ ಭಾಗವನ್ನು ಬಿಟ್ಟುಬಿಡಿ ಮತ್ತು ತುದಿಗಳು ಹೆಚ್ಚು ಒಣಗಿದಂತೆ ಭಾಸವಾಗುತ್ತಿದ್ದರೆ ಹಳದಿ ಭಾಗವನ್ನು ಮಾತ್ರ ಬಳಸಿ, ಈ ಮಸುಕಾದ ಹಳದಿ ಮಿಶ್ರಣವನ್ನು ಬೇರಿನಿಂದ ತುದಿಯವರೆಗೆ ಹಚ್ಚಿ, ಶಾಖವನ್ನು ಹಿಡಿದಿಡಲು ಶವರ್ ಕ್ಯಾಪ್ ಮೇಲೆ ಹಾಕಿ, 30 ನಿಮಿಷಗಳ ನಂತರ ಅದನ್ನು ತೊಳೆಯಿರಿ.

**ನೆನಪಿಡಿ:** ಮೊಟ್ಟೆಯ ಪದರಗಳು ನಿಮ್ಮ ಕೂದಲಿನ ಎಳೆಗಳಲ್ಲಿ ಸಿಕ್ಕು ಬೀಳಲು ನೀವು ಬಯಸದಿದ್ದರೆ ಯಾವಾಗಲೂ ತಂಪಾದ ನೀರಿನಿಂದ ತೊಳೆಯಿರಿ.



**ಅಲೋವೆರಾ ಮತ್ತು ಮೊಸರು:** ನಿಮ್ಮ ನೆತ್ತಿ ತುರಿಕೆ, ಸೂಕ್ಷ್ಮತೆ ಅಥವಾ ಉರಿಯೂತವನ್ನು ಅನುಭವಿಸುತ್ತಿದ್ದರೆ ಮೂರು ಚಮಚ ಮೊಸರನ್ನು ಎರಡು ಚಮಚ ತಾಜಾ ಅಲೋವೆರಾ ಜೆಲ್‌ನೊಂದಿಗೆ ಬೆರೆಸಿ. ಅಲೋವೆರಾವು ಪ್ರೋಟಿಯೋಲೈಟಿಕ್ ಕಿಣ್ವಗಳಿಂದ ತುಂಬಿರುತ್ತದೆ, ಅದು ಸತ್ತ ಚರ್ಮದ ಕೋಶಗಳನ್ನು ಸಕ್ರಿಯವಾಗಿ ಸರಿಪಡಿಸುತ್ತದೆ, ಮೊಸರಿನೊಂದಿಗೆ ಪರಿಪೂರ್ಣ ಸಾಮರಸ್ಯದಿಂದ ಕಾರ್ಯನಿರ್ವಹಿಸುತ್ತದೆ. ಅದನ್ನು ನಿಮ್ಮ ತಲೆಯಾದ್ಯಂತ ಹಚ್ಚಿ 45 ನಿಮಿಷ ಬಿಟ್ಟು ಸೌಮ್ಯವಾದ ಶಾಂಪೂ ಬಳಸಿ ತೊಳೆಯಿರಿ.

**ನಿಂಬೆ ಮತ್ತು ಹುಳಿ ಮೊಸರು:** ದಟ್ಟವಾದ, ಫ್ಲಾಕಿ ನೆತ್ತಿಯು ಕೂದಲಿನ ಬೆಳವಣಿಗೆಯನ್ನು ದೈಹಿಕವಾಗಿ ಕುಂಠಿತಗೊಳಿಸುತ್ತದೆ. ನಾಲ್ಕು ಚಮಚ ಹುಳಿ ಮೊಸರನ್ನು ಒಂದು ಚಮಚ ತಾಜಾ ನಿಂಬೆ ರಸದೊಂದಿಗೆ ಬೆರೆಸಿ. ಮೊಸರಿನಿಂದ ಲ್ಯಾಕ್ಟಿಕ್ ಆಮ್ಲವನ್ನು ನಿಂಬೆಯಿಂದ ವಿಟಮಿನ್ ಸಿ ಮತ್ತು ಸಿಟ್ರಿಕ್ ಆಮ್ಲದೊಂದಿಗೆ ಬೆರೆಸುವ ಮೂಲಕ, ನೀವು ಕೂದಲಿನ ಕಿರುಚೀಲಗಳನ್ನು ಸಲೀಸಾಗಿ ಬಿಚ್ಚುವ ತೀವ್ರವಾದ ಆಂಟಿಫಂಗಲ್ ಚಿಕಿತ್ಸೆಯನ್ನು ಪಡೆಯುತ್ತೀರಿ. ಈ ಮಿಶ್ರಣವನ್ನು ನಿಮ್ಮ ಕೂದಲಿನ ಬುಡಕ್ಕೆ ಹಚ್ಚಿ, ನಿಧಾನವಾಗಿ ಮಸಾಜ್ ಮಾಡಿ ಮತ್ತು 15 ರಿಂದ 20 ನಿಮಿಷಗಳಲ್ಲಿ ತೊಳೆಯಿರಿ ಇದರಿಂದ ನಿಮ್ಮ ನೆತ್ತಿ ಒಣಗುವುದಿಲ್ಲ.

**ಜೇನುತುಪ್ಪ, ಆಲಿವ್ ಎಣ್ಣೆ ಮತ್ತು ಮೊಸರು:** ಉದ್ದನೆಯ ಕೂದಲಿನ ದೊಡ್ಡ ಶತ್ರುವೆಂದರೆ ಸೀಳಿದ ತುದಿಗಳು. ನಾಲ್ಕು ಚಮಚ ಮೊಸರು, ಒಂದು ಚಮಚ ಜೇನುತುಪ್ಪ, ಒಂದು ಚಮಚ ಆಲಿವ್ ಎಣ್ಣೆಯನ್ನು ತೆಗೆದುಕೊಳ್ಳಿ. ಈ ಕೆನೆ ಮಿಶ್ರಣವನ್ನು ನಿಮ್ಮ ಮಧ್ಯದ ಉದ್ದ ಮತ್ತು ಒಣಗಿದ ತುದಿಗಳ ಮೇಲೆ ಸಂಪೂರ್ಣವಾಗಿ ಹಚ್ಚಿರಿ. ಹೊಳಪು, ಆಳವಾಗಿ ಕಂಡೀಷನ್‌ಗಾಗಿ ಅದನ್ನು 30 ನಿಮಿಷಗಳ ಕಾಲ ಬಿಡಿ.

**ಮೆಂತ್ಯ ಮತ್ತು ಮೊಸರು:** ಅತಿಯಾದ ಕೂದಲು ಉದುರುವುದು, ತೆಳುವಾಗುವುದು ನಿಮ್ಮ ಮತ್ತು ಉದ್ದ ಕೂದಲಿನ ನಡುವೆ ನಿಂತಿರುವ ಪ್ರಮುಖ ಅಡೆತಡೆಗಳಾಗಿದ್ದರೆ ಮೆಂತ್ಯ ನಿಮ್ಮ ಹೊಸ ಉತ್ತಮ ಸ್ನೇಹಿತ. ನಿಕೋಟಿನಿಕ್ ಆಮ್ಲ ಮತ್ತು ಪ್ರೋಟೀನ್‌ನಲ್ಲಿ ಸಮೃದ್ಧವಾಗಿರುವ ಮೆಂತ್ಯ ಕೂದಲು ಉದುರುವಿಕೆಯನ್ನು ಪರಿಣಾಮಕಾರಿಯಾಗಿ ಎದುರಿಸುತ್ತದೆ. ಮೂರು ಚಮಚ ಮೊಸರಿನಲ್ಲಿ ಒಂದು ಚಮಚ ಮೆಂತ್ಯ ಪುಡಿಯನ್ನು ಅಥವಾ ನೆನೆಸಿದ ಮೆಂತ್ಯ ಬೀಜದ ಪೇಸ್ಟ್ ತಯಾರಿಸಿ ಬೆರೆಸಿ. ಬೀಜಗಳು ಊದಿಕೊಂಡು ಅವುಗಳ ಪೋಷಕಾಂಶಗಳನ್ನು ಬಿಡುಗಡೆ ಮಾಡಲು ಬೌಲ್ ಅನ್ನು 15 ನಿಮಿಷಗಳ ಕಾಲ ಅಲುಗಾಡದಂತೆ ಬಿಡಿ. ಅದನ್ನು ನೇರವಾಗಿ ನಿಮ್ಮ ನೆತ್ತಿಗೆ ಮಸಾಜ್ ಮಾಡಿ, ಹೆಚ್ಚುವರಿ ಅನ್ನು ಕೂದಲಿನಾದ್ಯಂತ ಹಚ್ಚಿಕೊಳ್ಳಿರಿ. 40 ನಿಮಿಷಗಳ ನಂತರ ಶಾಂಪೂ ಮಾಡಿ.

# ಮಹಿಳೆಯರ ಮುಖದಲ್ಲಿ ಅನಗತ್ಯ ಕೂದಲು ಕಾಣಿಸಿಕೊಳ್ಳಲು ಕಾರಣಗಳೇನು?

ಪುರುಷರಲ್ಲಿ ಮುಖದ ಮೇಲೆ, ವಿಶೇಷವಾಗಿ ಗಡ್ಡ, ಮೀಸೆ ಪ್ರದೇಶದಲ್ಲಿ ಕೂದಲು ಬೆಳೆಯುವುದು ಅವರಲ್ಲಿ ಕಂಡು ಬರುವ ಟೆಸ್ಟೋಸ್ಟೆರಾನ್ ಹಾರ್ಮೋನ್ ಗಳ ಪ್ರಭಾವದಿಂದ ಎನ್ನಲಾಗುತ್ತದೆ. ಆದರೆ ಕೆಲವು ಮಹಿಳೆಯರ ಮುಖದ ಮೇಲೆ ಕೂದಲು ಅಲ್ಲಲ್ಲಿ ಬೆಳೆಯುತ್ತಾ ಇರುತ್ತದೆ. ಹೆಚ್ಚಾಗಿ ತುಟಿಯ ಮೇಲ್ಭಾಗದಲ್ಲಿ ಹಾಗೂ ಕೆಲವರಿಗೆ ಗಲ್ಲದಲ್ಲಿ ಕೂದಲುಗಳು ಕಾಣಿಸಿಕೊಳ್ಳುತ್ತಿರುತ್ತವೆ. ಮಹಿಳೆಯ ಮುಖದ ಮೇಲೆ ಕೂದಲುಬೆಳೆಯಲು ಹಲವಾರು ಕಾರಣಗಳಿವೆ.

**ಹಾರ್ಮೋನುಗಳ ಅಸಮತೋಲನ:** ಕೆಲವು ಸಂದರ್ಭಗಳಲ್ಲಿ, ಮಹಿಳೆಯರಲ್ಲಿ ಪುರುಷ ಹಾರ್ಮೋನುಗಳ ಉತ್ಪಾದನೆ ಹೆಚ್ಚಾಗುತ್ತದೆ, ಇದು ಈ ಸಮಸ್ಯೆಗೆ ಕಾರಣವಾಗುತ್ತದೆ. ಪಿಸಿಓಎಸ್ ಕಾರಣದಿಂದಾಗಿ ಅನೇಕ ಮಹಿಳೆಯರು ಈ ಹಾರ್ಮೋನುಗಳ ಅಸಮತೋಲನವನ್ನು ಅನುಭವಿಸುತ್ತಾರೆ. ಹೆಚ್ಚುವರಿಯಾಗಿ, ಕೆಲವು ಮಹಿಳೆಯರಲ್ಲಿ ಮೂತ್ರಜನಕಾಂಗದ ಗ್ರಂಥಿಗಳ ಅಸ್ವಸ್ಥತೆಗಳು ಸಹ ಈ ಸಮಸ್ಯೆಯನ್ನು ಉಂಟುಮಾಡಬಹುದು.

**ಕೆಲವು ಔಷಧಿಗಳ ಅಡ್ಡಪರಿಣಾಮಗಳು:** ಕೆಲವು ಔಷಧಿಗಳು ದೇಹದ ಅಥವಾ ಮುಖದ ಮೇಲೆ ಅತಿಯಾದ ಕೂದಲು ಬೆಳವಣಿಗೆಗೆ ಕಾರಣವಾಗಬಹುದು ಎಂದು ತಿಳಿದರೆ ನಿಮಗೆ ಆಶ್ಚರ್ಯವಾಗಬಹುದು. ಎಚ್ಚರಿಕೆಯಿಂದ ಬಳಸಬೇಕಾದ ಕೆಲವು ಔಷಧಿಗಳು ಇಲ್ಲಿವೆ. ಸೈಕ್ಲೋಸ್ಪೊರಿನ್, ಅನಾಬೊಲಿಕ್ ಸ್ಟೀರಾಯ್ಡ್‌ಗಳಂತಹ ಕೆಲವು ಸ್ಟೀರಾಯ್ಡ್‌ಗಳು ಮಹಿಳೆಯರಲ್ಲಿ ಇದೇ ರೀತಿಯ ಸಮಸ್ಯೆಗಳನ್ನು ಉಂಟುಮಾಡಬಹುದು.

**ಆಂಡ್ರೋಜೆನ್‌ಗಳು:** ಆಂಡ್ರೋಜೆನ್‌ಗಳು ಪುರುಷರ ದೇಹದಲ್ಲಿ ಮಾತ್ರ ಕಂಡುಬರುತ್ತವೆ, ಹಾಗಾದರೆ ಅವು ಮಹಿಳೆಯರ ಮೇಲೆ ಹೇಗೆ ಪರಿಣಾಮ ಬೀರುತ್ತವೆ ಎಂದು ನೀವು ಆಶ್ಚರ್ಯ ಪಡುತ್ತಿರಬಹುದು, ಆದರೆ ಮಹಿಳೆಯರಲ್ಲಿಯೂ ಸಹ ಕೆಲವು ಆಂಡ್ರೋಜೆನ್ ಹಾರ್ಮೋನ್ ಇರುತ್ತದೆ ಮತ್ತು ಅವರ ದೇಹ ಮತ್ತು ಮುಖಗಳಲ್ಲಿ ನಾವು ನೋಡುವ ಸಣ್ಣ ಕೂದಲು ಈ ಹಾರ್ಮೋನ್‌ನಿಂದ ಉಂಟಾಗುತ್ತದೆ ಎಂದು ನಿಮಗೆ ತಿಳಿದಿರುವುದಿಲ್ಲ. ಆಂಡ್ರೋಜೆನ್ ಮಟ್ಟಗಳು ಗಮನಾರ್ಹವಾಗಿ ಹೆಚ್ಚಾದಾಗ, ಅದು ಮಹಿಳೆಯ ದೇಹ ಅಥವಾ ಮುಖದ ಮೇಲೆ ಅತಿಯಾದ ಕೂದಲು ಬೆಳವಣಿಗೆಗೆ ಕಾರಣವಾಗುತ್ತದೆ.



**ಇತರ ಕಾರಣಗಳು:** ಇವುಗಳ ಹೊರತಾಗಿ, ಮಹಿಳೆಯರಲ್ಲಿ ಮುಖದ ಕೂದಲು ಬೆಳವಣಿಗೆಗೆ ಕಾರಣವಾಗುವ ಇತರ ಅಂಶಗಳಿವೆ. ಜನನ ನಿಯಂತ್ರಣ ಔಷಧಿಗಳು ದೇಹದ ಆಂಡ್ರೋಜೆನ್ ಮಟ್ಟಗಳ ಮೇಲೂ ಪರಿಣಾಮ ಬೀರಬಹುದು. ಹೆಚ್ಚುವರಿಯಾಗಿ, ಮೈಗ್ರೇನ್, ತಲೆನೋವು, ಅಧಿಕ ರಕ್ತದೊತ್ತಡಕ್ಕೆ ಚಿಕಿತ್ಸೆ ನೀಡಲು ಬಳಸಲಾಗುವ ಅನೇಕ ಔಷಧಿಗಳು ಮುಖದ ಕೂದಲು ಬೆಳವಣಿಗೆಗೆ ಕಾರಣವಾಗಬಹುದು. ಪಾಲಿಸಿಸ್ಟಿಕ್ ಓವರಿ ಸಿಂಡ್ರೋಮ್, ಹಾರ್ಮೋನುಗಳ ಅಸ್ವಸ್ಥತೆಗಳ ಇತಿಹಾಸ ಹೊಂದಿರುವ ಮಹಿಳೆಯರಲ್ಲಿ ಈ ಸಮಸ್ಯೆ ಹೆಚ್ಚಾಗಿ ಕಂಡುಬರುತ್ತದೆ. ಅಧಿಕ ತೂಕ ಅಥವಾ ಬೊಜ್ಜು ಇರುವುದು ಹಾರ್ಮೋನ್ ಮಟ್ಟದ ಮೇಲೆ ಪರಿಣಾಮ ಬೀರುತ್ತದೆ, ಇದು ಮುಖ, ದೇಹದ ಮೇಲೆ ಅನಗತ್ಯ ಕೂದಲು ಬೆಳವಣಿಗೆಗೆ ಕಾರಣವಾಗುತ್ತದೆ. ಕೆಲವು ಸಂಶೋಧನೆಗಳು ಈ ಸಮಸ್ಯೆಯು ದಕ್ಷಿಣ ಏಷ್ಯಾ, ಮಧ್ಯಪ್ರಾಚ್ಯ, ಮೆಡಿಟರೇನಿಯನ್ ಮೂಲದ ಮಹಿಳೆಯರಲ್ಲಿ ಹೆಚ್ಚಾಗಿ ಕಂಡುಬರುತ್ತದೆ ಎಂದು ಸೂಚಿಸುತ್ತವೆ. ಅಂಕಿಅಂಶಗಳು ಪ್ರತಿ 100 ಮಹಿಳೆಯರಲ್ಲಿ ಸರಿಸುಮಾರು 5 ರಿಂದ 10 ಜನರು ಹಿರ್ಸುಟಿಸಂನಿಂದ ಬಳಲುತ್ತಿದ್ದಾರೆ ಎಂದು ಸೂಚಿಸುತ್ತದೆ.



ಪಿಸಿಓಎಸ್‌ನಲ್ಲಿ ಆಂಡ್ರೋಜೆನ್ ಮಟ್ಟಗಳು ಹೆಚ್ಚಾಗುವುದರಿಂದ ವೆಲ್ಲಸ್ ಕೂದಲು ಕೊನೆಯ ಕೂದಲಾಗಿ ಬದಲಾಗುತ್ತದೆ, ಇದು ದಪ್ಪವಾಗಿರುತ್ತದೆ, ಗಾಢವಾಗಿರುತ್ತದೆ ಮತ್ತು ಸಾಮಾನ್ಯವಾಗಿ ಗಲ್ಲ, ದವಡೆ ಮತ್ತು ಎದೆಯ ಮೇಲೆ ಕಾಣಿಸಿಕೊಳ್ಳುತ್ತದೆ. ಈ ಸ್ಥಿತಿಯು ಗಂಭೀರ ದೈಹಿಕ ಹಾನಿಯನ್ನುಂಟುಮಾಡದಿದ್ದರೂ, ಇದು ಆಳವಾದ ಮಾನಸಿಕ ಪರಿಣಾಮ ಬೀರಬಹುದು. ಅನೇಕ ಮಹಿಳೆಯರು ಕಡಿಮೆ ಆತ್ಮವಿಶ್ವಾಸ, ಒತ್ತಡ, ಆತಂಕ ಮತ್ತು ಖಿನ್ನತೆಯಂತಹ ಸಮಸ್ಯೆಗಳನ್ನು ಅನುಭವಿಸುತ್ತಾರೆ. ಸಕಾಲಿಕ ವೈದ್ಯಕೀಯ ಸಲಹೆ ಮತ್ತು ಚಿಕಿತ್ಸೆಯು ಈ ಸಮಸ್ಯೆಯನ್ನು ಗಮನಾರ್ಹವಾಗಿ ನಿಯಂತ್ರಿಸಬಹುದು. 50 ವರ್ಷದ ನಂತರ, ಈ ಮುಖದ ಕೂದಲು ದಪ್ಪ ಮತ್ತು ದಟ್ಟವಾಗುತ್ತದೆ.

ಏಕೆಂದರೆ ಈಸ್ಟ್ರೊಜೆನ್ ಹಾರ್ಮೋನ್ ಕಡಿಮೆಯಾಗಲು ಪ್ರಾರಂಭವಾಗುತ್ತದೆ ಮತ್ತು ಆಂಡ್ರೋಜೆನ್ ಹೆಚ್ಚಾಗಲು ಪ್ರಾರಂಭವಾಗುತ್ತದೆ. ಇದರಿಂದಾಗಿ, ಪುರುಷರಂತೆ ಧ್ವನಿಯೂ ಭಾರವಾಗುತ್ತದೆ.ಮುಖದ ಮೇಲೆ ಕೂದಲು ಬೆಳೆಯಲು ಗರ್ಭಧಾರಣೆಯೂ ಒಂದು ಕಾರಣ. ಈ ಸಮಯದಲ್ಲಿ ದೇಹದಲ್ಲಿ ಅನೇಕ ಪ್ರಮುಖ ಬದಲಾವಣೆಗಳು ಸಂಭವಿ ಸುತ್ತವೆ, ಇದರಿಂದಾಗಿ ದೇಹದಲ್ಲಿ ಆಂಡ್ರೋಜೆನ್ ಮಟ್ಟವು ಹೆಚ್ಚಾಗುತ್ತದೆ, ಇದು ಮುಖದ ಕೂದಲು ಬೆಳವಣಿಗೆಗೆ ಕಾರಣವಾಗುತ್ತದೆ. ಮುಖದ ಕೂದಲು ಕಾಣಿಸಿಕೊಳ್ಳಲು ಆನುವಂಶಿಕ ಕಾರಣವೂ ಇರಬಹುದು. ನಿಮ್ಮ ಅಜ್ಜಿ, ಮುತ್ತಜ್ಜಿ ಅಥವಾ ತಾಯಿಗೆ ಮುಖದ ಕೂದಲು ಇದ್ದರೆ, ನಿಮಗೆ ಅದು ಇರುವುದು ಸಹಜ. ಇದಕ್ಕೆ ಇನ್ನೊಂದು ಕಾರಣವೆಂದರೆ ಔಷಧಿಗಳ ಅಡ್ಡಪರಿಣಾಮ.

**ಇದಕ್ಕೆ ಪರಿಹಾರವೇನು? ಮುಖದ ಕೂದಲಿನ ಚಿಕಿತ್ಸೆ:** ನಿಮಗೆ ಅನಗತ್ಯ ಕೂದಲಿನ ಸಮಸ್ಯೆ ಇದ್ದರೆ, ಲೇಸರ್ ಚಿಕಿತ್ಸೆಯು ಅದನ್ನು ತೊಡೆದುಹಾಕಲು ನಿಮಗೆ ಸಹಾಯ ಮಾಡುತ್ತದೆ. ಲೇಸರ್ ಚಿಕಿತ್ಸೆ ಪಡೆದ ನಂತರ ಕೂದಲು ಮತ್ತೆ ಬೆಳೆಯುವುದಿಲ್ಲ, ಏಕೆಂದರೆ ಅದು ಅದನ್ನು ಮೂಲದಿಂದ ತೆಗೆದುಹಾಕುವ ಮೂಲಕ ಕೆಲಸ ಮಾಡುತ್ತದೆ.

# ರಾಮಾಯಣ



## ಸುಗ್ರೀವನು ಶ್ರೀ ರಾಮನನ್ನು ಕಾಣಿಸಿಕೊಂಡದ್ದು

• ಹಿಂದಿನ ಸಂಚಿಕೆಯಿಂದ **121ನೆಯ ಅಧ್ಯಾಯ**

ಮಿತ್ರಸಂಗ್ರಹಮಾಡಿಕೊಂಡು ಶತ್ರುಗಳನ್ನು ನಿಗ್ರಹಿಸಿ ಧರ್ಮಾರ್ಥ ಕಾಮಗಳಂಬ ಪುರುಷಾರ್ಥತ್ರಯವನ್ನು ಕಾಲವರಿತು ಸಂಪಾದಿಸುವ ಪುರುಷನು ಧರ್ಮದಿಂದ ಸುಖದಾಗಿರುವನು. ಸುಗ್ರೀವ, ಈಗ ದಂಡಯಾತ್ರೆ ಹೊರಡುವ ಸಮಯ. ನೀನು ನಿನ್ನ ಮಂತ್ರಿಗಳೊಡನೆ ಯೋಚನೆಯನ್ನು ಮಾಡಿ ಸನ್ನದ್ಧನಾಗು ಎಂದು ನುಡಿದನು. ಸುಗ್ರೀವನು ಶ್ರೀರಾಮನನ್ನು ಶ್ರೀರಾಮ, ನಾನು ನಷ್ಟವಾದ ರಾಜ್ಯ ಐಶ್ವರ್ಯ ಕೀರ್ತಿಗಳನ್ನು ನಿನ್ನ ಕೃಪೆಯಿಂದ ತಿರುಗಿ ಪಡೆದೆನು. ಲೋಕದಲ್ಲಿ ಪರರು ಮಾಡಿದ ಉಪಕಾರವನ್ನು ಮರೆತವನೇ ಪುರುಷಾಧಮನು. ಭೂಮಂಡಲದಲ್ಲಿ ಬಲಶಾಲಿಗಳಾದ ಸಕಲ ವಾನರ ಶ್ರೇಷ್ಠರು ನಮಗೆ ಸಹಾಯಕರಾಗಿ ಬರುತ್ತಿದ್ದಾರೆ. ಕೆಲವರು ಈಗಾಗಲೇ ಬಂದಿರುತ್ತಾರೆ. ಅವರ ಸಂಖ್ಯೆ ಅಪರಿಮಿತವಾದುದು. ಮೇರು ಮಂದರ ಪರ್ವತಗಳಂತೆ ಅವರು ಮಹಾಕಾಯರು ಮಹಾಪರಾಕ್ರಮಿಗಳು ಕೋಟಿಗಟ್ಟಲೆ ಅವರು ಬಂದು ನಮಗೆ ನೆರವಾಗುತ್ತಾರೆ. ಅವರೆಲ್ಲರೂ ಕಾಮರೂಪಿಗಳು ದೃಢಕಾಯರು. ಅವರೆಲ್ಲರೂ ನಿನಗೆ ಸಹಾಯವಾಗಿ ಬಂದು ನಿನ್ನ ಶತ್ರುವಾದ ರಾವಣನನ್ನು ಆತನ ಪರಿವಾರಸಹಿತವಾಗಿ ಸಂಹರಿಸಿ ಸೀತಾದೇವಿಯನ್ನು ಕರೆದು ಕೊಂಡು ಬರುವರು ಎಂದು ನುಡಿದನು. ಆ ಮಾತನ್ನು ಕೇಳಿ ಶ್ರೀರಾಮನು ಅತಿಹರ್ಷಯುಕ್ತನಾಗಿ ಸುಗ್ರೀವನನ್ನು ಸಂಮಾನಿಸಿ ಮುಂದಣ ಕಾರ್ಯಸ್ಥಿತಿಗೆ ತಕ್ಕ ಯೋಚನೆಯನ್ನು ಮಾಡತೊಡಗಿದನು.

### ಕಪಿಸೇನೆಗಳ ಆಗಮನ

ಅನಂತರ ಶ್ರೀರಾಮನು, ಕೈಮುಗಿದುಕೊಂಡು ನಿಂತಿದ್ದ ಸುಗ್ರೀವನನ್ನು ತೋಳುಗಳಿಂದ ತಬ್ಬಿಕೊಂಡು ಹೀಗೆ ನುಡಿದನು: ಸುಗ್ರೀವ, ದೇವೇಂದ್ರನು ಮಳೆಗರೆಯುವುದೂ ಸೂರ್ಯನಂ ತನ್ನ ಪ್ರಭೆಯಿಂದ ಅಂತರಿಕ್ಷಮಾರ್ಗವನ್ನು ಬೆಳಕು ಮಾಡುವುದೂ ಚಂದ್ರನು ಬೆಳದಿಂಗಳಿಂದ ರಾತ್ರಿಯ ಅಂಧಕಾರವನ್ನು ತೊಲಗಿಸಿ ನಿರ್ಮಲವಾಗಿ ಮಾಡುವುದೂ ಸ್ವಭಾವವಲ್ಲದೆ ಆಶ್ಚರ್ಯವಲ್ಲ ಹಾಗೆಯೇ ನೀನು ಮಿತ್ರಕಾರ್ಯವನ್ನು ಸಾಧಿಸುವುದಕ್ಕಾಗಿ ಈ ರೀತಿಯಲ್ಲಿ ಪ್ರತ್ಯುಪಕಾರವನ್ನು ಮಾಡುವುದು ಆಶ್ಚರ್ಯವಲ್ಲ, ಸುಗ್ರೀದ, ನೀನು ಯಾವಾಗಲೂ ಪ್ರಿಯಭಾಷಿಯೆಂಬುದನ್ನು ಬಲ್ಲೆನು ನಿನ್ನ ಸಹಾಯದಿಂದ ನಾನು ಸಮಸ್ತ ಶತ್ರುಗಳನ್ನೂ ಜಯಿಸುವೆನು. ನೀನು ನನ್ನ ಮಿತ್ರನಾದ್ದರಿಂದ ನನಗೆ ಸಹಾಯಕನಾಗಬೇಕು. ರಾವಣನು ತನ್ನ ವಿನಾಶಕಾಲವು ಬಂದದ್ದರಿಂದ ಶತತ್ರದನು ಶಚೀದೇವಿಯನ್ನು ಅಪಹರಿಸಿದಂತೆ, ಸೀತಾದೇವಿಯನ್ನು ಅಪಹರಿಸಿಕೊಂಡು ಹೋದನು. ದೇವೇಂದ್ರನು ಶತಸ್ತ್ರದನನ್ನೂ ಪ್ರಲೋಮನನ್ನೂ ಸಂಹರಿಸಿ ಶಚೀದೇವಿಯನ್ನು ತಂದಂತೆ ನಾನು ಸಮರದಲ್ಲಿ ರಾವಣನನ್ನು ಕೊಂದು ಸೀತಾದೇವಿಯನ್ನು ತರುತ್ತೇನೆ ಎಂದು ನುಡಿದನು. ಆ ಸಮಯದಲ್ಲಿ ಮಹತ್ತಾದ ಕೆಂಧೂಳಿಯು ಕವಿದು ಸೂರ್ಯಪ್ರಜ್ಞೆಯ ಒಕ್ಕುಗಳ ಕಾಣದಿರುವ ಹಾಗಾಯಿತು. ಸಮಸ್ತ ಪರ್ವತವನಸುತವಾದ ಭೂಮಿಯು ಕಂಪಿಸಿತು. ಆಗ ಪರ್ವತಗಳಿಗೆ ಸಮಾನವಾದ ಶರೀರವುಳ್ಳವಾಗಿಯೂ ಅತಿತೀಕ್ಷ್ಯದಾದ ಕೋರೆದಾದೆಗಳುಳ್ಳದರಾಗಿಯೂ ಮಹಾಬಲವಂತರಾಗಿ ಗುಡುಗಿನಂತೆ ಗಂಭೀರವಾಗಿ ಬೊಬ್ಬಿಡುವವರಾಗಿಯೂ ಪ್ರಾತಃಕಾಲದ ಸೂರ್ಯ ಪ್ರಭೆಯಂತೆ ಶರೀರಕಾಂತಿಯುಳ್ಳವರಾಗಿಯೂ ಚಂದ್ರನ ಪ್ರಭೆಯಂತೆ ಬಿಳುಪಾದ ಶರೀರಕಾಂತಿಯುಳ್ಳವರಾಗಿಯೂ ಕಮಲಗಳ ಕೇಸರಗಳಂತೆ ಸುವರ್ಣಮಯವಾದ ಶರೀರಕಾಂತಿಯುಳ್ಳವರಾಗಿಯೂ ಇದ್ದ ನೂರುಕೋಟಿ ಕಪಿಗಳೊಡನೆ ಹರಿಯೆಂಬ ಕವಿನಾಯಕನು ಬಂದು ಸುಗ್ರೀವನಿಗೆ ಕಾಣಿಸಿಕೊಂಡನು.

ಮುಂದುವರಿಯುವುದು...

ತಾಲ್ಲೂಕು ರಚನೆಯಾಗಿ ದಶಕ ಕಳೆದರೂ ಬಾರದ ಸರ್ಕಾರಿ ಕಚೇರಿಗಳು, ಸರ್ಕಾರದ ಈ ತಾರತಮ್ಯ ನೀತಿ

# ಕಿತ್ತೂರು ಅಭಿವೃದ್ಧಿ ಇನ್ನೂ ಮರೀಚಿಕೆ: ಬಜೆಟ್‌ಲ್ಲಿ ಅನುದಾನ ಘೋಷಿಸಬೇಕು

• ಉದಯವಾಹಿನಿ ಚನ್ನಮ್ಮನ ಕಿತ್ತೂರು

ಐತಿಹಾಸಿಕ ಕಿತ್ತೂರು ಸಂಸ್ಥಾನಕ್ಕೆ ಸಂಬಂಧಪಟ್ಟ ತಾಣಗಳ ಅಭಿವೃದ್ಧಿ ಪಡಿಸಲು ಹೆಚ್ಚಿನ ಅನುದಾನ ಮತ್ತು ಹಲವು ಇಲಾಖೆಗಳ ತಾಲ್ಲೂಕು ಮಟ್ಟದ ಕಚೇರಿ ತೆರೆಯಲು ಈ ಬಾರಿಯಾದರೂ ಬಜೆಟ್‌ನಲ್ಲಿ ಘೋಷಣೆ ಮಾಡಬಹುದೇ ಎಂಬ ನಿರೀಕ್ಷೆಯೊಂದಿಗೆ ತಾಲ್ಲೂಕಿನ ಜನರು ಜಾತಕ ಪಕ್ಷಿಯಂತೆ ಕುಳಿತಿದ್ದಾರೆ.

ತಹಶೀಲ್ದಾರ್ ಕಚೇರಿ ಮತ್ತು ತಾಲ್ಲೂಕು ಆಡಳಿತ ಸೌಧ ನಿರ್ಮಾಣ ಬಿಟ್ಟರೆ ಇನ್ನುಳಿದ ತಾಲ್ಲೂಕು ಕಚೇರಿಗಳು ಇತ್ತ ಸುಳಿಯದೇ ಇರುವುದು ಸಾರ್ವಜನಿಕರ ಅಸಮಾಧಾನಕ್ಕೆ ಕಾರಣವಾಗಿದೆ. ಸಹಾಯಕ ನಿರ್ದೇಶಕ ಕಚೇರಿ ಕಟ್ಟಡ ಪೂರ್ಣಗೊಂಡು ಉದ್ಘಾಟನೆ ಆಗಿದ್ದರೂ ಅಲ್ಲಿ ಹುದ್ದೆ ಸೃಷ್ಟಿ ಮಾಡಲು ಸರ್ಕಾರ ಇಚ್ಛಾಶಕ್ತಿ ತೋರುತ್ತಿಲ್ಲ ಎಂಬುದು ಸಾರ್ವಜನಿಕರ ದೂರಾಗಿದೆ.

**ಕಿತ್ತೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಈ ಬಜೆಟ್ ನಲ್ಲಿ ರೂ.50 ಕೋಟಿ ನೀಡುವಂತೆ ಮನವಿ ಮಾಡಲಾಗಿದೆ. ಈ ಅನುದಾನ ಇನ್ನಿತರ ಕೆಲಸಗಳಿಗೆ ಬಳಕೆಯಾಗದ ಹಾಗೆ ನಿಗಾ ವಹಿಸಲಾಗುವುದು.**
**-ಬಾಬಾಸಾಹೇಬ ಪಾಟೀಲ, ಶಾಸಕ ಕಿತ್ತೂರು**


ಉದಯವಾಹಿನಿ ಚಿತ್ರ

**ಜನರ ಅನುಕೂಲತೆ ದೃಷ್ಟಿಯಿಂದ ಗೋಕಾಕ ಪ್ರತ್ಯೇಕ ಜಿಲ್ಲೆಯಾಗಲೇಬೇಕು. ರೈತರ ಕಲ್ಯಾಣಕ್ಕೆ ಪೂರಕ ಯೋಜನೆಗಳನ್ನು ಸರ್ಕಾರ ಪ್ರಕಟಿಸಬೇಕು. ಲಕ್ಷ್ಮಣ ಬೂದಿಗೊಪ್ಪ, ಪ್ರಗತಿಪರ ರೈತ, ಗೋಕಾಕ ಈಗಾಗಲೇ ತಾಲ್ಲೂಕ ಕ್ರೀಡಾಂಗಣ ಅಭಿವೃದ್ಧಿಗಾಗಿ ರೂ.35 ಲಕ್ಷ ಅನುದಾನ ತಂದಿದ್ದೇನೆ. ಬಜೆಟ್‌ನಲ್ಲಿ ಪ್ರತ್ಯೇಕ ಅನುದಾನ ಕೋರಲಾಗಿದೆ.**
**-ಡಿ.ಎಂ. ಐಹೊಳೆ ಶಾಸಕ ರಾಯಬಾಗ**

ಪಂಚಾಯತ್ ರಾಜ್ ಇಲಾಖೆ ಇಂಜಿನಿಯರ್ ಕಚೇರಿ, ತಾಲ್ಲೂಕು ವೈದ್ಯಾಧಿಕಾರಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ತೋಟಗಾರಿಕೆ ಸಹಾಯಕ ನಿರ್ದೇಶಕರ ಕಚೇರಿ, ಸಮಾಜ ಕಲ್ಯಾಣದಂತಹ ಮಹತ್ವದ ಇಲಾಖೆಗಳು ಶೀಘ್ರ ಕಾರ್ಯ ಪ್ರಾರಂಭಿಸಬೇಕು. ಇವೆಲ್ಲ ಕಚೇರಿ ಹಾಗೂ ಸಿಬ್ಬಂದಿ ಸೃಜಿಸಲು ಸರ್ಕಾರ ಈ ಬಾರಿಯ ಬಜೆಟ್ ನಲ್ಲಾದರೂ ಅನುದಾನ ಘೋಷಿಸಬೇಕು ಎನ್ನುತ್ತಾರೆ ಜನ. ಕಿತ್ತೂರು ಸಂಸ್ಥಾನಕ್ಕೆ ಸಂಬಂಧ ಪಟ್ಟಂತೆ ಅರಸರ ಸಮಾಧಿ, ರಾಜಗುರುಗಳ ಸಮಾಧಿ, ದೇಶನೂರು ವಾಡೆ, ವಣ್ಣೂರು ಸೇರಿ ಮೂವತ್ತು ತಾಣಗಳನ್ನು ಅಭಿವೃದ್ಧಿ ಪಡಿಸಲು ಕಿತ್ತೂರು ಅಭಿವೃದ್ಧಿ ಪ್ರಾಧಿಕಾರಿ ಯೋಜನೆ ಹಾಕಿಕೊಂಡಿದೆ. ಅವುಗಳಿಗೂ ಅನುದಾನ ಕೊರತೆ ಕಾಡುತಿದೆ.

ಸ್ಮಾರಕಗಳ ಅಭಿವೃದ್ಧಿಗೆ ಪಟ್ಟಿಯನ್ನು ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಸಹಕಾರದೊಂದಿಗೆ ಸಿದ್ಧಪಡಿಸಬೇಕು. ಹಂತ ಹಂತವಾಗಿ ದುರಸ್ತಿಪಡಿಸಿ ಮುಂದಿನ ಪೀಳಿಗೆಗೆ ಪರಿಚಯಿಸಬೇಕು ಎಂಬುದು ಕಾದಂಬರಿಕಾರ ಯ.ರು. ಪಾಟೀಲ ಸಲಹೆ. ಕಿತ್ತೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಜನರ ನಿರೀಕ್ಷೆಯಂತೆ ದುಡ್ಡು ಬರುತ್ತಿಲ್ಲ. ಸರ್ಕಾರದ ಈ ತಾರತಮ್ಯ ನೀತಿ ಅಸಹನೀಯ ಎನ್ನುತ್ತಾರೆ ರಾಣಿ ಚನ್ನಮ್ಮ ನವಭಾರತ ಸೇನೆಯ ಜಗದೀಶ ಕಡೋಲಿ.

## ಗೋಕಾಕ ಪ್ರತ್ಯೇಕ ಜಿಲ್ಲೆಯಾಗಲಿ

ಗೋಕಾಕ ಪ್ರತ್ಯೇಕ ಜಿಲ್ಲೆಯಾಗಲಿ ರಾಮೇಶ್ವರ ಕಲ್ಯಾಣಶೆಟ್ಟಿ ಗೋಕಾಕ: ದಿನೇದಿನೆ ವೇಗವಾಗಿ ಬೆಳೆಯುತ್ತಿರುವ ಗೋಕಾಕ ನಗರವನ್ನು ಪ್ರತ್ಯೇಕ ಜಿಲ್ಲೆಯಾಗಿ ಈ ಬಜೆಟ್‌ನಲ್ಲಿ ಘೋಷಿಸಬೇಕು ಎಂಬ ಆಗ್ರಹ ಕೇಳಿಬರುತ್ತಿದೆ. ಗೋಕಾಕ ಮತ್ತು ಗೊಡಚಿನಮಲ್ಕಿ ಜಲಪಾತಗಳು ಇಡೀ ದೇಶದಲ್ಲೇ ಖ್ಯಾತಿಗಳಿಸಿವೆ. ದೇಶ-ವಿದೇಶಿ ಪ್ರವಾಸಿಗರು ಬರುತ್ತಾರೆ. ಆದರೆ ಪ್ರವಾಸಿಗರ ಬೇಡಿಕೆಗೆ ಅನುಗುಣವಾಗಿ ಮೂಲಸೌಕರ್ಯ ಇಲ್ಲ. ಮುಖ್ಯವಾಗಿ ಜಲಪಾತದ ಸೊಬಗು ಕಣ್ತುಂಬಿಕೊಂಡವರಿಗೆ ತಂಗುವುದಕ್ಕೆ ವ್ಯವಸ್ಥೆಯೇ ಇಲ್ಲ. ರುಚಿಯಾದ ಆಹಾರ ಸವಿಯಲು ಹೋಟೆಲ್‌ಗಳಿಲ್ಲ. ಈ ಕೊರತೆಗಳನ್ನು ನೀಗಿಸಿ ಪ್ರವಾಸೋದ್ಯಮ ಬೆಳವಣಿಗೆಗೆ ಪೂರಕವಾದ ಯೋಜನೆಗಳನ್ನು ಜಾರಿಗೆ ತರಬೇಕಿದೆ. ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು ಕಳೆದ ವರ್ಷ ಗೋಕಾಕದಲ್ಲಿ ಸರ್ಕಾರಿ ಎಂಜಿನಿಯರಿಂಗ್ ಘಟಕ ಮಹಾವಿದ್ಯಾಲಯ ಆರಂಭಿಸಿದೆ. ಅಂತೆಯೇ ಸರ್ಕಾರ ಸರ್ಕಾರಿ ವೈದ್ಯಕೀಯ ಕಾಲೇಜು ಆರಂಭಿಸಬೇಕು ಎಂಬ ಬೇಡಿಕೆ ಇದೆ. ಪ್ರತಿ ಬಜೆಟ್‌ನಲ್ಲಿ ದಕ್ಷಿಣ ಕರ್ನಾಟಕಕ್ಕೆ ಆದ್ಯತೆ ನೀಡಲಾಗುತ್ತದೆ. ಅದರ ಬದಲಿಗೆ ಉತ್ತರ ಕರ್ನಾಟಕಕ್ಕೆ ಅದರಲ್ಲೂ ಗೋಕಾಕ ತಾಲ್ಲೂಕಿಗೆ ಪೂರಕ ಯೋಜನೆಗಳನ್ನು ಸರ್ಕಾರ ಘೋಷಿಸಬೇಕು ಎಂದು ಸಾಮಾಜಿಕ ಕಾರ್ಯಕರ್ತ ಶ್ರೀಕಾಂತ ಮಹಾಜನ ಆಗ್ರಹಿಸಿದರು.

## ಮತ್ತೆ ಬೆಳಗಲಿ ಕ್ರೀಡಾಕ್ಷೇತ್ರ

ಒಂದು ಕಾಲದಲ್ಲಿ ಕ್ರೀಡಾ ಕ್ಷೇತ್ರದಲ್ಲಿ ತನ್ನದೇ ಆದ ಹೆಗ್ಗಳಿಕೆ ಹೊಂದಿದ್ದ ರಾಯಬಾಗ ತಾಲ್ಲೂಕು ಕ್ರೀಡಾಕ್ಷೇತ್ರಕ್ಕೆ ಈಗ ಗರ ಬಡಿದಿದೆ. ಸುಸಜ್ಜಿತ ಕ್ರೀಡಾಂಗಣವಿಲ್ಲ ತರಬೇತುದಾರ ಇಲ್ಲ ಬೆಳಕಿನ ವ್ಯವಸ್ಥೆ ಬಾಲಕಿಯರ ಖಾಸಗಿ ಕೊಠಡಿ ಜಿಮ್ ಹೀಗೆ ಮುಖ್ಯವಾದ ಸೌಕರ್ಯಗಳೇ ಇಲ್ಲಿ ಇಲ್ಲ. ಕ್ರಿಕೆಟ್ ಟೆನ್ನಿಸ್ ಲಾನ್ ಟೆನ್ನಿಸ್ ಕಬಡ್ಡಿ ಕೊಕ್ಕೊ ಫುಟ್‌ಬಾಲ್ ಅಥ್ಲೆಟಿಕ್ಸ್‌ಗಳಲ್ಲಿ ಹಲವಾರು ಪ್ರತಿಭೆಗಳು ರಾಜ್ಯವನ್ನು ಪ್ರತಿನಿಧಿಸಿದ್ದರು. ಒಂದು ತಲೆಮಾರು ಸಾಧನೆ ಮಾಡಿದ ಬಳಿಕ ಹಿಂದಿನವರಿಗೆ ಪ್ರೋತ್ಸಾಹವೇ ಇಲ್ಲವಾಗಿದೆ. ಬಜೆಟ್‌ನಲ್ಲಿ ಬೇಡಿಕೆ ಇಲ್ಲದ ಯೋಜನೆಗಳು ಘೋಷಣೆಯಾಗುತ್ತವೆ. ಆದರೆ ತಾಲ್ಲೂಕು ಕ್ರೀಡಾಂಗಣಕ್ಕೆ ಆದ್ಯತೆ ಏಕೆ ಇಲ್ಲ ಎಂದು ಕರ್ನಾಟಕ ಯುವ ರಕ್ಷಣಾ ವೇದಿಕೆಯ ಅಧ್ಯಕ್ಷ ಗಜಾನನ ಮಾಳಿ ಪ್ರಶ್ನಿಸುತ್ತಾರೆ. ಗ್ರಾಮೀಣ ಪ್ರದೇಶದ ಕ್ರೀಡಾಪಟುಗಳಿಗೆ ಸಮಾನ ಅವಕಾಶ ಸಿಗಬೇಕು. ರಾಯಬಾಗ ತಾಲ್ಲೂಕಿನಲ್ಲಿ ಸುಸಜ್ಜಿತ ಆಟದ ಮೈದಾನ ನಿರ್ಮಾಣ ಹಾಗೂ ಕ್ರೀಡಾ ಸೌಲಭ್ಯಗಳ ಅಭಿವೃದ್ಧಿಗೆ ರಾಜ್ಯ ಸರ್ಕಾರದ ಈ ಬಜೆಟ್‌ನಲ್ಲಿ ಪ್ರತ್ಯೇಕ ಅನುದಾನ ಮೀಸಲಿಡಬೇಕು ಎಂಬುದು ಸಂದೀಪ ವಂಟಮೂರೆ ಆಗ್ರಹ.

# ಆಮೆಗತಿ ಕಾಮಗಾರಿ: ಲಭ್ಯವಾಗದ ನಿರಂತರ ನೀರು

• ಉದಯವಾಹಿನಿ ಅಂಕೋಲಾ

ತಾಲ್ಲೂಕಿನ ಹೊನ್ನಳ್ಳಿ ಗ್ರಾಮದ ಗಂಗಾವಳಿ ನದಿಯಿಂದ ರೂ.34 ಕೋಟಿ ವೆಚ್ಚದ ವಾಸರ - ಕುದ್ರಿಗೆ ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಕಾಲಮಿತಿಯಲ್ಲಿ ಪೂರ್ಣಗೊಳ್ಳುತ್ತಿಲ್ಲ. 11 ತಿಂಗಳಲ್ಲಿ ಮುಗಿಯಬೇಕಿದ್ದ ಕಾಮಗಾರಿ ಎರಡು ವರ್ಷ ಸವೆದರೂ ಗ್ರಾಮೀಣ ಭಾಗದ ಜನರಿಗೆ ಕುಡಿಯುವ ನೀರು ಭಾಗ್ಯ ಲಭಿಸಿಲ್ಲ.

ಒಟ್ಟು 44 ಕಿ.ಮೀ ಉದ್ದದ ಪೈಪ್ ಲೈನ್ ಕಾಮಗಾರಿ ಮೂಲಕ ಗಂಗಾವಳಿ ನದಿಯಿಂದ ತಾಲ್ಲೂಕಿನ ವಾಸರ - ಕುದ್ರಿಗೆ, ಬೆಳಸೆ, ಶೆಟಗೇರಿ, ವಂದಿಗೆ ಮತ್ತು ಬೆಳಂಬಾರ, ಹೊನ್ನೇಬೈಲ್ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಒಟ್ಟು 23 ಗ್ರಾಮಗಳಿಗೆ ಶಾಶ್ವತ ಕುಡಿಯುವ ನೀರನ್ನು ಒದಗಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

ಈಗಾಗಲೇ ಹೊನ್ನಳ್ಳಿಯಲ್ಲಿ ಜಾಕ್ವೆಲ್ ಕಾಮಗಾರಿ ಮುಕ್ತಾಯ ಹಂತದಲ್ಲಿದ್ದರೆ ಮುಖ್ಯವಾಗಿ ಶಿರಗುಂಜಿ ಗ್ರಾಮದಲ್ಲಿ ನಿರ್ಮಾಣವಾಗಬೇಕಿದ್ದ ಶುದ್ಧಿಕರಣ ಘಟಕಕ್ಕೆ ಇನ್ನೂ ಸೂಕ್ತವಾದ ಸ್ಥಳವೇ ದೊರಕಿಲ್ಲ. ಆಮೆಗತಿಯಲ್ಲಿ ಕೆಲಸ ಸಾಗುತ್ತಿರುವುದರಿಂದ


ಉದಯವಾಹಿನಿ ಚಿತ್ರ

ಪ್ರಸಕ್ತ ವರ್ಷವೂ ಬೇಸಿಗೆಯಲ್ಲಿ ಗ್ರಾಮೀಣ ಭಾಗದ ಜನರು ಬಹುಗ್ರಾಮ ಕುಡಿಯುವ ನೀರಿನ ಯೋಜನೆಯಿಂದ ವಂಚಿತರಾಗುವುದು ನಿಶ್ಚಿತವಾಗಿದೆ. ಈ ಯೋಜನೆಯನ್ನೇ ಅವಲಂಬಿಸಿ ತಾಲ್ಲೂಕಿನಲ್ಲಿ ಆರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಜಲ ಜೀವನ ಮಿಷನ್ ಯೋಜನೆಯಡಿ ಅಂದಾಜು 8000 ನಲ್ಲಿ ಸಂಪರ್ಕ ಹಾಗೂ ಪೈಪ್ ಲೈನ್ ಕಾಮಗಾರಿ ಮುಗಿದು ವರ್ಷಗಳೇ ಕಳೆದಿದೆ. ಆದರೆ ಸಾರ್ವಜನಿಕರಿಗೆ ನೀರು ಮಾತ್ರ ಲಭ್ಯವಾಗಿಲ್ಲ. ಕಾಮಗಾರಿ ವಿಳಂಬವಾಗಲು ಪ್ರಾರಂಭದಲ್ಲಿ ಅರಣ್ಯ, ರೈಲ್ವೆ ಇಲಾಖೆ ಹಾಗೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ಕಾಮಗಾರಿ

**ಸದ್ಯ ಅರಣ್ಯ ಇಲಾಖೆಯ ತಕರಾರು ಇದ್ದು ಅನುಮತಿ ದೊರೆತರೆ ಕೇವಲ ಮೂರು ತಿಂಗಳಲ್ಲಿಯೇ ಕಾಮಗಾರಿಯನ್ನು ಪೂರ್ಣಗೊಳಿಸಿ ತಾಲ್ಲೂಕಿನ ಗ್ರಾಮಗಳಿಗೆ ಕುಡಿಯುವ ನೀರು ಪೂರೈಸಲಾಗುವುದು**
**-ಅಮಿತಾ ತಳೇಕರ್ ಎಇಇ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಉಪ ವಿಭಾಗ ಅಂಕೋಲಾ**

ನಿರ್ವಹಿಸಲು ಕೆಲವೊಂದು ಸ್ಥಳದಲ್ಲಿ ಅನುಮತಿ ಬೇಕಾದ್ದರಿಂದ ಅನುಮತಿ ಪಡೆಯಲು ತಡವಾದ ಕಾರಣ ಕಾಮಗಾರಿ ವಿಳಂಬವಾಗುತ್ತಿದೆ. ಕಾಮಗಾರಿ ನಿರ್ವಹಿಸಲು ಅರಣ್ಯ ಇಲಾಖೆಗೆ ಅರ್ಜಿ ಸಲ್ಲಿಸಿದರೆ ಅನುಮತಿ ನೀಡಲು ಕನಿಷ್ಠ 3 ತಿಂಗಳು ಸಮಯ ತೆಗೆದುಕೊಳ್ಳುತ್ತಾರೆ. ಕೆಲವೊಮ್ಮೆ ನಾವು ಸಲ್ಲಿಸಿದ ಅರ್ಜಿಗಳನ್ನು ತಿರಸ್ಕರಿಸಲಾಗುತ್ತದೆ, ಇದರಿಂದ ಕಾಮಗಾರಿ ಪೂರ್ಣಗೊಳ್ಳಲು ವಿಳಂಬವಾಗುತ್ತಿದೆ ಎನ್ನುತ್ತಾರೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಅಧಿಕಾರಿಗಳು.

# ಚುನಾವಣೆ ನಡೆಯದೆ ತ್ರಿಶಂಕು ಸ್ಥಿತಿಯಲ್ಲಿ 3 ಗ್ರಾ.ಪಂ

• ಉದಯವಾಹಿನಿ ಹೊಳೆಹೊನ್ನೂರು

ಈಚೆಗೆ ರಾಜ್ಯದ ವಿವಿಧ ಗ್ರಾಮ ಪಂಚಾಯಿತಿ ಸದಸ್ಯರ ಅಧಿಕಾರವಧಿ ಮುಕ್ತಾಯವಾಗಿದ್ದು, ಶೀಘ್ರ ಚುನಾವಣೆ ನಡೆಸಲೂ ಸಿದ್ಧತೆಗಳು ಜರುಗಿವೆ. ಈ ನಡುವೆ ಕಳೆದ 5 ವರ್ಷಗಳಿಂದ ಚುನಾವಣೆಯೇ ನಡೆಯದ ಹನುಮಂತಾಪುರ ಹಾಗೂ ಸಿದ್ದೀಪುರ ಗ್ರಾಮ ಪಂಚಾಯಿತಿಗಳಿಗೆ ಈ ಬಾರಿಯಾದರೂ ಚುನಾವಣೆ ನಡೆಯುವುದೇ ಎಂಬ ಪ್ರಶ್ನೆ ಈ ಪಂಚಾಯಿತಿ ವ್ಯಾಪ್ತಿಯ ಗ್ರಾಮಸ್ಥರನ್ನು ಕಾಡುತ್ತಿದೆ.

5 ವರ್ಷಗಳ ಹಿಂದೆ ಹೊಳೆಹೊನ್ನೂರು ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲಾಗಿತ್ತು. ಆಗ ಹನುಮಂತಾಪುರ ಗ್ರಾಮ ಪಂಚಾಯಿತಿಯಿಂದ ಜಂಬರಘಟ್ಟ ಹಾಗೂ ಸಿದ್ದೀಪುರದಿಂದ ಡಣಾಯಪುರ ಗ್ರಾಮವನ್ನು ಪಟ್ಟಣ ಪಂಚಾಯಿತಿಗೆ ಸೇರಿಸಲಾಗಿತ್ತು. ಇದರಿಂದ ಈ ಪಂಚಾಯಿತಿಗಳಿಗೆ ಸದಸ್ಯರ ಸಂಖ್ಯೆ ಕಡಿಮೆ ಆಗಲಿದೆ ಎಂದು ಜಿಲ್ಲಾಡಳಿತ ಇವುಗಳಿಗೆ ಚುನಾವಣೆಯನ್ನೇ ನಡೆಸಿಲ್ಲ. ಈ ಎರಡು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಜನಸಂಖ್ಯೆ ಕಡಿಮೆಯಾಗಿದ್ದು, ಅನುದಾನ ಕೊರತೆಯಿಂದಾಗಿ ಗ್ರಾಮಗಳ ಅಭಿವೃದ್ಧಿಯೂ



ಉದಯವಾಹಿನಿ ಚಿತ್ರ

ಕುಂಠಿತವಾಗಿದೆ. ಅನುದಾನ ಸದ್ಬಳಕೆಯಾಗುತ್ತಿಲ್ಲ. ಬಂದ ಅನುದಾನ ಬೇಕಾಬಿಟ್ಟಿ ಬಳಕೆಯಾಗುತ್ತಿದ್ದು, ಇದಕ್ಕೆ ಕಡಿವಾಣ ಹಾಕಲು ಗ್ರಾಮಾಡಳಿತದ ಅವಶ್ಯಕತೆ ಇದೆ. ಈ ದೃಷ್ಟಿಯಿಂದ ಚುನಾವಣೆ ನಡೆಸಬೇಕು ಎಂಬುದು ಈ ಭಾಗದ ಗ್ರಾಮಸ್ಥರ ಆಗ್ರಹ. ರಾಜ್ಯದ ನಾನಾ ಭಾಗಗಳಲ್ಲಿ ಈಗಾಗಲೇ ಸ್ಥಳೀಯ ಸಂಸ್ಥೆಗಳ ಚುನಾವಣಾ ಕಾವು ಶುರುವಾಗಿದೆ. ಅಭ್ಯರ್ಥಿಗಳು ತೆರೆ ಮರೆಯಲ್ಲಿ ಪ್ರಚಾರವನ್ನೂ ಆರಂಭಿಸಿದ್ದಾರೆ. ಆದರೆ ಹನುಮಂತಾಪುರ, ಸಿದ್ದೀಪುರ ಗ್ರಾಮ ಪಂಚಾಯಿತಿ ಚುನಾವಣೆಗೆ ಸ್ಪರ್ಧಿಸಲು ಬಯಸಿರುವವರು ಕಾದು ನೋಡುವ ನಿರ್ಧಾರಕ್ಕೆ ಬಂದಿದ್ದಾರೆ.

# ಸಂಚಾರ ದಟ್ಟಣೆಗೆ ಬೇಕಿದೆ ಪರಿಹಾರ

• ಉದಯವಾಹಿನಿ ಮಂಗಳೂರು

ವಸತಿ ಸಮುಚ್ಚಯಗಳು, ವ್ಯಾಪಾರಿ ಮಳಿಗೆಗಳು, ದಿನವಿಡೀ ವಾಹನ ದಟ್ಟಣೆ ಇರುವ ಕೋರ್ಟ್ ವಾರ್ಡ್‌ನಲ್ಲಿ ಜನರನ್ನು ಬಹುವಾಗಿ ಕಾಡುತ್ತಿರುವ ಸಮಸ್ಯೆಗಳೆಂದರೆ ಸಂಚಾರ ದಟ್ಟಣೆ ಮತ್ತು ಹೆಚ್ಚುತ್ತಿರುವ ಬ್ಲಾಕ್ ಸ್ಪಾಟ್‌ಗಳು. ಡಾ.ಬಿ.ಆರ್. ಅಂಬೇಡ್ಕರ್ ವೃತ್ತದಿಂದ ಹಂಪನಕಟ್ಟೆವರೆಗೆ, ಬಂಟ್ಸ್ ಹಾಸ್ಟೆಲ್ ಸರ್ಕಲ್, ಕೋರ್ಟ್ ರಸ್ತೆ, ಆರ್ಯ ಸಮಾಜ ರಸ್ತೆಯ ಪಾರ್ಶ್ವ ಭಾಗ, ಲೋಬೊ ಲೇನ್, ಸ್ಟರಾಕ್ ರಸ್ತೆ ಇವೆಲ್ಲವೂ ಈ ವಾರ್ಡ್ ವ್ಯಾಪ್ತಿಯಲ್ಲಿವೆ. ನಗರದ ಕೇಂದ್ರ ಭಾಗದಲ್ಲಿರುವ ಈ ವಾರ್ಡ್ ಬಹುತೇಕ ರಸ್ತೆಗಳು ಕಾಂಕ್ರೀಟ್ ಅಥವಾ ಡಾಂಬರ್ ಹೊದ್ದುಕೊಂಡು ಸುಸಜ್ಜಿತವಾಗಿವೆ. ಚರಂಡಿಗಳು ವ್ಯವಸ್ಥಿತವಾಗಿವೆ. ಆದರೆ, ಕೆಲವು ಕಡೆಗಳಲ್ಲಿ ಚರಂಡಿ ಕಾಮಗಾರಿ ಅಪೂರ್ಣ ಸ್ಥಿತಿಯಲ್ಲಿದೆ. ನ್ಯೂ ಬಲ್ಮಠ ರಸ್ತೆಯಲ್ಲಿ ಸಂಚಾರ ದಟ್ಟಣೆ ನಿತ್ಯದ ಗೋಳಾಗಿದೆ.

ಬಂಟ್ಸ್ ಹಾಸ್ಟೆಲ್ ವೃತ್ತದಿಂದ ಅಂಬೇಡ್ಕರ್ ವೃತ್ತಕ್ಕೆ ಸೇರುವ ರಸ್ತೆ ಬದಿಯಲ್ಲಿ ಪಾದಚಾರಿ ಮಾರ್ಗವಿಲ್ಲದೆ ಕಾಲ್ನಡಿಗೆಯಲ್ಲಿ ಸಾಗುವವರು


ಉದಯವಾಹಿನಿ ಚಿತ್ರ

ನಿತ್ಯ ಸಮಸ್ಯೆ ಎದುರಿಸುತ್ತಿದ್ದಾರೆ.

ಇತ್ತೀಚೆಗೆ ವೃತ್ತದಲ್ಲಿ ಪಾದಚಾರಿ ಮಾರ್ಗಕ್ಕೆ ಅಗತ್ಯವಿರುವ ಜಾಗವನ್ನು ತೆರವುಗೊಳಿಸಲಾಗಿದ್ದು, ಆದಷ್ಟು ಶೀಘ್ರ ಕಾಮಗಾರಿ ನಡೆಸಬೇಕು ಎಂಬುದು ಜನರ ಆಗ್ರಹವಾಗಿದೆ. ಬ್ರಿಡ್ಜ್ ರಸ್ತೆಯ ಒಂದು ಬದಿಯಲ್ಲಿ ಪಾದಚಾರಿ ಮಾರ್ಗವಿದ್ದರೂ, ಅದು ಬಹುತೇಕ ಸಮಯ ನಡೆದುಕೊಂಡು ಹೋಗುವವರಿಗೆ ಲಭ್ಯವಿರುವುದಿಲ್ಲ.

ಪಾದಚಾರಿ ಮಾರ್ಗದ ಮೇಲೆಯೇ ಕಾರುಗಳು ಸಾಲಾಗಿ ನಿಂತಿರುತ್ತವೆ. ಶಾಲಾ-ಕಾಲೇಜು ವಿದ್ಯಾರ್ಥಿಗಳು ರಸ್ತೆಯಲ್ಲಿ ನಡೆದುಕೊಂಡು ಹೋಗಬೇಕಾದ ಪರಿಸ್ಥಿತಿ ಇದೆ ಎನ್ನುತ್ತಾರೆ ವಿದ್ಯಾರ್ಥಿ ಅಶ್ವಿನ್.

# ಕುಂಟುತ್ತ ಸಾಗಿರುವ ತೋದಲಬಾಗಿ-ಚಿಕ್ಕಲಕಿ ಏತ ನೀರಾವರಿ ಯೋಜನೆ

• ಉದಯವಾಹಿನಿ ಜಮಖಂಡಿ

ಕಳೆದ 12 ವರ್ಷಗಳಿಂದ ನಡೆಯುತ್ತಿರುವ ಎಕ್ಕಲಮಟ್ಟಿ ಏತ ನೀರಾವರಿ ಯೋಜನೆ (ತೋದಲಬಾಗಿ-ಚಿಕ್ಕಲಕಿ ಏತ ನೀರಾವರಿ ಯೋಜನೆ) ನೀರಿಗಾಗಿ ರೈತರು ರಾಮನಿಗಾಗಿ ಶಬರಿ ಕಾದಂತೆ ಕಾಯುತ್ತಿದ್ದಾರೆ ಆದರೆ ಸಣ್ಣ ನೀರಾವರಿ ಇಲಾಖೆ ಅಧಿಕಾರಿಗಳು ಕ್ಯಾರೇ ಎನ್ನುತ್ತಿಲ್ಲ. ರೂ. 48 ಕೋಟಿ ವೆಚ್ಚದಲ್ಲಿ 5 ಸಾವಿರ ಎಕರೆ ಜಮೀನಿಗೆ 8 ತಿಂಗಳ ಕಾಲ ನೀರಾವರಿ ಕಲ್ಪಿಸಲು 2013ರಲ್ಲಿ ಈ ಯೋಜನೆಗೆ ಭೂಮಿಪೂಜೆ ನಡೆದಿದೆ. ಜಮಖಂಡಿ ತಾಲ್ಲೂಕಿನ ತೊದಲಬಾಗಿ, ಚಿಕ್ಕಲಕಿ, ಬಿದರಿ, ಜನವಾಡ ಹಾಗೂ ವಿಜಯಪುರ ಜಿಲ್ಲೆಯ ಅರ್ಜುನಗಿ ಗ್ರಾಮಗಳ ರೈತರಿಗೆ ಈ ಯೋಜನೆಯಿಂದ ಅನುಕೂಲವಾಗುತ್ತದೆ.

ಜನವಾಡ ಹತ್ತಿರದ ಕೃಷ್ಣಾ ನದಿಯಿಂದ 7 ಕಿ.ಮೀ ಅಂತರದಲ್ಲಿನ ಎಕ್ಕಲಮಟ್ಟಿವರೆಗೆ ಪೈಪ್‌ಲೈನ್ ಮೂಲಕ ನೀರು ತಂದು ಅಲ್ಲಿಂದ ಕೆನಲ್ ಮೂಲಕ ರೈತರ ಜಮೀನುಗಳಿಗೆ ನೀರು ಕೊಡುವ ಯೋಜನೆಯಾಗಿದೆ. ವಿಜಯಪುರ ಜಿಲ್ಲೆಯ ದೇವರಗೆಣ್ಣೂರದಿಂದ ವಿದ್ಯುತ್ ತರಲು ಇನ್ನೂ ಶೇ 25ರಷ್ಟು ಕಂಬಗಳನ್ನು ಅಳವಡಿಸಬೇಕು. ಅಲ್ಲಿ ವಿದ್ಯುತ್ ಪರಿವರ್ತಕ ಅಳವಡಿಸಬೇಕು. ಜನವಾಡ


ಉದಯವಾಹಿನಿ ಚಿತ್ರ

ಹತ್ತಿರದ ಕೃಷ್ಣಾ ನದಿಯಿಂದ ನೀರು ಎತ್ತಲು 1600 ಎಚ್.ಪಿಯ ಮೂರು ಮೋಟರ್ ಅಳವಡಿಸಬೇಕಿದೆ. ಸರ್ಕಾರ ಈ ಯೋಜನೆಗೆ ಹಣ ನೀಡಿದ್ದರೂ, ಹಣಕಾಸಿನ ತೊಂದರೆ ಇಲ್ಲದಿದ್ದರೂ ಅಧಿಕಾರಿಗಳ ನಿರ್ಲಕ್ಷ್ಯದಿಂದ ಕಾಮಗಾರಿ ಅರ್ಧಕ್ಕೆ ನಿಂತಿದೆ. ಇನ್ನೂ 300 ಮೀಟರ್ ಪೈಪ್‌ಲೈನ್ ಮಾಡಬೇಕು. ಶೇ 50ರಷ್ಟು ಕೆನಲ್ ಕಾಮಗಾರಿ ಆಗಬೇಕಿದೆ. ಕೂಡಲೇ ಅಧಿಕಾರಿಗಳು ಪೂರ್ಣಗೊಳಿಸಬೇಕು ಎಂದು ಜೋತಿಬಾ ಚೌಹಾನ ಒತ್ತಾಯಿಸಿದ್ದಾರೆ. ಈ ಮೊದಲು ಮಾಡಿರುವ ಕಾಮಗಾರಿಯೂ ಹಾಳಾಗುತ್ತಿದೆ. ಮೊದಲಿನ ಗುತ್ತಿಗೆದಾರರು ಬಿಟ್ಟು ಹೋಗಿದ್ದಾರೆ. ಇಗ

**3 ತಿಂಗಳಲ್ಲಿ ಯೋಜನೆ ಪೂರ್ಣ**
**ಗುತ್ತಿಗೆದಾರರು ಬಿಟ್ಟು ಹೋಗಿರುವುದರಿಂದ ಕಾಮಗಾರಿ ನನೆಗುದಿಗೆ ಬಿದ್ದಿದೆ. ಈಗ ರೂ. 3.62 ಕೋಟಿಗೆ ಟೆಂಡರ್ ಕರೆಯಲಾಗಿದೆ. 3 ತಿಂಗಳಲ್ಲಿ ಈ ಯೋಜನೆಯನ್ನು ಪೂರ್ಣ ಮುಗಿಸಿ ರೈತರಿಗೆ ನೀರು ಕೊಡಲಾಗುವುದು ಎಂದು ವಿಜಯಪುರ ಸಣ್ಣ ನೀರಾವರಿ ಇಲಾಖೆಯ ಇಂಜಿನಿಯರ್ ಶಾಂತಪ್ಪ ಕೋಳಿ ತಿಳಿಸಿದರು.**

ಬೇರೆಯವರಿಗೆ ತುಂಡು ಗುತ್ತಿಗೆ ನೀಡುತ್ತೇವೆ ಎಂದು ಎರಡು ವರ್ಷಗಳಿಂದ ಅಧಿಕಾರಿಗಳು ಹೇಳುತ್ತಿದ್ದಾರೆ. ಆದರೆ ಅದು ಕಾರ್ಯರೂಪಕ್ಕೆ ಮಾತ್ರ ಬರುತ್ತಿಲ್ಲ ಎಂದು ರೈತ ಮುಖಂಡ ರಾಮಪ್ಪ ಕರಜಗಿ ಹೇಳಿದರು. 2013ರಲ್ಲಿ ಕಾಮಗಾರಿ ಆರಂಭವಾಗಿದೆ. ಆದರೆ ಇಲ್ಲಿಯವರೆಗೆ ಇನ್ನೂ ಭೂಮಿ ಅವಾರ್ಡ್ ರೈತರಿಗೆ ಬಂದಿಲ್ಲ. ನೀರಿನ ಆಸೆಗಾಗಿ ಸರ್ಕಾರ ನಂತರ ಅವಾರ್ಡ್ ಮಾಡಿ ಹಣ ನೀಡಲಿ ಎಂದು ಜಮೀನು ನೀಡಿದ್ದೇವೆ. ಇತ್ತ ನೀರೂ ಇಲ್ಲ ಜಮೀನು, ಹಣವೂ ಇಲ್ಲದಂತಾಗಿದೆ ಎಂದು ರೈತ ಸಿದ್ದರಾಯ ಸನಸಿದ ಬೇಸರ ವ್ಯಕ್ತ ಪಡಿಸಿದರು.

# ಚರಂಡಿ, ರಸ್ತೆ ಕಾಮಗಾರಿ ನೆನೆಗುದಿಗೆ: ಅಧಿಕಾರಿಗಳ ನಿರ್ಲಕ್ಷ್ಯ: ಗ್ರಾಮಸ್ಥರ ಕಿಡಿ

• ಉದಯವಾಹಿನಿ ಮುಳಗುಂದ

ಸಮೀಪದ ಚಿಂಚಲಿ ಗ್ರಾಮದಲ್ಲಿ ಸಿ.ಸಿ ರಸ್ತೆ ಕಾಮಗಾರಿ ನನೆಗುದಿಗೆ ಬಿದಿದ್ದು, ವಾಹನ ಸವಾರರು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ಚರಂಡಿ ವ್ಯವಸ್ಥೆ ಇಲ್ಲದ ಕಾರಣ ಗ್ರಾಮದ ತೇರಿನಗಡ್ಡಿ ಮನೆ ಸಮೀಪ ಕೊಳಚೆ ಹಾಗೂ ಮಳೆ ನೀರು ಸರಾಗವಾಗಿ ಹರಿದು ಹೋಗುತ್ತಿಲ್ಲ. ಈ ಸ್ಥಳದಲ್ಲೇ ವಾರದ ಸಂತೆ ನಡೆಯುತ್ತಿದ್ದು, ಸಂತೆ ತ್ಯಾಜ್ಯ, ಮಳೆ ನೀರು ತಗ್ಗು ಪ್ರದೇಶದಲ್ಲಿ ನಿಂತು ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ. ಲೋಕೋಪಯೋಗಿ ಇಲಾಖೆ ವತಿಯಿಂದ ಅಂದಾಜು ರೂ.1 ಕೋಟಿ ಅನುದಾನದಲ್ಲಿ ಸಿ.ಸಿ ರಸ್ತೆ, ಚರಂಡಿ ಕಾಮಗಾರಿಗೆ ಸಚಿವ ಎಚ್.ಕೆ. ಪಾಟೀಲ ಅವರು ಈಚೆಗೆ ಭೂಮಿಪೂಜೆ ನೆರವೇರಿಸಿದ್ದರು. ಇದಾದ ಕೆಲವು ದಿನಗಳ ನಂತರ ಕೆಲಸ ಪ್ರಾರಂಭಿಸಿದ ಗುತ್ತಿಗೆದಾರರು ಚರಂಡಿ ನಿರ್ಮಾಣಕ್ಕೆ ರಸ್ತೆಯ ಎರಡು ಬದಿ ಅಗೆದು ಎರಡು ತಿಂಗಳಿಂದ ಹಾಗೆ ಬಿಟ್ಟಿದ್ದಾರೆ. ಇದರಿಂದ ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿದೆ ಎಂದು ಗ್ರಾಮಸ್ಥರು ಆರೋಪಿಸಿದರು.

ರಸ್ತೆಯಿಂದ ಬರುವ ದೂಳಿನಿಂದ ಪಕ್ಕದ ನಿವಾಸಿಗಳಿಗೆ ತೊಂದರೆಯಾಗುತ್ತಿದೆ. ರಸ್ತೆ ಅಗೆದು ಎರಡು ತಿಂಗಳು ಕಳೆದರೂ


ಉದಯವಾಹಿನಿ ಚಿತ್ರ

ಕಾಮಗಾರಿ ಆರಂಭಿಸಿಲ್ಲ. ಇದರಿಂದ ಗುಂಡಿಯಲ್ಲಿ ಮಳೆ ಹಾಗೂ ತ್ಯಾಜ್ಯ ನೀರು ಸಂಗ್ರಹವಾಗಿ ಜನರಲ್ಲಿ ರೋಗ ಹರಡುವ ಭೀತಿ ಉಂಟಾಗಿದೆ. ಸಂಬಂಧಿಸಿದ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಗಮನ ಹರಿಸುತ್ತಿಲ್ಲ ಎಂದು ಗ್ರಾಮದ ಯಲ್ಲಪ್ಪ ಆರೋಪಿಸಿದರು. ಅಣ್ಣಿಗೇರಿ, ಹುಬ್ಬಳ್ಳಿ ನಗರಕ್ಕೆ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆ ಇದಾಗಿದ್ದು, ನಿತ್ಯ ವಾಹನ ದಟ್ಟನೆ ಅಧಿಕವಾಗಿರುತ್ತದೆ. ಕಾಮಗಾರಿ ಪೂರ್ಣಗೊಳ್ಳದ ಕಾರಣ ವಾಹನ ಸಂಚಾರಕ್ಕೂ ತೊಂದರೆ ಆಗುತ್ತಿದೆ.

# ಮರಗಳ ಮಾರಣಹೋಮ: ಅಧಿಕಾರಿಗಳು ಮೌನ

## ಸರ್ಕಾರಿ ಜಾಗ, ಸಾರ್ವಜನಿಕ ರಸ್ತೆಯ ಮರಗಳಿಗೆ ಕೊಡಲಿಯೇಟು | ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಜನರ ಆಗ್ರಹ

• ಉದಯವಾಹಿನಿ ಹಾವೇರಿ

ಜಿಲ್ಲೆಯ ಸರ್ಕಾರ ಜಾಗ, ಸಾರ್ವಜನಿಕ ರಸ್ತೆ ಹಾಗೂ ಇತರ ಪ್ರದೇಶಗಳಲ್ಲಿರುವ ಮರಗಳನ್ನು ಯಾವುದೇ ಅನುಮತಿ ಇಲ್ಲದೇ ರಾಜಾರೋಷವಾಗಿ ಕಡಿದು ಹಾಕಲಾಗುತ್ತಿದೆ. ಇದರಿಂದಾಗಿ ಒಂದೊಂದೇ ಮರಗಳು ನೆಲಕಚ್ಚುತ್ತಿವೆ ಇದಕ್ಕೆ ಕಾರಣರಾದವರ ವಿರುದ್ಧ ಕ್ರಮ ಕೈಗೊಳ್ಳಲು, ಸ್ಥಳೀಯ ಆಡಳಿತ ಸಂಸ್ಥೆ ಹಾಗೂ ಅರಣ್ಯ ಇಲಾಖೆ ಅಧಿಕಾರಿಗಳು ಹಿಂದೇಟು ಹಾಕುತ್ತಿರುವ ಆರೋಪ ವ್ಯಕ್ತವಾಗುತ್ತಿದೆ. ಹಾವೇರಿ ಹಾಗೂ ರಾಣೆಬೆನ್ನೂರು ನಗರಸಭೆ ವ್ಯಾಪ್ತಿಯಲ್ಲಿ ಹಲವು ವರ್ಷಗಳ ಹಿಂದೆಯೇ ಮರಗಳನ್ನು ನೆಡಲಾಗಿದೆ. ರಸ್ತೆ, ಉದ್ಯಾನ, ಸಾರ್ವಜನಿಕ ಪ್ರದೇಶಗಳಲ್ಲಿ ಮರಗಳು ಬೆಳೆದು ನಿಂತಿವೆ. ಪಕ್ಷಿಗಳಿಗೆ ಆಶ್ರಯ ನೀಡುತ್ತಿವೆ. ಜನರಿಗೆ ನೆರಳು ಒದಗಿಸುತ್ತಿವೆ. ಇಂಥ ಮರಗಳನ್ನು ಕೆಲವರು ಏಕಾಏಕಿ ಕಡಿದು ಹಾಕುತ್ತಿದ್ದಾರೆ.

ಸರ್ಕಾರಿ ಜಾಗದಲ್ಲಿರುವ ಮರಗಳನ್ನು ಕಡಿಯಲು ಸಂಬಂಧಪಟ್ಟ ಸ್ಥಳೀಯ ಆಡಳಿತ ಸಂಸ್ಥೆ ಹಾಗೂ ಅರಣ್ಯ ಇಲಾಖೆ ಅನುಮತಿ ಕಡ್ಡಾಯಗೊಳಿಸಲಾಗಿದೆ. ಜೊತೆಗೆ, ಅರಣ್ಯ ಇಲಾಖೆ ಅಧಿಕಾರಿಗಳು ಖುದ್ದಾಗಿ ಸ್ಥಳದಲ್ಲಿ ಹಾಜರಿದ್ದು ಮರಗಳನ್ನು ಕಡಿಸಬೇಕು. ಹಲವು ಕಠಿಣ ನಿಯಮಗಳಿದ್ದರೂ ಅವುಗಳನ್ನು ಉಲ್ಲಂಘಿಸಿ ಮರಗಳ ಮಾರಣಹೋಮ ನಡೆಸಲಾಗುತ್ತಿದೆ. ಖಾಸಗಿ ಜಾಗದಲ್ಲಿರುವ ಮರಗಳನ್ನು ಕಡಿಸಲು ಕೆಲ ವಿನಾಯಿತಿಗಳಿವೆ. ಆದರೆ, ಸರ್ಕಾರಿ ಜಾಗದಲ್ಲಿರುವ ಮರಗಳನ್ನು ಕಡಿಯುವ ನಿಯಮಗಳು ಕಠಿಣವಾಗಿವೆ.


ಉದಯವಾಹಿನಿ ಚಿತ್ರ

**ಸಾರ್ವಜನಿಕ ಪ್ರದೇಶದಲ್ಲಿರುವ ಮರ ಕಡಿಯಲು ಅನುಮತಿ ಕಡ್ಡಾಯ. ಸಜ್ಜನರ ಪ್ಯಾರಡೈಸ್ ಬಳಿಯ ಮರವನ್ನು ಕಡಿದಿರುವ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು. -ಎಚ್. ಕಾಂತರಾಜು, ನಗರಸಭೆ ಪೌರಾಯುಕ್ತ**

ಆದರೆ, ನಿಯಮಗಳನ್ನು ಲೆಕ್ಕಿಸದೇ ಕೆಲವರು ತಮ್ಮಿಷ್ಟದಂತೆ ಮರಗಳನ್ನು ಕಡಿದು ಹಾಕುತ್ತಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ. ರಸ್ತೆ ಬದಿಯಲ್ಲಿ ಕಟ್ಟಡ ನಿರ್ಮಾಣ ಮಾಡುತ್ತಿರುವ ಜನರು, ಅದರ ಎದುರಿಗೆ ಇರುವ ಮರಗಳನ್ನು ಕಡಿದು ಹಾಕುತ್ತಿದ್ದಾರೆ. ರಸ್ತೆ ಪಕ್ಕದಲ್ಲಿ ಮರವಿದ್ದರೆ, ನಮ್ಮ ಕಟ್ಟಡ ಜನರಿಗೆ ಕಾಣುವುದಿಲ್ಲ. ಅದಕ್ಕೆ ಮರವನ್ನು ಕತ್ತರಿಸಲಾಗುತ್ತಿದೆ' ಎಂದು ಕಟ್ಟಡಗಳ ಮಾಲೀಕರು ಸಬೂಬು ನೀಡುತ್ತಿದ್ದಾರೆ. ಮರ ಕಡಿಯಲು ಅನುಮತಿ ಇದೆಯಾ? ಎಂದು ಪ್ರಶ್ನಿಸುವವರ ಮೇಲೆಯೇ, ಮಾಲೀಕರು ಜಗಳಕ್ಕೆ ಬರುತ್ತಿದ್ದಾರೆ. ಮರ ಕಡಿಯುವ ವಿಚಾರದಲ್ಲಿ ಹಲವು ಕಡೆಗಳಲ್ಲಿ ಸಾರ್ವಜನಿಕರು ಹಾಗೂ ಮಾಲೀಕರ ನಡುವೆ ಮಾತಿನ ಜಟಾಪಟಿ ನಡೆದಿದೆ.

**ಕಟ್ಟಡಕ್ಕೆ ಅಡ್ಡಿಯೆಂದು ಮರಕ್ಕೆ ಕೊಡಲಿ:** ಹಾವೇರಿಯಿಂದ ಜಿಲ್ಲಾಧಿಕಾರಿ ಕಚೇರಿಗೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಬಸವೇಶ್ವರ ನಗರದ ಬಳಿ ಸಜ್ಜನರ ಪ್ಯಾರಡೈಸ್ ಬಹುಮಹಡಿ ಕಟ್ಟಡ ನಿರ್ಮಿಸಲಾಗಿದೆ. ಈ ಕಟ್ಟಡದ ಎದುರು ಸಾರ್ವಜನಿಕ ರಸ್ತೆಯ ಬದಿಯಲ್ಲಿ ಬೃಹತ್ ಮರವೊಂದಿತ್ತು. ಈ ಮರವಿದ್ದರೆ ಕಟ್ಟಡ ಕಾಣಿಸುವುದಿಲ್ಲವೆಂಬ ಕಾರಣಕ್ಕೆ, ಮರವನ್ನೇ ಕತ್ತರಿಸಲಾಗಿದೆ. ಇದು ಪರಿಸರ ಪ್ರೇಮಿಗಳ ಆಕ್ರೋಶಕ್ಕೆ ಕಾರಣವಾಗಿದೆ. ಕೆಲ ತಿಂಗಳ ಹಿಂದೆಯಷ್ಟೇ ಸಜ್ಜನರ ಪ್ಯಾರಡೈಸ್ ನಿರ್ಮಿಸಲಾಗಿದೆ. ಇದೇ ಕಟ್ಟಡದಲ್ಲಿ, ವೆಂಕಟೇಶ್ವರ ಕೋ ಆಪರೇಟಿವ್ ಪವರ್ ಆ್ಯಂಡ್ ಅಗ್ರೊ ಪ್ರೊಸೆಸಿಂಗ್ ಕಂಪನಿ ಕಚೇರಿಯಿದೆ. ಕಟ್ಟಡದ ಎದುರು ಮರವಿದ್ದರೆ, ಕಚೇರಿಯ ನಾಮಫಲಕ ಕಾಣಿಸುವುದಿಲ್ಲ ಎಂಬ ಕಾರಣಕ್ಕೆ ಇಡೀ ಮರವನ್ನೇ ನೆಲಸಮ ಮಾಡಲಾಗಿದೆ ಎಂದು ಸ್ಥಳೀಯರು ದೂರಿದರು. ಕಟ್ಟಡ ಕತ್ತರಿಸಲು ಯಾವುದೇ ಅನುಮತಿ ಪಡೆದುಕೊಂಡಿಲ್ಲ. ಖಾಸಗಿ ವ್ಯಕ್ತಿಗಳ ಮೂಲಕ ಬೃಹತ್ ಮರವನ್ನು ಕಡಿದು ಹಾಕಲಾಗಿದೆ. ಜಿಲ್ಲಾಧಿಕಾರಿ ಕಚೇರಿಗೆ ಹೋಗುವ ರಸ್ತೆಯಲ್ಲಿ ನಿತ್ಯವೂ ಅಧಿಕಾರಿಗಳು ಓಡಾಡುತ್ತಾರೆ. ಅವರ ಎದುರೇ ಮರ ಕಡಿಯಲಾಗಿದೆ. ಸಮೀಪದಲ್ಲಿಯೇ ಸಾಮಾಜಿಕ ಅರಣ್ಯ ಇಲಾಖೆ ಕಚೇರಿ ಇದೆ. ಯಾರೊಬ್ಬರೂ ಮರ ಕಡಿಯುವುದನ್ನು ಪ್ರಶ್ನಿಸಿಲ್ಲ. ನಗರಸಭೆಯೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿದರು. ಸಾರ್ವಜನಿಕ ಸ್ಥಳದಲ್ಲಿರುವ ಮರಗಳನ್ನು ರಾಜಾರೋಷವಾಗಿ ಕಡಿಯುತ್ತಿರುವುದು, ಆಡಳಿತ ವ್ಯವಸ್ಥೆಯನ್ನು ಅಣುಕಿಸುವಂತಿದೆ. ಮರ ಕಡಿದವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು. ಇಂಥ ಕೃತ್ಯ ಎಸಗುವವರಿಗೆ ಎಚ್ಚರಿಕೆ ರವಾನಿಸಬೇಕು ಎಂದು ಆಗ್ರಹಿಸಿದರು. ಸುಭಾಷ್ ರಸ್ತೆಯಲ್ಲಿ ಮರದ ಅವಶೇಷ: ನಗರದ ಸುಭಾಷ್ ರಸ್ತೆ ಸಮೀಪದಲ್ಲಿ ಇತ್ತೀಚೆಗೆ ಮರವೊಂದನ್ನು ಕಡಿದು ಹಾಕಲಾಗಿದೆ. ಇದರ ಅವಶೇಷಗಳನ್ನು ರಸ್ತೆಯಲ್ಲಿ ಹಾಕಲಾಗಿತ್ತು. ಮರ ಕಡಿದವರ ಬಗ್ಗೆ ಯಾವುದೇ ವಿಚಾರಣೆ ಆಗಿಲ್ಲ. ನಗರದಲ್ಲಿ ಏನಾಗುತ್ತಿದೆ ಸಾರ್ವಜನಿಕ ಆಸ್ತಿಗೆ ಏನಾದರೂ ದಕ್ಕೆ ಆಗುತ್ತಿದೆಯಾ? ಎಂಬುದನ್ನು ನಗರಸಭೆಯವರು ಗಮನಿಸಬೇಕು. ಆದರೆ, ಅಧಿಕಾರಿಗಳು ಹಾಗೂ ಸಿಬ್ಬಂದಿ ರಸ್ತೆಯಲ್ಲಿ ಹೋದರೂ ಯಾವುದನ್ನೂ ಪ್ರಶ್ನಿಸುತ್ತಿಲ್ಲ. ತಮಗೆ ಸಂಬಂಧವಿಲ್ಲದಂತೆ ವರ್ತಿಸುತ್ತಿದ್ದಾರೆ ಎಂದು ಜನರು ದೂರಿದರು.

**ಇಲಾಖೆ ಅಧಿಕಾರಿಗಳು ಹಿಂದೇಟು**

## ಮಿನಿ ನ್ಯೂಸ್

### ವೇಗವಾಗಿ ಬೆಳೆಯುತ್ತಿರುವ ಮುದ್ರಣ ಕ್ಷೇತ್ರ

• ಉದಯವಾಹಿನಿ ಬಾಗಲಕೋಟೆ

ಮುದ್ರಣ ಕ್ಷೇತ್ರದಲ್ಲಿ ಎಷ್ಟೇ ಏಳು ಬೀಳುಗಳು ಬಂದರೂ, ಅಂಜದೇ ಗಟ್ಟಿತನದಿಂದ ದಿಟ್ಟ ಹೆಜ್ಜೆಯಿನ್ನಿಟ್ಟು ದೇಶದಲ್ಲಿ ಬಹಳಷ್ಟು ಮುದ್ರಣಾಲಯಗಳು ಮುಂದುವರಿದಿವೆ. ಅಷ್ಟೇ ವೇಗವಾಗಿ ಬೆಳವಣಿಗೆಯಾಗಿದೆ ಎಂದು ಮಲ್ಲಿಕಾರ್ಜುನ ಸಕ್ರೋಜಿ ಹೇಳಿದರು.

ಬಾಗಲಕೋಟೆ ಮುದ್ರಣಾಲಯಗಳ ಒಡೆಯರ ಸಂಘದಿಂದ ನಗರದ ವಾಸವಿ ಪ್ರಿಂಟರ್ಸ್ ಕಾರ್ಯಾಲಯದಲ್ಲಿ ಜೋಹಾನ್ಸ್ ಗುಟೆನ್ ಬರ್ಗ್ ಜಯಂತಿ ಅಂಗವಾಗಿ ಹಮ್ಮಿಕೊಂಡಿದ್ದ ಮುದ್ರಕರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಗುಟೆನ್ ಬರ್ಗ್ ಅವರು ಮುದ್ರಣ ಅಚ್ಚು ಹಾಗೂ ಮುದ್ರಣ ಯಂತ್ರ ಕಂಡು ಹಿಡಿಯದಿದ್ದಲ್ಲಿ ನಾವುಗಳು ಮುದ್ರಕರಾಗುತ್ತಿರಲಿಲ್ಲ ಎಂದರು. ಒಂದು ಕಾಲದಲ್ಲಿ ಅಚ್ಚು ಮುದ್ರಣಾಲಯ ಅಂದವಾಗಿತ್ತು. ನಂತರ ಆಫ್ ಸೆಟ್ ಪ್ರಿಂಟ್ ಬಂದಿತು. ತದನಂತರ ಮಲ್ಟಿ ಕಲರ್ ಪ್ರಿಂಟ್, ಡಿಜಿಟಲ್ ಪ್ರಿಂಟ್ ಬಂದಿದೆ. ಚೆಂದದ ಮುದ್ರಣ ಮಾಡಲು ಸಾಧ್ಯವಾಗುತ್ತಿದೆ. ಇಂತಹ ಪವಿತ್ರ ಮುದ್ರಣ ಕ್ಷೇತ್ರವನ್ನು ನಾವೆಲ್ಲರೂ ಸೇರಿ ಉಳಿಸಿ, ಬೆಳೆಸೋಣ ಎಂದು ಹೇಳಿದರು.

### ಇರಾನ್ ಸರ್ವಾಧಿಕಾರಿ ಹತ್ಯೆಯಾದರೆ ದೇಶದಲ್ಲಿ ಪ್ರತಿಭಟನೆ; ರೇಣುಕಾಚಾರ್ಯ ಖಂಡನೆ

• ಉದಯವಾಹಿನಿ ಹೊನ್ನಾಳಿ

ಇರಾನ್ ದೇಶದ ಸರ್ವಾಧಿಕಾರಿ ಅಯಾತೊಲ್ಲಾ ಇಮಾಮ್ ಖಮೇನಿ ಹತ್ಯೆಯನ್ನು ಖಂಡಿಸಿ ಚಿಕ್ಕಬಳ್ಳಾಪುರ ಸೇರಿ ದೇಶದ ವಿವಿಧ ಕಡೆ ಪ್ರತಿಭಟನೆ ಮಾಡಿರುವುದು ಖಂಡನೀಯ ಎಂದು ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ಹೇಳಿದರು. ತಾಲ್ಲೂಕಿನ ಕತ್ತಿಗೆ ಗ್ರಾಮದಲ್ಲಿ ವಿಬಿ ಜಿ ರಾಮ್ ಜಿ ಬಗ್ಗೆ ಹಮ್ಮಿಕೊಂಡಿದ್ದ ಪಾದಯಾತ್ರೆ ಜನಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಇರಾನ್ ಸರ್ವಾಧಿಕಾರಿಯ ಹತ್ಯೆ ಖಂಡಿಸಿ ದೇಶದಲ್ಲಿ ಪ್ರತಿಭಟನೆ ಮಾಡುವುದು ಅರ್ಥಹೀನ. ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧಕ್ಕೂ ನಮ್ಮ ದೇಶಕ್ಕೂ ಏನು ಸಂಬಂಧ. ಮೊದಲು ನಮ್ಮ ದೇಶದ ಮಣ್ಣಿಗೆ ಗೌರವ ಕೊಡುವುದನ್ನು ಕಲಿಯಬೇಕು ಎಂದು ಹೇಳಿದರು. ಪುಲ್ವಾಮದಲ್ಲಿ ನಮ್ಮ ಸೈನಿಕರು ಹತ್ಯೆಯಾದಾಗ, ಕಾಶ್ಮೀರದಲ್ಲಿ ಉಗ್ರಗಾಮಿಗಳಿಂದ ನಮ್ಮ ಹಿಂದೂಗಳು ಹತ್ಯೆಯಾದಾಗ ಹಾಗೂ ಬಾಂಗ್ಲಾ ದೇಶದಲ್ಲಿ ನಮ್ಮ ಹಿಂದೂಗಳ ನರಮೇಧ ಆದಾಗ ಪ್ರತಿಭಟನೆಗಳನ್ನು ಮಾಡದ ಇವರು ಇರಾನ್ ಸರ್ವಾಧಿಕಾರಿ ಹತ್ಯೆಯಾದಾಗ ಮಾಡುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು.

### ಬಿಇಒ, ಮಧ್ಯವರ್ತಿ ಲೋಕಾಯುಕ್ತ ಬಲೆಗೆ

• ಉದಯವಾಹಿನಿ ಶಿವಮೊಗ್ಗ

ವಾರ್ಷಿಕ ವೇತನ ಬಡ್ತಿ ಹಾಗೂ ಇತರೆ ಭತ್ಯೆಗಳನ್ನು ಕೊಡಿಸಲು ಕಚೇರಿಯ ಅಧೀನ ಸಿಬ್ಬಂದಿಯಿಂದ ರೂ.1 ಲಕ್ಷ ಲಂಚ ಪಡೆಯುವಾಗ ಭದ್ರಾವತಿ ಕ್ಷೇತ್ರ ಶಿಕ್ಷಣಾಧಿಕಾರಿ ಎ.ಕೆ.ನಾಗೇಂದ್ರಪ್ಪ ಹಾಗೂ ಮಧ್ಯವರ್ತಿ ಮಂಜುನಾಥ ಅವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ಭದ್ರಾವತಿ ಬಿಇಒ ಕಚೇರಿಯಲ್ಲಿ ಅಧೀಕ್ಷಕ ಆಗಿದ್ದ ಲಿಂಗರಾಜು ಅವರಿಗೆ 2011ರಿಂದ ತಾಂತ್ರಿಕ ಕಾರಣಗಳಿಂದ ವಾರ್ಷಿಕ ವೇತನ ಬಡ್ತಿ ಹಾಗೂ ಇತರೆ ಭತ್ಯೆ ನೀಡಿರಲಿಲ್ಲ. ಅದಕ್ಕಾಗಿ ಮನವಿ ಸಲ್ಲಿಸಿದ್ದರು. ಬಿಇಒ, ಮಧ್ಯವರ್ತಿ ಮಂಜುನಾಥ ಮೂಲಕ ರೂ.4 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದರು. ಈ ಬಗ್ಗೆ ದೂರು ನೀಡಲಾಗಿತ್ತು.

ಲಂಚದ ಭಾಗವಾಗಿ ಕಚೇರಿಯಲ್ಲಿ ರೂ.1 ಲಕ್ಷ ಪಡೆಯುವಾಗ ಲೋಕಾಯುಕ್ತ ಡಿವೈಎಸ್ಪಿ ಬಿ.ಪಿ.ಚಂದ್ರಶೇಖರ್ ನೇತೃತ್ವದ ತಂಡ ದಾಳಿ ನಡೆಸಿ ಹಣದ ಸಮೇತ ಬಂಧಿಸಿದೆ. ಮಂಜುನಾಥ ಆರ್‌ಟಿಐ ಕಾರ್ಯಕರ್ತ ಹಾಗೂ ಪತ್ರಕರ್ತ ಎಂದು ಹೇಳಿಕೊಂಡಿದ್ದು, ತನಿಖೆ ನಡೆದಿದೆ ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

### ಕಾರ್ಮಿಕ ಸಂಹಿತೆ ರದ್ದುಪಡಿಸಲು ಆಗ್ರಹ

• ಉದಯವಾಹಿನಿ ಉಡುಪಿ

ಕಾರ್ಮಿಕ ಸಂಹಿತೆಗಳನ್ನು ರದ್ದುಪಡಿಸಬೇಕೆಂದು ಆಗ್ರಹಿಸಿ ಉಡುಪಿ ಜಿಲ್ಲಾ ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಸಂಘ (ಸಿಐಟಿಯು) ಹಾಗೂ ಬೀಡಿ ಮತ್ತು ಟೊಬ್ಯಾಕೊ ಲೇಬರ್ ಯೂನಿಯನ್ ಜಿಲ್ಲಾ ಘಟಕದ ವತಿಯಿಂದ ಮಣಿಪಾಲದ ರಜತಾದ್ರಿಯ ಜಿಲ್ಲಾಧಿಕಾರಿ ಕಚೇರಿ ಮುಂಭಾಗದಲ್ಲಿ ಪ್ರತಿಭಟನೆ ನಡೆಯಿತು.

ಸಿಐಟಿಯು ರಾಜ್ಯ ಕಾರ್ಯದರ್ಶಿ ಸುರೇಶ್ ಕಲ್ಲಾಗಾರ ಮಾತನಾಡಿ, ಔದ್ಯೋಗಿಕ ಸುರಕ್ಷತೆ, ಆರೋಗ್ಯ ಮತ್ತು ಕಾರ್ಯಸ್ಥಳ ಪರಿಸ್ಥಿತಿಗಳ ಸಂಹಿತೆ 2020ರ ಕುರಿತು ಭಾರತೀಯ ಕಾರ್ಮಿಕ ಸಮ್ಮೇಳನದಲ್ಲಿ ಚರ್ಚೆಯಾಗಿಲ್ಲ. ಕಾರ್ಮಿಕ ಸಂಘಗಳು ಎತ್ತಿದ ಪ್ರಮುಖ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಅಧಿಸೂಚನೆಗೆ ಮುನ್ನ ಸೇರಿಸಿಕೊಂಡಿಲ್ಲ ಎಂದರು. ಒಕ್ಕೂಟ ವ್ಯವಸ್ಥೆಗೆ ವಿರುದ್ಧವಾದ ಸಮವರ್ತಿ ಪಟ್ಟಿಯ ಕಾರ್ಮಿಕರ ಕುರಿತ ಅಧಿಕಾರವನ್ನು ಕೇಂದ್ರ ಸರ್ಕಾರಕ್ಕೆ ಸಿಮೀತಗೊಳಿಸುವ ಪ್ರಯತ್ನವನ್ನು ರಾಜ್ಯ ಸರ್ಕಾರ ವಿರೋಧಿಸಬೇಕು ಎಂದು ಆಗ್ರಹಿಸಿದರು.

### ರೂ.900 ಕೋಟಿ ವೆಚ್ಚದಲ್ಲಿ ಮೆಗಾ ಡೈರಿ ನಿರ್ಮಾಣ : ಸಿ.ಎನ್. ಬಾಲಕೃಷ್ಣ

• ಉದಯವಾಹಿನಿ ನುಗ್ಗೇಹಳ್ಳಿ

ಜಿಲ್ಲೆಯಲ್ಲಿ ಡೈರಿ ಉದ್ಯಮಕ್ಕೆ ಉತ್ತೇಜನ ನೀಡಲು ಹಾಸನದ ಕೌಶಿಕ ಬಳಿ ರೂ.900 ಕೋಟಿ ವೆಚ್ಚದಲ್ಲಿ ಮೆಗಾ ಡೇರಿ ನಿರ್ಮಿಸಲಾಗುತ್ತಿದೆ ಎಂದು ಶಾಸಕ ಸಿ.ಎನ್. ಬಾಲಕೃಷ್ಣ ತಿಳಿಸಿದರು. ಹೋಬಳಿಯ ಕಲ್ಕೆರೆ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ವತಿಯಿಂದ ನಿರ್ಮಿಸಿರುವ ನೂತನ ಡೇರಿ ಕಟ್ಟಡ ಉದ್ಘಾಟಿಸಿ ಮಾತನಾಡಿದರು.

ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರು ಮತ್ತು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ , ಹಾಸನ ಹಾಲು ಒಕ್ಕೂಟದ ಅಧ್ಯಕ್ಷ ಎಚ್.ಡಿ. ರೇವಣ್ಣ ಅವರ ಪರಿಶ್ರಮದಿಂದ ಜಿಲ್ಲಾ ಕೇಂದ್ರದ ಕೌಶಿಕ ಬಳಿ ಸುಮಾರು ರೂ.900 ಕೋಟಿ ವೆಚ್ಚದಲ್ಲಿ ಕೇಂದ್ರ ಸರ್ಕಾರದ ಹೆಚ್ಚಿನ ನೆರವಿನೊಂದಿಗೆ ನಿರ್ಮಾಣವಾಗುತ್ತಿದೆ ಎಂದರು. ಕಲ್ಕೆರೆ ಹಾಲು ಉತ್ಪಾದಕರ ಸಹಕಾರ ಸಂಘದ ವತಿಯಿಂದ ಸುಮಾರು ರೂ.12 ಲಕ್ಷ ವೆಚ್ಚದಲ್ಲಿ ನೂತನ ಕಟ್ಟಡ ನಿರ್ಮಾಣ ಮಾಡಲಾಗಿದೆ. ಪ್ರತಿ ನಿತ್ಯ 850 ಲೀಟರ್ ಹಾಲನ್ನು ರೈತರಿಂದ ಖರೀದಿಸಲಾಗುತ್ತಿದೆ. ಪ್ರತಿ ತಿಂಗಳು ರೂ.10 ಲಕ್ಷ ವಹಿವಾಟು ನಡೆಯುತ್ತಿದೆ. ಸದ್ಯ ಹಾಸನ ಹಾಲು ಒಕ್ಕೂಟದಿಂದ ಪ್ರತಿ ಲೀಟರ್‌ಗೆ ರೂ.35 ನೀಡಲಾಗುತ್ತಿದ್ದು, ಸರ್ಕಾರದ ಸಹಾಯ ಧನ ಸೇರಿ ರೂ.39 ಆಗಲಿದೆ. ಮುಂಬರುವ ದಿನಗಳಲ್ಲಿ ಹೆಚ್ಚಿನ ಬೆಲೆ ಕುರಿತು ಅಧ್ಯಕ್ಷರು ತೀರ್ಮಾನ ಕೈಗೊಳ್ಳಲಿದ್ದಾರೆ ಎಂದರು. ಕಳೆದ 3 ವರ್ಷಗಳಲ್ಲಿ ತಾಲ್ಲೂಕಿನ ರೈತರಿಗೆ ಡೇರಿಗಳ ಮೂಲಕ ಸುಮಾರು ರೂ.5 ಕೋಟಿ ವೆಚ್ಚದಲ್ಲಿ ಮ್ಯಾಟ್‌ಗಳನ್ನು ರಿಯಾಯಿತಿ ದರದಲ್ಲಿ ನೀಡಲಾಗಿದೆ. ಹೊಸ ಡೇರಿ ಕಟ್ಟಡ ನಿರ್ಮಾಣಕ್ಕೂ ಕೆಎಂಎಫ್ ಹಾಗೂ ಹಾಸನ ಹಾಲು ಒಕ್ಕೂಟ ಮತ್ತು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಹೆಚ್ಚಿನ ಅನುದಾನ ಕೊಡಲಾಗುತ್ತಿದೆ. ಗ್ರಾಮಸ್ಥರು ಸಂಘದಲ್ಲಿ ಗುಣಮಟ್ಟದ ಹಾಲನ್ನು ಮಾರಾಟ ಮಾಡುತ್ತಿರುವುದರಿಂದ, ಸಂಘ ಹೆಚ್ಚು ಲಾಭಗಳಿಸಲು ಸಾಧ್ಯವಾಗಿದೆ. ಮುಂಬರುವ ದಿನಗಳಲ್ಲೂ ಸಂಘ ಹೆಚ್ಚು ಲಾಭಗಳಿಸಲು ಎಲ್ಲಾ ಸದಸ್ಯರು ಸಹಕಾರ ನೀಡಬೇಕು ಎಂದು ತಿಳಿಸಿದರು.

## ದಿನ ಭವಿಷ್ಯ

| ರಾಹುಕಾಲ | ಮಧ್ಯಾಹ್ನ | 01:30 ರಿಂದ 03:00 |
|---|---|---|
| ಗುಳಿಕ ಕಾಲ | ಬೆಳಿಗ್ಗೆ | 09:00 ರಿಂದ 10:30 |
| ಯಮಗಂಡ ಕಾಲ | ಬೆಳಿಗ್ಗೆ | 06:00 ರಿಂದ 07:30 |

**ಮೇಷ** ಆರೋಗ್ಯದ ಬಗ್ಗೆ ಸ್ವಲ್ಪ ಗಮನ ನೀಡಬೇಕು. ಮನೆಯಿಂದ ಹೊರ ಇದ್ದು ಉದ್ಯೋಗ, ಅಧ್ಯಯನ ಮಾಡುತ್ತಿದ್ದರೆ, ಹಣ ಮತ್ತು ಸಮಯವನ್ನು ವ್ಯರ್ಥ ಮಾಡುವಂತಹ ಜನರಿಂದ ದೂರವಿರುವುದು ಕಲಿತುಕೊಳ್ಳಬೇಕು.

**ವೃಷಭ** ನೀವು ಸಂಜೆ ಸ್ನೇಹಿತರೊಂದಿಗೆ ಹೊರಗೆ ಹೋದರೆ ತಕ್ಷಣದ ಪ್ರಣಯ ನಿಮಗೆ ದೊರಕಬಹುದು. ನುರಿತ ಜನರೊಡನೆ ಒಡನಾಟ ಹೊಂದಿ ಅವರು ನಿಮಗೆ ಭವಿಷ್ಯದ ಪ್ರವೃತ್ತಿಗಳ ಬಗ್ಗೆ ಒಳನೋಟ ನೀಡಬಲ್ಲರು.

**ಮಿಥುನ** ನಿಮ್ಮ ಜೊತೆಗಿರುವ ಯಾರಾದರೂ ನಿಮ್ಮ ಇತ್ತೀಚಿನ ಕ್ರಮಗಳಿಂದ ಕಿರಿಕಿರಿಗೊಳ್ಳಬಹುದು. ನಿಮ್ಮನ್ನು ದೀರ್ಘಕಾಲ ಹಿಡಿದಿಟ್ಟಿರುವ ಒಂದು ಏಕಾಂಗಿ ಹಂತ ಜೀವನ ಸಂಗಾತಿ ದೊರಕಿದ ತಕ್ಷಣ ಕೊನೆಗೊಳ್ಳುತ್ತದೆ.

**ಕರ್ಕಾಟಕ** ನಿಮ್ಮ ಅತಿಥಿಗಳ ಜೊತ ಒರಟಾಗಿ ನಡೆದುಕೊಳ್ಳಬೇಡಿ. ನಿಮ್ಮ ವರ್ತನೆ ಕೇವಲ ನಿಮ್ಮ ಕುಟುಂಬಕ್ಕೆ ಮಾತ್ರವೇ ಅಸಮಾಧಾನ ತರದೇ ಸಂಬಂಧಗಳಲ್ಲೂ ಶೂನ್ಯತೆಯನ್ನು ತರಬಹುದು.

**ಸಿಂಹ** ಸಾಮಾಜಿಕ ಕಾರ್ಯಗಳಿಗೆ ಹಾಜರಾಗಲು ಅವಕಾಶಗಳಿರಬಹುದು ಇದು ನಿಮ್ಮನ್ನು ಪ್ರಭಾವಿ ವ್ಯಕ್ತಿಗಳ ಜೊತೆ ನಿಕಟ ಸಂಪರ್ಕ ಹೊಂದುವಂತೆ ಮಾಡಬಹುದು. ಪ್ರಣಯ ನಿಮ್ಮ ಹೃದಯವನ್ನು ಆಳುತ್ತದೆ.

**ಕನ್ಯಾ** ಆರ್ಥಿಕ ಸಮಸ್ಯೆ ರಚನಾತ್ಮಕವಾಗಿ ಯೋಚಿಸುವ ನಿಮ್ಮ ಸಾಮರ್ಥ್ಯವನ್ನು ಹಾಳುಮಾಡುತ್ತದೆ. ಸಂಬಂಧಗಳೊಂದಿಗಿನ ಸಂಬಂಧಗಳು ಹಾಗೂ ಬಂಧಗಳ ನವೀಕರಣದ ಒಂದು ದಿನ.

**ತುಲಾ** ಹಣದ ಸ್ಥಾನ, ಆರ್ಥಿಕ ಸಮಸ್ಯೆಗಳು ಒತ್ತಡದ ಮೂಲವಾಗಿರುತ್ತವೆ. ವಿದೇಶಿ ಸಂಪರ್ಕಗಳನ್ನು ಹೊಂದಿರುವ ವ್ಯಾಪಾರಿಗಳಿಗೆ ಹಣದ ನಷ್ಟವಾಗುವ ಸಾಧ್ಯತೆ ಇದೆ, ಯೋಚಿಸಿ ಅರ್ಥಮಾಡಿಕೊಂಡು ನಡೆಯಿರಿ.

**ವೃಶ್ಚಿಕ** ನಿಮ್ಮ ಪ್ರೀತಿಪಾತ್ರರೊಡನೆ ನಿಮ್ಮ ವೈಯಕ್ತಿಕ ಭಾವನೆಗಳು / ರಹಸ್ಯಗಳನ್ನು ಹಂಚಿಕೊಳ್ಳಲು ಇದು ಸರಿಯಾದ ಸಮಯವಲ್ಲ. ನಿಮ್ಮ ಕೌಶಲ್ಯಗಳನ್ನು ತೋರಿಸಲು ಅವಕಾಶಗಳು ನಿಮ್ಮೊಂದಿಗಿವೆ.

**ಧನಸ್ಸು** ನಿಮ್ಮ ಆಪ್ತರೊಂದಿಗೆ ಸಮಯವನ್ನು ಕಳೆಯುವುದು ಸಹ ಅಗತ್ಯವೆಂದು ನೀವು ಅರ್ಥ ಮಾಡಿಕೊಳ್ಳಬೇಕು. ನಿಮ್ಮ ಸಂಗಾತಿ ನಿಜವಾಗಿಯೂ ಏನೋ ಸುಂದರವಾದ್ದರಿಂದ ನಿಮ್ಮನ್ನು ಅಚ್ಚರಿಗೊಳಿಸಬಹುದು.

**ಮಕರ** ಮೋಜಿಗಾಗಿ ಹೊರಹೋಗುವವರಿಗೆ ಸಂತೋಷ ಮತ್ತು ಆನಂದವನ್ನು ಹಂಚಿಕೊಳ್ಳಿ. ಇಂದಿನವರೆಗೂ ಅಗತ್ಯವಿಲ್ಲದೆ ಹಣವನ್ನು ಖರ್ಚು ಮಾಡುತ್ತಿದ್ದ ಜನರು, ಇಂದು ಅವರು ತನ್ನನ್ನು ನಿಯಂತ್ರಿಸಬೇಕು.

**ಕುಂಭ** ನಿಮ್ಮ ದೈಹಿಕ ರಚನೆಯನ್ನು ಕಾಯ್ದುಕೊಳ್ಳಲು ನೆರವಾಗುವ ಕೆಲವು ಕ್ರೀಡಾ ಚಟುವಟಿಕೆಗಳನ್ನು ನೀವು ಇಂದು ಆನಂದಿಸಬಹುದು. ಇಂದು ಹಣದ ನಷ್ಟವು ಸಂಭವಿಸಬಹುದು.

**ಮೀನ** ನಿಮಗೆ ಏನನ್ನಾದರೂ ಕಲಿಯಲು ಬಹಳ ವಯಸ್ಸಾಗಿದೆಯೆಂದು ಭಾವಿಸಬಹುದು, ಆದರೆ ಅದು ನಿಜವಲ್ಲ – ನಿಮ್ಮ ಪ್ರಖರ ಮತ್ತು ಸಕ್ರಿಯ ಮನಸ್ಸಿನಿಂದ ಹೊಸ ವಿಷಯಗಳನ್ನು ಸುಲಭವಾಗಿ ಕಲಿಯುವಿರಿ.

### ಬೈಕ್ ವಿತರಣೆಗಿಲ್ಲ ಕಡಿವಾಣ, ಸ್ಥಳೀಯ ಮತ್ತು ಪ್ರವಾಸಿಗರ ಜೀವದ ಜೊತೆ ಚೆಲ್ಲಾಟ

# ಪರವಾನಗಿ ಇಲ್ಲದ ಪ್ರವಾಸಿಗರಿಗೆ ಬೈಕ್ ಬಾಡಿಗೆ?

• ಉದಯವಾಹಿನಿ ಗಂಗಾವತಿ

ತಾಲ್ಲೂಕಿನ ಸಾಣಾಪುರ, ಹನುಮನಹಳ್ಳಿ, ಆನೆಗೊಂದಿ ಭಾಗದ ಪ್ರವಾಸಿ ತಾಣಗಳ ವೀಕ್ಷಣೆಗೆ ಬರುವ ವಿದೇಶಿ ಮತ್ತು ಸ್ವದೇಶಿ ಪ್ರವಾಸಿಗರಿಗೆ ಸ್ಥಳೀಯರು ಪರವಾನಗಿ ಇಲ್ಲದೇ ಬೈಕ್‌ಗಳನ್ನು ಬಾಡಿಗೆ ನೀಡುತ್ತಿರುವ ಆರೋಪ ಕೇಳಿಬಂದಿದೆ. ಸವಾರರ ಅಡ್ಡಾದಿಡ್ಡಿ ಚಾಲನೆಯಿಂದ ಅಪಘಾತಕ್ಕೀಡಾಗಿ ಆಸ್ಪತ್ರೆ ಸೇರುವ ಘಟನೆಗಳು ನಡೆಯುತ್ತಿವೆ.

ಅಕ್ಟೋಬರ್ ತಿಂಗಳಿನಿಂದ ಹಂಪಿ, ಅಂಜನಾದ್ರಿ, ಆನೆಗೊಂದಿ ಭಾಗದ ನಿಸರ್ಗ ಹಚ್ಚಹಸಿರಿನಿಂದ ಕೂಡಿ, ನೋಡುಗರ ಕಣ್ಮನ ಸೆಳೆಯುತ್ತದೆ. ಈ ಅವಧಿಯಲ್ಲಿ ಕೆಲವರು ಅನಧಿಕೃತ ರೆಸಾರ್ಟ್‌ಗಳನ್ನು ನಿರ್ಮಿಸಿಕೊಂಡು, ವಾರಾಂತ್ಯಕ್ಕೆ ಬರುವ ಪ್ರವಾಸಿಗರಿಗೆ ಬಾಡಿಗೆ ರೂಪದಲ್ಲಿ ರೂಮ್, ಬೈಕ್ ನೀಡಿ, ಮೋಜು-ಮಸ್ತಿಗೆ ಆಸ್ಪದ ನೀಡಲಾಗುತ್ತಿದ್ದಾರೆ.

**ಎಲ್ಲೆಲ್ಲಿ ಬೈಕ್ ಬಾಡಿಗೆ?:** ಸಾಣಾಪುರ ಗ್ರಾಮದ ಪಂಚಾಯ್ತಿ ಎದುರು, ಕೆರೆ ರಸ್ತೆ, ರಾಮಬಾಬು ಸಲೂನ್ ಶಾಪ್ ಎದುರು ಮತ್ತು 100 ಮೀ ಅಂತರದಲ್ಲಿ ಹಾಗೇ ಸಾಣಾಪುರ ಬಸಾಪುರ, ಹನುಮನಹಳ್ಳಿ, ವಿರೂಪಾಪುರಗಡ್ಡಿ, ಆನೆಗೊಂದಿ ಗ್ರಾಮದ ರೆಸಾರ್ಟ್, ಹೋಂಸ್ಟೇ, ಹೋಟೆಲ್, ಆಟೋ ಚಾಲಕರ ಬಳಿ ಸೇರಿ ಹಲವೆಡೆ ದಿನಕ್ಕೆ ರೂ.500ರಿಂದ ರೂ.1 ಸಾವಿರಕ್ಕೆ ಬೈಕ್ ಬಾಡಿಗೆ ಸಿಗುತ್ತವೆ. ಬಹುತೇಕರಿಗೆ ಬಾಡಿಗೆ ನೀಡಲು ಪರವಾನಗಿಯೇ ಇರುವುದಿಲ್ಲ ಎನ್ನುವುದು ಗುಟ್ಟಾಗಿ ಉಳಿದಿಲ್ಲ.

**ವಾಹನ ಚಲಾಯಿಸಲು ಬರದವರಿಗೆ ಬೈಕ್:** ವಿದೇಶಿಗರಿಗೆ ಭಾರತದ ಬೈಕ್‌ಗಳನ್ನು ಓಡಿಸಿದ ಅನುಭವವಿರುವಿದಿಲ್ಲ ಗೇರ್ ಬೈಕ್ ಹೊರತುಪಡಿಸಿ ಸ್ಕೂಟಿ, ಹೊಂಡಾನವಿ ಬೈಕ್ ಬಾಡಿಗೆ ಪಡೆದು ಸಂಚರಿಸುತ್ತಾರೆ. ಈ ವಾಹನಗಳಿಗೆ ಗೇರ್ ಇರುವುದಿಲ್ಲ. ಪ್ರವಾಸಿಗರು ಮನಸ್ಸಿಗೆ ಬಂದಷ್ಟು ಎಕ್ಸಲೈಟರ್ ತಿರುಗಿಸಿ ಓಡಿಸುತ್ತಾರೆ. ತಿರುವು, ರಸ್ತೆ ಉಬ್ಬು, ಜನಸಂದಣಿ ಪ್ರದೇಶ, ಎದುರು ಬೃಹತ್ ವಾಹನಗಳು ಬಂದಾಗ ನಿಯಂತ್ರಿಸಲಾಗದೇ ಜನರಿಗೆ ಡಿಕ್ಕಿಹೊಡೆದು ಅಪಘಾತ ಮಾಡುತ್ತಿದ್ದಾರೆ. **ದಾಖಲೆ ಇರಲ್ಲ:** ಬಾಡಿಗೆ ನೀಡುವ ಬಹುತೇಕ ಬೈಕ್‌ಗಳಿಗೆ ವಿಮೆ, ಬೈಕ್ ಮಾಲೀಕನ ಹೆಸರಲ್ಲಿ ನೋಂದಣಿ ಇರಲ್ಲ. ಯಾವ ವರ್ಷದ ಬೈಕ್ ಎಂಬ ದಾಖಲೆಗಳಿರಲ್ಲ. ಮಾಲಿನ್ಯ ನಿಯಂತ್ರಣ ಪ್ರಮಾಣಪತ್ರ ದೂರದ ಮಾತು. ಎಲ್ಲವೂ ಸೆಕೆಂಡ್ ಹ್ಯಾಂಡ್ ಬೈಕ್‌ಗಳೇ ಆಗಿರುತ್ತವೆ. ಬೈಕ್ ನೀಡುವವರು ಕೂಡ ಪ್ರವಾಸಿಗರ ಬಳಿ ಚಾಲನಾ ಪರವಾನಗಿ ಪರಿಶೀಲಿಸಲ್ಲ ಎನ್ನುವುದು ಸಾರ್ವಜನಿಕರ ದೂರು.


ಉದಯವಾಹಿನಿ ಚಿತ್ರ

> ಕೆಲವು ದ್ವಿಚಕ್ರ ವಾಹನಗಳ ಮಾಲೀಕರು ಆರ್‌ಟಿಒನಿಂದ ಅನುಮತಿ ಪಡೆದುಕೊಂಡಿದ್ದಾರೆ. ಅನಧಿಕೃತವಾಗಿ ವಿದೇಶಿಗರಿಗೆ ಬೈಕ್ ನೀಡಿದ್ದು ಕಂಡು ಬಂದರೆ ಕ್ರಮ ಕೈಗೊಳ್ಳಲಾಗುವುದು.
> -ಜಿ.ಎಸ್. ನ್ಯಾಮಗೌಡ ಗಂಗಾವತಿ ಉಪವಿಭಾಗದ ಡಿವೈಎಸ್‌ಪಿ

> ವಿದೇಶಿ ಪ್ರಜೆ ಸಹೋದರನಿಗೆ ಡಿಕ್ಕಿ ಹೊಡೆದಿದ್ದು ಬಲಗಾಲು ತೀವ್ರವಾಗಿ ಗಾಯಗೊಂಡಿದೆ. ಯಾವ ತಪ್ಪು ಮಾಡದೇ ಶಿಕ್ಷೆ ಅನುಭವಿಸುತ್ತಿದ್ದಾನೆ. ಅವನ ಮುಂದಿನ ಜೀವನಕ್ಕೆ ಯಾರು ಹೊಣೆ? ವಿದೇಶಿ ಪ್ರಜೆನಾ ಬೈಕ್ ಬಾಡಿಗೆ ನೀಡಿದ ಮಾಲೀಕನಾ?
> -ಯೋಹಾನಕುಮಾರ, ಸಾಣಾಪುರ ನಿವಾಸಿ

**ಪೊಲೀಸರಿಂದ ಇಲ್ಲ ತಡೆ:** ಸಾಣಾಪುರ ಭಾಗದಲ್ಲಿ ಪರವಾನಗಿ ಇಲ್ಲದೆ ಬೈಕ್ ಬಾಡಿಗೆ ನೀಡುತ್ತಿರುವ ಬಗ್ಗೆ ಸಂಚಾರ ಮತ್ತು ಗ್ರಾಮೀಣ ಪೊಲೀಸ್ ಠಾಣೆಗೆ, ಸಾಣಾಪುರ ಭಾಗದಲ್ಲಿ ಕರ್ತವ್ಯ ನಿರ್ವಹಿಸುವ ಬೀಟ್ ಪೊಲೀಸರಿಗೆ ಮಾಹಿತಿ ಇದೆ. ಆದರೂ ಇವುಗಳಿಗೆ ಕಡಿವಾಣ ಹಾಕುತ್ತಿಲ್ಲ. ಕೆಲ ತಿಂಗಳುಗಳಿಂದ ಹಲವು ಅಪಘಾತಗಳು ನಡೆದರೂ ಕ್ರಮವಾಗಿಲ್ಲ. ಪ್ರವಾಸಿಗರು ಬಾಡಿಗೆ ಬೈಕ್‌ಗಳಲ್ಲಿ ಹಗಲು ರಾತ್ರಿ ಎನ್ನದೆ ಬೆಟ್ಟ-ಗುಡ್ಡ, ನಿರ್ಜನ ಪ್ರದೇಶಗಳಿಗೆ ತೆರಳಿ ರೇವ್ ಪಾರ್ಟಿ, ಕ್ರೈಮಿಂಗ್, ಫೋಟೊಗ್ರಫಿ ಸೇರಿ ಗಾಂಜಾ, ಎರಾಯಿನ್‌ನಂತಹ ಮಾದಕ ವಸ್ತುಗಳ ಸೇವಿಸಿ, ಸಂಕಷ್ಟ ಎದುರಿಸಿದ ಘಟನೆಗಳು ನಡೆದಿದ್ದು ಪ್ರಕರಣಗಳು ದಾಖಲಾಗಿವೆ. ಪ್ರಕರಣ ಮುಚ್ಚುವ ರೆಸಾರ್ಟ್ ಮಾಲೀಕರು ಈಚೆಗೆ ಸಾಣಾಪುರ ಗ್ರಾಮದ ಗ್ರಾ.ಪಂ ಬಳಿ ಶಾಂತಕುಮಾರ ಎನ್ನುವ ಯುವಕನೊಬ್ಬ ಮೇಸ್ತ್ರಿ ಕೆಲಸದ ಬಗ್ಗೆ ಸಹ ವ್ಯಕ್ತಿಯೊಂದಿಗೆ ಮಾತನಾಡುತ್ತಿದ್ದಾಗ ವಿದೇಶಿ ಪ್ರಜೆಯೊಬ್ಬ ನಿರ್ಲಕ್ಷ್ಯತನದಿಂದ ಬೈಕ್ ಚಲಾಯಿಸಿಕೊಂಡು ಬಂದು ಡಿಕ್ಕಿ ಹೊಡೆದಿದ್ದು ಬಲಗಾಲಿಗೆ ತೀವ್ರ ಸ್ವರೂಪದ ಗಾಯವಾಗಿ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ.


## ಕಲ್ಲಂಗಡಿ ಬೆಳೆಗಾರರಿಗೆ ಒಲಿದ ಅದೃಷ್ಟ

• ಉದಯವಾಹಿನಿ ಶಿರಸಿ

ಮಾರುಕಟ್ಟೆಯಲ್ಲಿ ಕಲ್ಲಂಗಡಿ ಹಣ್ಣಿನ ಬೆಳೆಗೆ ಉತ್ತಮ ದರ ಲಭಿಸುತ್ತಿರುವುದು ತಾಲ್ಲೂಕಿನ ಪೂರ್ವ ಭಾಗದ ರೈತರಲ್ಲಿ ಹೊಸ ಭರವಸೆ ಮೂಡಿಸಿದೆ. ಪ್ರಮುಖವಾಗಿ ಮಾರಿಕಾಂಬಾ ಜಾತ್ರೆಯು ಕಲ್ಲಂಗಡಿ ಬೆಳೆಗಾರರಿಗೆ ವರದಾನವಾಗಿ ಪರಿಣಮಿಸಿದ್ದು, ಕಳೆದ ವರ್ಷದ ನಷ್ಟವನ್ನು ಮರೆತು ರೈತರು ಲಾಭದ ಹಾದಿಯಲ್ಲಿದ್ದಾರೆ.

ತಾಲ್ಲೂಕಿನ ಬನವಾಸಿ, ಗುಡ್ನಾಪುರ, ತಿಗಣಿ, ಬಾಶಿ, ನರೂರು, ಅಜ್ಜರಣಿ, ಮಧುವಳ್ಳಿ ಸೇರಿದಂತೆ ವಿವಿಧ ಭಾಗಗಳಲ್ಲಿ ಸುಮಾರು 120 ಎಕರೆ ಪ್ರದೇಶದಲ್ಲಿ ಬೇಸಿಗೆ ಬೆಳೆಯಾಗಿ ಕಲ್ಲಂಗಡಿ ಬೆಳೆಯಲಾಗಿದೆ.

ಕಳೆದ ವರ್ಷ ಮಾರ್ಚ್ ಮತ್ತು ಏಪ್ರಿಲ್ ತಿಂಗಳಿನಲ್ಲಿ ಸುರಿದ ಅಕಾಲಿಕ ಮಳೆಯಿಂದಾಗಿ ಬಲಿತ ಹಣ್ಣುಗಳು ಗದ್ದೆಯಲ್ಲೇ ಕೊಳೆತು ರೈತರು ಅಸಲು ಕೂಡ ಸಿಗದೇ ಕೈಸುಟ್ಟುಕೊಂಡಿದ್ದರು. ಆದರೆ, ಈ ಬಾರಿ ಭೂಮಿಗೆ ಸಿಕ್ಕ ಹದ ಮತ್ತು ಮಾರುಕಟ್ಟೆಯಲ್ಲಿನ ಬೇಡಿಕೆ ಕಂಡು ರೈತರು ಮತ್ತೆ ಕಲ್ಲಂಗಡಿಯತ್ತ ಆಸಕ್ತಿ ತೋರಿದ್ದಾರೆ.


ಉದಯವಾಹಿನಿ ಚಿತ್ರ

ಈ ಬಾರಿ ಕಲ್ಲಂಗಡಿ ಹೂವು ಕಚ್ಚುವ ಸಮಯದಲ್ಲಿ ಅಧಿಕ ಚಳಿ ಬಿದ್ದ ಕಾರಣ ಇಳುವರಿಯಲ್ಲಿ ಸ್ವಲ್ಪ ಕುಸಿತ ಕಂಡುಬಂದಿದೆ. ಆದರೂ ಸಹ, ಪ್ರಸ್ತುತ ಮಾರುಕಟ್ಟೆಯಲ್ಲಿ ಕೆಜಿಯೊಂದಕ್ಕೆ ರೂ.18 ರಿಂದ ರೂ. 20 ದರವಿದ್ದು, ಉತ್ತಮ ದರ ಸಿಗುತ್ತಿರುವುದು ಇಳುವರಿ ಕುಸಿತದ ಆತಂಕವನ್ನು ದೂರ ಮಾಡಿ ರೈತರಿಗೆ ನೆಮ್ಮದಿ ತಂದಿದೆ ಎನ್ನುತ್ತಾರೆ ಬೆಳೆಗಾರ ಅಂಡಗಿಯ ಸುದರ್ಶನ ನಾಯ್ಕ.

ಕಲ್ಲಂಗಡಿ ಕೇವಲ 70 ದಿನಗಳ ಬೆಳೆಯಾಗಿದ್ದು, ಒಂದು ಎಕರೆಗೆ ಅಂದಾಜು ರೂ.60 ಸಾವಿರದಿಂದ 70 ಸಾವಿರ ಖರ್ಚು ತಗಲುತ್ತದೆ. ಉತ್ತಮ ಫಸಲು ಬಂದರೆ ಎರಡರಿಂದ ಎರಡುವರೆ ಲಕ್ಷ ರೂಪಾಯಿವರೆಗೂ ಆದಾಯ ಗಳಿಸಲು ಸಾಧ್ಯವಿದೆ. ತೋಟಗಾರಿಕಾ ಇಲಾಖೆಯು ಸಹ ರೈತರಿಗೆ ಪ್ರೋತ್ಸಾಹ ನೀಡುತ್ತಿದ್ದು, ಬೀಜ ಹಾಗೂ ಗೊಬ್ಬರಕ್ಕೆ ರೂ.9,400 ಮತ್ತು ಪ್ಲಾಸ್ಟಿಕ್ ಹೊದಿಕೆಗೆ ರೂ.8,000 ಸಹಾಯಧನ ನೀಡುತ್ತಿದೆ. ಇದು ರೈತರಿಗೆ ಆರ್ಥಿಕವಾಗಿ ಬೆನ್ನೆಲುಬಾಗಿದೆ ಎನ್ನುತ್ತಾರೆ ಬೆಳೆಗಾರ ವಸಂತ ಗೌಡ.

ಶಿರಸಿ ಮಾತ್ರವಲ್ಲದೆ ಸುತ್ತಮುತ್ತಲಿನ ಸಾಗರ, ಯಲ್ಲಾಪುರ ಜಾತ್ರೆಗಳಿಂದ ಕಲ್ಲಂಗಡಿಗೆ ಭಾರೀ ಬೇಡಿಕೆ ಸೃಷ್ಟಿಯಾಗಿತ್ತು. ವರದಾ ನದಿ ತೀರದ ಮರಳು ಮಿಶ್ರಿತ ಮಣ್ಣಿನಲ್ಲಿ ಬೆಳೆದ ಇಲ್ಲಿನ ಹಣ್ಣುಗಳು ಹೆಚ್ಚು ಸಿಹಿಯಾಗಿರುವುದರಿಂದ ಗ್ರಾಹಕರು ಕೂಡ ಇಷ್ಟಪಟ್ಟು ಖರೀದಿಸುತ್ತಿದ್ದಾರೆ.

## ಪಡಿತರ ಚೀಟಿಗೆ ರೂ. 5 ಸಾವಿರ ಲಂಚ ಆಹಾರ ನಿರೀಕ್ಷಕ ಬಂಧನ

• ಉದಯವಾಹಿನಿ ಹಾವೇರಿ

ಪಡಿತರ ಚೀಟಿ ಮಾಡಿಸಿಕೊಟ್ಟಿದ್ದಕ್ಕೆ ರೂ. 5000 ಲಂಚ ಪಡೆದ ಆರೋಪದಡಿ ಆಹಾರ ನಿರೀಕ್ಷಕ (ಪ್ರಭಾರ) ವಿಜಯಕುಮಾರ ಗುಡಗೇರಿ ಎಂಬುವವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ. ಹಾವೇರಿ ತಾಲ್ಲೂಕಿನ ಪ್ರಭಾರ ಆಹಾರ ನಿರೀಕ್ಷಕ ವಿಜಯಕುಮಾರ, ಹಿರೇಲಿಂಗದಹಳ್ಳಿಯ ಬೀರಪ್ಪ ಕಾಶಂಬಿ ಅವರಿಗೆ ಪಡಿತರ ಚೀಟಿ ಮಾಡಿಕೊಟ್ಟಿದ್ದ. ಇದಕ್ಕಾಗಿ ಫೋನ್ ಪೇ ಮೂಲಕ ಲಂಚ ಪಡೆದಿದ್ದ. ಬೀರಪ್ಪ ಅವರ ಸಂಬಂಧಿ ನೀಡಿದ್ದ ದೂರು ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿ ವಿಜಯಕುಮಾರ ಅವರನ್ನು ಬಂಧಿಸಲಾಗಿದೆ ಎಂದು ಡಿವೈಎಸ್ಪಿ ಮಧುಸೂದನ್ ತಿಳಿಸಿದ್ದಾರೆ.

## ರೈತರಿಗೆ ಸೆಂಟ್ರಲ್ ಐಡಿ ಕಡ್ಡಾಯ

• ಉದಯವಾಹಿನಿ ಕೊಪ್ಪಳ

ಕೇಂದ್ರ, ಸರ್ಕಾರ ಅನುಷ್ಠಾನಗೊಳಿಸುತ್ತಿರುವ ಎಲ್ಲಾ ಯೋಜನೆಗಳಿಗೆ ರೈತರು ಕೇಂದ್ರ, ನೋಂದಾಯಿತ ರೈತ ಸಂಖ್ಯೆ ಮಾಡಿಸಿಕೊಳ್ಳುವುದು ಕಡ್ಡಾಯವಾಗಿರುತ್ತದೆ ಎಂದು ಕೊಪ್ಪಳ ಸಹಾಯಕ ಕೃಷಿ ನಿರ್ದೇಶಕರು ತಿಳಿಸಿದ್ದಾರೆ. ತಾಲ್ಲೂಕಿನಲ್ಲಿ 15,789 ರೈತರು ಕೇಂದ್ರ, ನೋಂದಾಯಿತ ರೈತ ಸಂಖ್ಯೆ ಮಾಡಿಸುವುದು ಬಾಕಿ ಇರುತ್ತದೆ. ಕೇಂದ್ರ, ಸರ್ಕಾರದ ಪಿಎಂ ಕಿಸಾನ್, ಬೆಳೆ ವಿಮೆ, ಬೆಳೆ ಪರಿಹಾರ, ಖರೀದಿ ಕೇಂದ್ರ, ಹಾಗೂ ಇತರೆ ಯೋಜನೆಗಳ ಸೌಲಭ್ಯ ಪಡೆಯಲು ರೈತರು ಸೆಂಟ್ರಲ್ ಫಾರ್ಮರ್ ಐಡಿ ಮಾಡಿಕೊಳ್ಳುವುದು ಅಗತ್ಯವಿದ್ದು, ಕೊಪ್ಪಳ ತಾಲ್ಲೂಕಿನ ರೈತರು ಫ್ರೂಟ್ಸ್ ತಂತ್ರಾಂಶದಲ್ಲಿ ಐಡಿಯನ್ನು ಮಾಡಿಸಬೇಕಿದೆ ಎಂದು ಹೇಳಿದ್ದಾರೆ.

ಐಡಿ ಮಾಡಿಸುವವರು ಮೊಬೈಲ್ ಸಂಖ್ಯೆ ನವೀಕರಣಗೊಳಿಸುವುದು, ಇ-ಕೆವೈಸಿ ಮಾಡಿಸುವುದು, ರೈತರಿಂದ ವಿದ್ಯುನ್ಮಾನ ಸಹಮತಿ ಪಡೆಯುವುದು ಹಾಗೂ ಭೂ ಘೋಷಣೆ ನಂಬರ್‌ಗಳನ್ನು ತಮ್ಮ ಎಫ್‌ಐಡಿಗೆ ಜೋಡಣೆ ಮಾಡುವುದುರಿಂದ ಎಲ್ಲಾ ರೈತರು ತಮ್ಮ ಎಲ್ಲಾ ಜಮೀನಿನ ವಿವರ ಹಾಗೂ ಆಧಾರ್ ಕಾರ್ಡ್ ದಾಖಲೆ ಜೊತೆ ಹತ್ತಿರದ ಕಂದಾಯ, ಕೃಷಿ, ತೋಟಗಾರಿಕಾ ಇಲಾಖೆಗಳಿಗೆ ಅಥವಾ ಗ್ರಾಮ-1 ಕೇಂದ್ರಗಳಿಗೆ ಸಂಪರ್ಕಿಸಿವಂತೆ ಪ್ರಕಟಣೆ ತಿಳಿಸಿದ್ದಾರೆ.

## ನೋವು ಉಂಡವರಿಂದ ಸತ್ಯ ತಿಳಿಯಲು ಸಾಧ್ಯ

• ಉದಯವಾಹಿನಿ ಹಾಸನ

ಎಲ್ಲಾ ವಿದ್ಯಾವಂತರು ವಿವೇಕಿಗಳಲ್ಲ. ಎಲ್ಲಾ ಜ್ಞಾನಿಗಳು ವಿವೇಕಿಗಳಲ್ಲ. ಬುದ್ಧಿವಂತರೆಲ್ಲ ಜ್ಞಾನಿಗಳಲ್ಲ. ಜ್ಞಾನಿಗಳೆಲ್ಲ ವಿವೇಕರಲ್ಲ. ಯಾರು ವಿವೇಕಿಯೋ ಅವನಿಗೆ ಮಾತ್ರ ಸತ್ಯಗಳು ಗೋಚರವಾಗುತ್ತದೆ. ಅಂತಹ ಪಾತ್ರಕ್ಕೆ ಹೆಸರಾದವರು ಕೈವಾರ ತಾತಯ್ಯನವರು ಎಂದು ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ಅಧ್ಯಕ್ಷ ಡಾ.ಎಚ್.ಎಲ್. ಮಲ್ಲೇಶ ಗೌಡ ತಿಳಿಸಿದರು. ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಹಾಸನಾಂಬ ಕಲಾಕ್ಷೇತ್ರದಲ್ಲಿ ಆಯೋಜಿಸಿದ್ದ ಯೋಗಿ ನಾರಾಯಣ ಜಯಂತ್ಯುತ್ಸವ ಉದ್ಘಾಟಿಸಿ ಅವರು ಮಾತನಾಡಿದರು. ಜಗತ್ತಿನ ಬಹುತೇಕ ಸಾಧಕರು ಮೂಲತಃ ನೋವು ಉಂಡವರು. ಅಂತಹ ತತ್ವಜ್ಞಾನಿಗಳಿಗೆ ಮಾತ್ರ ಜಗತ್ತಿನ ಸತ್ಯಗಳನ್ನು ತಿಳಿಯಲು ಸಾಧ್ಯ. ಸುಖದಲ್ಲಿ ಇದ್ದವರಿಗೆ ಜಗತ್ತಿನ ಸತ್ಯವನ್ನು ತಿಳಿಯಲು ಸಾಧ್ಯವಿಲ್ಲ ಎಂದರು. ಅನೇಕ ವಿದ್ವಾಂಸರು, ಸಾಹಿತಿಗಳು, ತತ್ವಜ್ಞಾನಿಗಳು, ವಚನಕಾರರು ಜನಿಸಿದ ಸ್ಥಳಕ್ಕೆ ವಿಶೇಷವಾದ ಮಹಿಮೆ ಪ್ರಾಪ್ತವಾಗುತ್ತದೆ. ಯೋಗಿ ನಾರಾಯಣರು ಜನಿಸಿದ ಕೈವಾರಕ್ಕೂ ವಿಶೇಷವಾದ ಹೊಳಪು ಪ್ರಾಪ್ತಿಯಾಗಿದೆ. ತಾವು ಜನಿಸಿದ ಸ್ಥಳಕ್ಕೆ ಬೆಳಕು ತಂದು ಕೊಡುವ ಕೆಲಸ ಮಹಾಪುರುಷರ ಸ್ವಭಾವ ಎಂದು ಹೇಳಿದರು. ಮನೆ ಗೆದ್ದು ಮಾರು ಗೆಲ್ಲು ಎನ್ನುವುದು ನಮ್ಮ ಪೂರ್ವಿಕರ ಒಂದು ಆಲೋಚನೆ. ಯಾರು ಮನೆಯಲ್ಲಿ ತನ್ನ ಜವಾಬ್ದಾರಿಯನ್ನು ಸರಳವಾಗಿ ನಿರ್ವಹಿಸುತ್ತಾನೆಯೋ, ಅವನು ಸಮಾಜದಲ್ಲಿ ಜವಾಬ್ದಾರಿಯನ್ನು ಸರಳವಾಗಿ ನಿರ್ವಹಿಸುತ್ತಾನೆ ಹೇಳಿದರು.

## ಪ್ರಥಮ ಚಿಕಿತ್ಸೆ ಕುರಿತು ಜಾಗೃತಿ ಅಗತ್ಯ: ಕಾಂತರಾಜ್

• ಉದಯವಾಹಿನಿ ಚಿತ್ರದುರ್ಗ

ಅಪಘಾತ, ವಿಪತ್ತುಗಳು ಸಂಭವಿಸಿದಾಗ ತುರ್ತು ಸಂದರ್ಭದಲ್ಲಿ ಗಾಯಾಳುಗಳಿಗೆ ನೀಡುವ ಪ್ರಥಮ ಚಿಕಿತ್ಸೆಯು ಜೀವ ಉಳಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂದು ಉಪವಿಭಾಗಾಧಿಕಾರಿ ಡಾ. ಕಾಂತರಾಜ್ ತಿಳಿಸಿದರು.

ನಗರದ ಸರ್ಕಾರಿ ಕಲಾ ಕಾಲೇಜಿನಲ್ಲಿ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಜಿಲ್ಲಾ ಶಾಖೆಯ ವತಿಯಿಂದ ಸೋಮವಾರ ರೆಡ್ ಕ್ರಾಸ್ ಸ್ವಯಂಸೇವಕರು ಹಾಗೂ ಕಾರ್ಯಕ್ರಮ ಅಧಿಕಾರಿಗಳಿಗಾಗಿ ಆಯೋಜಿಸಿದ್ದ ಪ್ರಥಮ ಚಿಕಿತ್ಸೆ ಮತ್ತು ವಿಪತ್ತು ನಿರ್ವಹಣೆ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು. ಪ್ರಕೃತಿ ವಿಕೋಪಗಳು ಅಥವಾ ಆಕಸ್ಮಿಕ ಅವಘಡಗಳು ಸಂಭವಿಸಿದಾಗ ಗಾಬರಿಯಾಗದೆ, ಸಮಯಪ್ರಜ್ಞೆಯಿಂದ ಕಾರ್ಯನಿರ್ವಹಿಸುವುದು ಮುಖ್ಯ. ಈ ನಿಟ್ಟಿನಲ್ಲಿ ಸ್ವಯಂಸೇವಕರು ವೈಜ್ಞಾನಿಕ ತರಬೇತಿ ಪಡೆದಿರಬೇಕು ಎಂದು ಅವರು ಕಿವಿಮಾತು ಹೇಳಿದರು.

ಸಂಪನ್ಮೂಲ ವ್ಯಕ್ತಿಗಳಾಗಿ ಡಾ. ಸಂತೋಷ್ ಉಜ್ಜನಪ್ಪ ಹಾಗೂ ವಿಪತ್ತು ನಿರ್ವಹಣೆ ತರಬೇತುದಾರ ಅಜ್ಮಲ್ ಶಕೀಬ್ ಅವರು ಪ್ರಥಮ ಚಿಕಿತ್ಸೆಯ ವಿವಿಧ ಹಂತಗಳ ಕುರಿತು ಪ್ರಾಯೋಗಿಕ ಮಾಹಿತಿ ನೀಡಿದರು. ಸರ್ಕಾರಿ ಕಲಾ ಕಾಲೇಜಿನ ಪ್ರಾಂಶುಪಾಲ ಡಾ. ಕರಿಯಪ್ಪ ಮಾಳಿಗೆ, ರೆಡ್ ಕ್ರಾಸ್ ಸಂಸ್ಥೆಯ ಜಿಲ್ಲಾ ಉಪ ಸಭಾಪತಿ ಅರುಣ್ ಕುಮಾರ್, ಕಾರ್ಯದರ್ಶಿ ಮಜಹರ್ ಉಲ್ಲಾ, ಮುಖಂಡರಾದ ಗುರುಮೂರ್ತಿ ಹಾಗೂ ಶ್ರೀನಿವಾಸ್ ಉಪಸ್ಥಿತರಿದ್ದರು.


ಉದಯವಾಹಿನಿ ಚಿತ್ರ

## ಮೃತ ಫಲಾನುಭವಿಗಳ ಖಾತೆಗೆ ರೂ.79 ಕೋಟಿ ಜಮೆ: ಎಚ್.ಎಂ. ರೇವಣ್ಣ

• ಉದಯವಾಹಿನಿ ದಾವಣಗೆರೆ



ರಾಜ್ಯದಲ್ಲಿ ಗೃಹಲಕ್ಷ್ಮಿ ಯೋಜನೆಯಡಿ ಮೃತ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಜಮೆ ಆಗಿರುವ ರೂ.79.75 ಕೋಟಿ ಹಣವನ್ನು ಹಿಂಪಡೆಯಬೇಕು. ಮರಣ ಪ್ರಮಾಣ ಪತ್ರ, ಪರಿಶೀಲಿಸಿ ಅಧಿಕಾರಿಗಳು ಕ್ರಮಕೈಗೊಳ್ಳಬೇಕು ಎಂದು ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ. ರೇವಣ್ಣ ಸೂಚನೆ ನೀಡಿದರು. ಇಲ್ಲಿನ ಗುಂಡಿಮಹಾದೇವಪ್ಪ ಕಲ್ಯಾಣ ಮಂಟಪದಲ್ಲಿ ಪಂಚ ಗ್ಯಾರಂಟಿ ಯೋಜನೆಗಳ ಕುರಿತು ಏರ್ಪಡಿಸಿದ್ದ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು. ರಾಜ್ಯದಲ್ಲಿ ಗ್ಯಾರಂಟಿ ಯೋಜನೆ ಅನುಷ್ಠಾನಗೊಂಡ ಬಳಿಕ 1,44,056 ಫಲಾನುಭವಿಗಳು ಮೃತಪಟ್ಟಿದ್ದಾರೆ. ಇವರಲ್ಲಿ 68,776 ಫಲಾನುಭವಿಗಳ ಬ್ಯಾಂಕ್ ಖಾತೆಗೆ ಗೃಹಲಕ್ಷ್ಮಿ ಹಣ ಪಾವತಿಯಾಗಿದೆ. ಇಂತಹ ಲೋಪ ಉಂಟಾಗದಂತೆ ಅಧಿಕಾರಿಗಳು ಎಚ್ಚರವಹಿಸಬೇಕು ಎಂದರು.

ಕಾಂಗ್ರೆಸ್ ಕಾರ್ಯಕರ್ತರು ಕೂಡ ಈ ಬಗ್ಗೆ ಎಚ್ಚರಿಕೆಯಿಂದ ಇರಬೇಕು. ಮೃತರ ಖಾತೆಗಳಿಗೆ ಯೋಜನೆಯ ಹಣ ಜಮೆ ಆಗದಂತೆ ತಡೆಯಬೇಕು. ಸರಕು ಮತ್ತು ಸೇವಾ ತೆರಿಗೆ ಪಾವತಿಸುವ ಮಹಿಳೆಯರಿಗೆ ಗೃಹಲಕ್ಷ್ಮಿ ಹಣ ಪಾವತಿ ಆಗಿರಲಿಲ್ಲ. ಈ ಸಮಸ್ಯೆಯನ್ನು ಸರಿಪಡಿಸಲಾಗಿದೆ ಎಂದು ಹೇಳಿದರು.

## ಕಜ್ಜರಿ ಪ್ಲಾಟ್‌ನಲ್ಲಿ ನೀರಿಗೆ ಹಾಹಾಕಾರ

• ಉದಯವಾಹಿನಿ ಹಾವೇರಿ

ಜಿಲ್ಲೆಯಲ್ಲಿ ಬೇಸಿಗೆಯ ಬಿಸಿ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಹಲವು ಜನವಸತಿ ಪ್ರದೇಶಗಳಲ್ಲಿ ನೀರಿಗೆ ಹಾಹಾಕಾರ ಶುರುವಾಗಿದೆ. ರಾಣೆಬೆನ್ನೂರು ತಾಲ್ಲೂಕಿನ ಕಜ್ಜರಿ ಪ್ಲಾಟ್‌ನ ನಿವಾಸಿಗಳು, ಹಲವು ದಿನಗಳಿಂದ ನೀರಿಗಾಗಿ ಪರದಾಡುವ ಸ್ಥಿತಿ ನಿರ್ಮಾಣವಾಗಿದೆ.

ಕಜ್ಜರಿ ಪ್ಲಾಟ್‌ನಲ್ಲಿ ಸುಮಾರು 250 ಮನೆಗಳಿವೆ. ಈ ಪ್ರದೇಶದ ಮನೆಗಳಿಗೆ ತಿಂಗಳಿಗೊಮ್ಮೆ ನೀರು ಬಿಡಲಾಗುತ್ತಿದೆ. ಸ್ಥಳದಲ್ಲಿರುವ ನೀರಿನ ಜಲಾಗಾರ ಸಹ ಹಾಳಾಗಿದ್ದು, ನೀರು ಸಂಗ್ರಹವೇ ಇಲ್ಲದಂತಾಗಿದೆ. ಕೆಲದಿನಗಳಿಂದ ಮನೆಗಳಿಗೆ ನೀರು ಬಂದಿಲ್ಲ. ಪ್ಲಾಟ್‌ನಲ್ಲಿರುವ ಕೊಳವೆಬಾವಿಗಳೂ ಹಾಳಾಗಿದ್ದು, ನೀರಿಗೆ ಹಾಹಾಕಾರ ಸೃಷ್ಟಿಯಾಗಿದೆ. ಮನೆಯ ಜನರು ನೀರು ತರಲು ಕೊಡಗಳನ್ನು ಹಿಡಿದು ಜಮೀನಿನಲ್ಲಿರುವ ಕೊಳವೆಬಾವಿಗಳಿಗೆ ಹೋಗುತ್ತಿದ್ದಾರೆ. ಮನೆಯ ಮಹಿಳೆಯರು, ಕೊಡಗಳನ್ನು ಹಿಡಿದು ಜಮೀನಿಗೆ ತೆರಳುತ್ತಿರುವ ದೃಶ್ಯಗಳು ಕಂಡುಬರುತ್ತಿವೆ. ಪ್ಲಾಟ್‌ನಲ್ಲಿ ಉಂಟಾಗಿರುವ ನೀರಿನ ಸಮಸ್ಯೆಗೆ ಪರಿಹಾರ ನೀಡುವಂತೆ ಗ್ರಾಮ ಪಂಚಾಯಿತಿಗೆ ನಿವಾಸಿಗಳು ಹಲವು ಬಾರಿ ಮನವಿ ಸಲ್ಲಿಸಿದ್ದಾರೆ. ಆದರೆ, ಇದುವರೆಗೂ ನೀರಿನ ಸಮಸ್ಯೆಗೆ ಪರಿಹಾರ ಸಿಕ್ಕಿಲ್ಲ. ಇದರಿಂದಾಗಿ ನಿವಾಸಿಗಳು, ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳ ವಿರುದ್ಧ ಹಿಡಿಶಾಪ ಹಾಕುತ್ತಿದ್ದಾರೆ. ಕಜ್ಜರಿ ಪ್ಲಾಟ್‌ನಲ್ಲಿ ಹಲವು ವರ್ಷಗಳಿಂದ ವಾಸವಾಗಿದ್ದೇವೆ. ಇಲ್ಲಿಯೇ ನೀರಿನ ದೊಡ್ಡ ಟ್ಯಾಂಕ್ ಇದೆ. ತುಂಗಭದ್ರಾ ನದಿಯಿಂದ ಅದಕ್ಕೆ ನೀರು ಹರಿಸಲಾಗುತ್ತದೆ. ಅದೇ ನೀರನ್ನು ತಿಂಗಳಿಗೊಮ್ಮೆ ಮನೆಗಳಿಗೆ ಬಿಡುತ್ತಾರೆ ಎಂದು ಗ್ರಾಮಸ್ಥರು ಅಳಲು ತೋಡಿಕೊಂಡರು.


ಉದಯವಾಹಿನಿ ಚಿತ್ರ

## ನನೆಗುದಿಗೆ ಬಿದ್ದ ಕುದುರೆಮುಖ ಹೆದ್ದಾರಿ ಕಾಮಗಾರಿ: ಪ್ರತಿಭಟನೆಗೆ ನಿರ್ಧಾರ

• ಉದಯವಾಹಿನಿ ಕಳಸ


ಕಳಸ-ಕುದುರೆಮುಖ-ಎಸ್.ಕೆ.ಬಾರ್ಡರ್ ರಾಜ್ಯ ಹೆದ್ದಾರಿಯು ಜಿಲ್ಲೆಯ ಅತ್ಯಂತ ಹದಗೆಟ್ಟ ರಸ್ತೆ ಎಂದೇ ಹೆಸರು ಪಡೆದಿದ್ದು, ಈ ರಸ್ತೆಯ ಕಾಮಗಾರಿ ನನೆಗುದಿಗೆ ಬಿದ್ದಿರುವುದನ್ನು ಖಂಡಿಸಿ ಸದ್ಯದಲ್ಲೇ ಪ್ರತಿಭಟನೆ ನಡೆಸಲಾಗುತ್ತದೆ ಎಂದು ಸಾಮಾಜಿಕ ಕಾರ್ಯಕರ್ತ ರವಿ ರೈ ತಿಳಿಸಿದ್ದಾರೆ.

ಕಳೆದ ಮೂರು ವರ್ಷಗಳಿಂದ ಸಾರ್ವಜನಿಕರು ನಡೆಸಿದ ಹೋರಾಟದ ಫಲವಾಗಿ ಈ ರಸ್ತೆ ಮರುಡಾಂಬರೀಕರಣಕ್ಕೆ ರೂ.13 ಕೋಟಿ ಬಿಡುಗಡೆ ಆಗಿದೆ. ಕಳೆದ ವರ್ಷವೇ ಆರಂಭವಾಗಿ ಈ ವೇಳೆಗೆ ಕಾಮಗಾರಿ ಮುಗಿಯಬೇಕಿತ್ತು. ಆದರೆ ಈವರೆಗೂ ರಸ್ತೆಗೆ ಡಾಂಬರೀಕರಣ ಮಾಡುವ ಕೆಲಸ ನಡೆಯುತ್ತಿಲ್ಲ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

> **ಹದಗೆಟ್ಟ ರಸ್ತೆಯಲ್ಲಿ ಓಡಾಡುವುದೇ ಕಷ್ಟವಾಗಿದೆ**

ಕುದುರೆಮುಖ ರಾಷ್ಟ್ರೀಯ ಉದ್ಯಾನದಲ್ಲಿ ಸದ್ಯದಲ್ಲೇ ಬೇಸಿಗೆ ಮಳೆ ಆರಂಭವಾಗುತ್ತದೆ. ಆನಂತರ ಮಾಡುವ ಡಾಂಬರೀಕರಣದ ಕಾಮಗಾರಿ ಗುಣಮಟ್ಟ ಕಳೆದುಕೊಳ್ಳುತ್ತದೆ. ಈಗಿನ ಸೂಕ್ತ ಹವಾಮಾನದಲ್ಲಿ ಡಾಂಬರೀಕರಣ ನಡೆಸುವ ಬಗ್ಗೆ ಲೋಕೋಪಯೋಗಿ ಇಲಾಖೆ ಯಾಕೆ ನಿರ್ಲಕ್ಷ್ಯ ವಹಿಸುತ್ತಿದೆ ಎಂದು ಅವರು ಪ್ರಶ್ನಿಸಿದ್ದಾರೆ.

ಕುದುರೆಮುಖ-ಎಸ್.ಕೆ.ಬಾರ್ಡರ್ ಹದಗೆಟ್ಟ ರಸ್ತೆಯಲ್ಲಿ ಓಡಾಡುವುದೇ ಕಷ್ಟವಾಗಿದೆ. ಕಳಸದಿಂದ ಮಂಗಳೂರಿಗೆ ರೋಗಿಗಳನ್ನು ಕರೆದೊಯ್ಯುವುದು ಯಾತನಾಮಯ ಆಗಿದೆ. ಕರಾವಳಿಯಿಂದ ಮಲೆನಾಡಿಗೆ ಪ್ರವಾಸಿಗರು ಬರುವುದನ್ನೇ ನಿಲ್ಲಿಸಿದ್ದಾರೆ. ಮನೆ ನಿರ್ಮಾಣದ ವಸ್ತುಗಳನ್ನು ಕಳಸಕ್ಕೆ ತರುವುದು ದುಬಾರಿ ಆಗುತ್ತಿದೆ. ಈ ಎಲ್ಲಾ ಅಂಶಗಳನ್ನು ಮರೆಮಾಚಿ ಗುತ್ತಿಗೆದಾರರ ಹಿತಾಸಕ್ತಿಯನ್ನು ಅಧಿಕಾರಿಗಳು ಕಾಯುತ್ತಿದ್ದಾರೆ. ಈ ವಾರದ ಒಳಗೆ ಡಾಂಬರೀಕರಣ ಶುರು ಆಗದಿದ್ದರೆ ಬೃಹತ್ ಪ್ರತಿಭಟನೆ ನಡೆಸಲಾಗುತ್ತದೆ ಎಂದೂ ರವಿ ರೈ ಎಚ್ಚರಿಸಿದ್ದಾರೆ. ಕರಾವಳಿಯ ಕಾಲೇಜುಗಳು, ಆಸ್ಪತ್ರೆಗಳಿಗೆ ಅನಿವಾರ್ಯವಾಗಿ ಹೋಗಬೇಕಾದ ಜನರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಕೂಡಲೇ ಕಾಮಗಾರಿ ನಡೆಸಿ ಈ ರಸ್ತೆ ಬಳಕೆದಾರರ ಸಂಕಟ ನಿವಾರಿಸಬೇಕು ಎಂದು ನೆಲ್ಲಿಬೀಡಿನ ತೇಜಸ್ ಒತ್ತಾಯಿಸಿದರು.


ಉದಯವಾಹಿನಿ ಚಿತ್ರ

ಮಾರ್ಚ್ 24ರ ಒಳಗೆ ಈ ರಸ್ತೆ ಕಾಮಗಾರಿ ಮುಗಿಸಬೇಕಿದೆ. ಗುತ್ತಿಗೆದಾರ ಜಲ್ಲಿ, ಮರಳು ಸಂಗ್ರಹ ಮಾಡಿದ್ದಾರೆ. ಆದರೆ ಡಾಂಬರು ತರಲು ಆರ್ಥಿಕ ತೊಂದರೆ ಇದೆ ಎಂಬ ನೆಪ ಹೇಳುತ್ತಿದ್ದಾರೆ. ನಿಗದಿತ ದಿನದ ಒಳಗೆ ಕಾಮಗಾರಿ ಮುಗಿಸಲು ಸೂಚನೆ ನೀಡಿದ್ದೇವೆ ಎಂದು ಲೋಕೋಪಯೋಗಿ ಇಲಾಖೆ ಕಿರಿಯ ಎಂಜಿನಿಯರ್ ಚೆನ್ನಯ್ಯ ತಿಳಿಸಿದರು.

# ಉತ್ತರ ಕನ್ನಡದ 290 ಹಳ್ಳಿಗಳಿಗೆ ಬೇಸಿಗೆಯಲ್ಲಿ ಜಲಕ್ಷಾಮದ ಭೀತಿ

### ಕೆಲವೆಡೆ ನೀರಿನ ಕೊರತೆಯಿಂದ ಟ್ಯಾಂಕರ್ ನೀರು ಪೂರೈಕೆಯಾಗಿದ್ದರೆ, ಇನ್ನು ಕೆಲವೆಡೆ ಜೆಜೆಎಂ ಪೈಪ್‌ಲೈನ್ ಸಮಸ್ಯೆಯಿಂದ ಟ್ಯಾಂಕರ್‌ನಲ್ಲಿ ನೀರು ಕೊಡಲಾಗಿದೆ

• ಉದಯವಾಹಿನಿ ಕಾರವಾರ

ಜಲಜೀವನ್ ಮಿಷನ್ (ಜೆಜೆಎಂ) ಅವ್ಯವಸ್ಥೆ ಮತ್ತು ನೀರಿನ ಮೂಲಗಳ ಕೊರತೆಯಿಂದಾಗಿ ಜಿಲ್ಲೆಯಲ್ಲಿ ಬೇಸಿಗೆ ಆರಂಭದಲ್ಲೇ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಶುರುವಾಗಿದೆ. ಈ ವರ್ಷ ಜಿಲ್ಲೆಯಲ್ಲಿ ಸುಮಾರು 290 ಗ್ರಾಮಗಳಿಗೆ ಕುಡಿಯುವ ನೀರಿನ ಸಮಸ್ಯೆ ಆಗಬಹುದು ಎಂದು ಅಂದಾಜಿಸಲಾಗಿದೆ.

ಜಿಲ್ಲೆಯ ಹಳಿಯಾಳ, ಮುಂಡಗೋಡ ಹೀಗೆ ಅರೆ ಬಯಲು ಸೀಮೆ ಪ್ರದೇಶದಲ್ಲಿ ಈಗಾಗಲೇ ಕೆಲವೆಡೆ ಗ್ರಾಮ ಪಂಚಾಯಿತಿಗಳಿಂದ ಟ್ಯಾಂಕರ್ ಮೂಲಕ ಕುಡಿಯುವ ನೀರಿನ ಪೂರೈಕೆ ಮಾಡಲಾಗಿದೆ.

ಕೆಲವೆಡೆ ನೀರಿನ ಕೊರತೆಯಿಂದ ಟ್ಯಾಂಕರ್ ನೀರು ಪೂರೈಕೆಯಾಗಿದ್ದರೆ, ಇನ್ನು ಕೆಲವೆಡೆ ಜೆಜೆಎಂ ಪೈಪ್‌ಲೈನ್ ಸಮಸ್ಯೆಯಿಂದ ಟ್ಯಾಂಕರ್‌ನಲ್ಲಿ ನೀರು ಕೊಡಲಾಗಿದೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಕಡೆ ನೀರಿನ ಅಭಾವ ಎದುರಾಗುವ ಸಾಧ್ಯತೆ ಇದೆ ಎಂದು ಅಂದಾಜಿಸಲಾಗಿದೆ.

> **ಉಪ್ಪು ನೀರಿನ ಸಮಸ್ಯೆಯಿಂದ ಹೆಚ್ಚಿದ ಆತಂಕ**

- ಉತ್ತರ ಕನ್ನಡದಲ್ಲಿ ಬೇಸಿಗೆ ಆರಂಭದಲ್ಲೇ ಕುಡಿಯುವ ನೀರಿನ ಅಭಾವದ ಆತಂಕ
- ಜಿಲ್ಲೆಯಲ್ಲಿನ 290 ಗ್ರಾಮಗಳು ಕುಡಿಯುವ ನೀರಿನ ಸಮಸ್ಯೆ ಎದುರಿಸುವ ಅಂದಾಜು
- ಕಾರ್ಲೆಂಡ್ ಸಮಸ್ಯೆಯಿಂದ ಉಪ್ಪು ನೀರು ಬಾವಿಗೆ ನುಗ್ಗಿ ಕುಡಿಯಲು ಆಗದ ಪರಿಸ್ಥಿತಿ

**ಬೇಸಿಗೆಯಲ್ಲಿ 290 ಗ್ರಾಮಗಳು ನೀರಿನ ಬವಣೆಗೆ ಸಿಲುಕುವ ಆತಂಕ:** ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಸರಾಸರಿ 100-120 ಗ್ರಾಮಗಳಲ್ಲಿ ಟ್ಯಾಂಕರ್ ಮೂಲಕ ಕುಡಿಯುವ ನೀರು ಪೂರೈಸುವ ಪರಿಸ್ಥಿತಿ ಎದುರಾಗಿವೆ. ಈ ವರ್ಷ ಕೂಡ ಅಷ್ಟೇ ಗ್ರಾಮಗಳಿಗೆ ಕುಡಿಯುವ ನೀರಿನ ಪೂರೈಕೆ ಮಾಡಬೇಕಾದ ಸಂದರ್ಭ ಎದುರಾಗಬಹುದು. ಬೇಸಿಗೆ ಹೆಚ್ಚು ವ್ಯಾಪಿಸಿದರೆ ಮಾತ್ರ ಸುಮಾರು 290 ಗ್ರಾಮಗಳು ನೀರಿನ ಬವಣೆಗೆ ಸಿಲುಕಬಹುದು ಎಂದು ಜಿಲ್ಲಾ ಪಂಚಾಯಿತಿ ಅಂದಾಜಿಸಿದೆ. ಅದಕ್ಕಾಗಿ ನೀರಿನ ಪರ್ಯಾಯ ಮೂಲಗಳನ್ನು ಗುರುತಿಸಲಾಗಿವೆ. ಜಲಜೀವನ್ ಮಿಷನ್ ಪ್ರಕಾರ ಜಿಲ್ಲೆಯಲ್ಲಿ ಶೇ.75.89 ರಷ್ಟು ಕಾಮಗಾರಿ ಪೂರ್ಣಗೊಂಡಿವೆ. 663 ಕಾಮಗಾರಿಗಳನ್ನು ಗ್ರಾಮ ಪಂಚಾಯಿತಿಗಳಿಗೆ ಹಸ್ತಾಂತರಿಸಲಾಗಿದೆ ಎಂದು ವರದಿ ಮಾಡಲಾಗಿದೆ. ಈ ಬಾರಿ ಜನವರಿಯಿಂದಲೇ ಮನೆಗಳಿಗೆ ನಲ್ಲಿನೀರು ಪೂರೈಕೆ ಆರಂಭಿಸಲಾಗಿದೆ.

ಆದರೆ, ಜಲಜೀವನ್ ಮಿಷನ್ ನಳಗಳಲ್ಲಿ ನೀರು ಸರಿಯಾಗಿ ಪೂರೈಕೆ ಆಗುತ್ತಿಲ್ಲ. ಬಹಳ ಕಡಿಮೆ ನೀರು ಸಿಗುತ್ತಿವೆ. ಅದು ದಿನ ಬಳಕೆಗೆ ಸಾಲುತ್ತಿಲ್ಲ ಎಂಬ ದೂರು ಎಲ್ಲೆಡೆ ಸಾಮಾನ್ಯವಾಗಿದೆ.


ಉದಯವಾಹಿನಿ ಚಿತ್ರ

### ಉಪ್ಪು ನೀರು ಗೋಳು

ಕರಾವಳಿ ಭಾಗದಲ್ಲಿ ಕಾರ್ಲೆಂಡ್ ಸಮಸ್ಯೆಯಿಂದಾಗಿ ಉಪ್ಪು ನೀರು ಹೊಲಗಳಿಗೆ ನುಗ್ಗಿ ಸಮೀಪದ ಬಾವಿಗಳಲ್ಲಿ ನೀರು ಸವಳಾಗುತ್ತಿವೆ. ಅವು ಕುಡಿಯಲು ಯೋಗ್ಯವಾಗುತ್ತಿಲ್ಲ ಎನ್ನುವ ದೂರು ಕಾರವಾರದಿಂದ ಭಟ್ಕಳ ತಾಲ್ಲೂಕಿನವರೆಗೆ ಸಾಮಾನ್ಯವಾಗಿದೆ. ಕಾರವಾರದ ಹಣಗೋಣ ಗ್ರಾಮದ ಅಂಬಿಗವಾಡ, ಬಾಬುನಾಯ್ಕ ವಾಡಾ, ಪಾಟ್ಲವಾಡ ವ್ಯಾಪ್ತಿಯ ಕಾರ್ಲೆಂಡ್ ನಿರ್ಮಿಸಿದ್ದರೂ, ಸುತ್ತಲಿನ ಹೊಲ, ಗದ್ದೆಗಳಿಗೆ ಉಪ್ಪು ನೀರು ನುಗ್ಗಿ ಬಾವಿಗಳ ನೀರು ಉಪ್ಪಾಗುತ್ತಿವೆ ಎಂದು ಗ್ರಾಮಸ್ಥರು ಜಿಲ್ಲಾ ಪಂಚಾಯಿತಿಗೆ ದೂರು ಸಲ್ಲಿಸುತ್ತಲೇ ಇದ್ದಾರೆ. ಕಾಳಿ ನದಿಯಲ್ಲಿ ಉಪ್ಪು ನೀರು ಬಹಳ ದೂರದವರೆಗೆ ಬರುತ್ತಿದೆ. ಅದರಿಂದ ಕುಡಿಯುವ ನೀರಿನ ಸಮಸ್ಯೆ ಆಗುತ್ತಿದೆ ಎಂದು ಶಾಸಕ ಸತೀಶ ಸೈಲ್ ಕೂಡ ಆರೋಪಿಸಿದ್ದಾರೆ.

> ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಸರಾಸರಿ 100-120 ಗ್ರಾಮಗಳಲ್ಲಿ ಬೇಸಿಗೆಯಲ್ಲಿ ಕುಡಿಯುವ ನೀರಿ ಸಮಸ್ಯೆ ಕಂಡು ಬರುತ್ತಿದೆ. ಬೇಸಿಗೆ ಹೆಚ್ಚಾದರೆ 290 ಗ್ರಾಮಗಳಲ್ಲಿ ಸಮಸ್ಯೆ ಆಗಬಹುದು ಎಂದು ಅಂದಾಜಿಸಲಾಗಿದೆ. ಹಳಿಯಾಳ, ಮುಂಡಗೋಡ ಭಾಗದಲ್ಲಿ ಈಗಾಗಲೇ ನೀರು ಕೊಟ್ಟಿದ್ದೇವೆ. ಬೇಸಿಗೆ ಎದುರಿಸಲು ಎಲ್ಲಾ ಸಿದ್ಧತೆ ಮಾಡಿಕೊಳ್ಳಲಾಗಿದೆ.
> -ದಿಲೀಷ ಶಶಿ, ಜಿಲ್ಲಾ ಪಂಚಾಯಿತಿ ಸಿಇಒ.



# ಒಂದೇ ತಿಂಗಳಲ್ಲಿ ಎರಡು ಬಿಗ್ ಬಜೆಟ್ ಸಿನಿಮಾ ರಿಲೀಸ್

'ಟಾಕ್ಸಿಕ್' ಸಿನಿಮಾ ಮಾರ್ಚ್ 19ಕ್ಕೆ ತೆರೆಗೆ ಬರೋದು ಪಕ್ಕಾ ಎಂಬ ರೀತಿ ಬಿಂಬಿಸಲಾಗಿತ್ತು. ಆದರೆ, ಏಕಾಏಕಿ ಸಿನಿಮಾ ರಿಲೀಸ್ ದಿನಾಂಕವನ್ನು ತಂಡ ಮುಂದಕ್ಕೆ ಹಾಕಿದೆ. ಜೂನ್ 4ರಂದು ಸಿನಿಮಾ ರಿಲೀಸ್ ಮಾಡಲಿದ್ದೇವೆ ಎಂದು ನಿರ್ಮಾಣ ಸಂಸ್ಥೆ ಹೇಳಿದೆ.

ಹಾಗಾದರೆ ಬಾಕ್ಸ್ ಆಫೀಸ್‌ನಲ್ಲಿ ಕೆವಿಎನ್ v/s ಕೆವಿಎನ್ ಎಂಬ ಪರಿಸ್ಥಿತಿ ನಿರ್ಮಾಣ ಆಗಲಿದೆಯೇ ಎಂಬ ಪ್ರಶ್ನೆ ಮೂಡುವಂತೆ ಆಗಿದೆ. ಇದಕ್ಕೆ ಕಾರಣವೂ ಇದೆ. ಕೆವಿಎನ್ ಸಂಸ್ಥೆ ಒಮ್ಮೆಲೇ ಮೂರು ದೊಡ್ಡ ಬಜೆಟ್ ಚಿತ್ರಗಳನ್ನು ಕೈಗೆತ್ತಿಕೊಂಡಿತು. 'ಜನ ನಾಯಗನ್' ಜನವರಿ 9ಕ್ಕೆ, 'ಟಾಕ್ಸಿಕ್' ಮಾರ್ಚ್ 19ಕ್ಕೆ ಹಾಗೂ 'ಕೆಡಿ' ಚಿತ್ರವನ್ನು ಏಪ್ರಿಲ್ 30ಕ್ಕೆ ರಿಲೀಸ್ ಮಾಡುವ ಪ್ಲ್ಯಾನ್ ತಂಡಕ್ಕೆ ಇತ್ತು. ಎಲ್ಲಾ ರಿಲೀಸ್ ಮಧ್ಯೆ 50+ ದಿನಗಳ ಅಂತರ ಇತ್ತು.

ಆದರೆ, ಸದ್ಯದ ಪರಿಸ್ಥಿತಿಯಲ್ಲಿ 'ಜನ ನಾಯಗನ್' ಹಾಗೂ 'ಟಾಕ್ಸಿಕ್' ರಿಲೀಸ್ ಮುಂದಕ್ಕೆ ಹೋಗಿದೆ. 'ಜನ ನಾಯಗನ್' ಸೆನ್ಸಾರ್ ಪ್ರಕ್ರಿಯೆ ಆಗಿಲ್ಲ. ಈ ಕಾರಣದಿಂದ ಈ ಸಿನಿಮಾ ರಿಲೀಸ್ ಬಗ್ಗೆ ಸ್ಪಷ್ಟನೆ ಸಿಕ್ಕಿಲ್ಲ. 'ಟಾಕ್ಸಿಕ್' ಜೂನ್ 4ಕ್ಕೆ ಬರೋದಾಗಿ ಘೋಷಣೆ ಆಗಿದೆ. ಈ ಮೊದಲು ಹರಿದಾಡಿದ ಮಾಹಿತಿ ಪ್ರಕಾರ, 'ಜನ ನಾಯಗನ್' ಸಿನಿಮಾ ಜೂನ್ ಅಲ್ಲಿ ತೆರೆಗೆ ಬರಲಿದೆ ಎನ್ನಲಾಗಿತ್ತು.

ಜೂನ್ 22 ವಿಜಯ್ ಜನ್ಮದಿನ. ಈ ವಿಶೇಷ ದಿನದ ಸಮಯದಲ್ಲಿ 'ಜನ ನಾಯಗನ್' ತರುವ ಆಲೋಚನೆ ತಂಡಕ್ಕೆ ಇದೆ. ಈಗ 'ಟಾಕ್ಸಿಕ್' ಕೂಡ ಜೂನ್ ಅಲ್ಲೇ ಬರುತ್ತಿದೆ. ಹೀಗಾಗಿ, ಒಂದೇ ನಿರ್ಮಾಣ ಸಂಸ್ಥೆಯ ಎರಡು ಚಿತ್ರಗಳು ಒಂದೇ ತಿಂಗಳಲ್ಲಿ ಬಿಡುಗಡೆ ಆಗಲಿದೆಯೇ ಎಂಬ ಪ್ರಶ್ನೆ ಅಭಿಮಾನಿಗಳದ್ದು. ಹಾಗಾದಲ್ಲಿ, ಕೆವಿಎನ್ v/s ಕೆವಿಎನ್ ಎಂಬತಹ ಸ್ಥಿತಿ ನಿರ್ಮಾಣ ಆಗುತ್ತದೆ.ಯಾವುದೇ ಪಳಗಿದ ನಿರ್ಮಾಪಕರು ತಮ್ಮದೇ ನಿರ್ಮಾಣ ಸಂಸ್ಥೆಯ ಎರಡು ಸಿನಿಮಾಗಳನ್ನು ಒಂದೇ ತಿಂಗಳಲ್ಲಿ ರಿಲೀಸ್ ಮಾಡುವ ಸಾಹಸಕ್ಕೆ ಹೋಗೋದಿಲ್ಲ. ಅದರಲ್ಲೂ ಬಿಗ್ ಬಜೆಟ್ ಸಿನಿಮಾ ಎಂದಾಗ ಆ ರೀತಿಯ ಸಾಹಸವನ್ನು ಮಾಡೋದಿಲ್ಲ. ಹೀಗಾಗಿ, ಕೆವಿಎನ್ ಕೂಡ ಈ ಬಗ್ಗೆ ಬೇರೆಯದೇ ರೀತಿಯ ಸ್ಟ್ರಟಜಿ ಮಾಡಬಹುದು ಎಂದು ಹೇಳಲಾಗುತ್ತಾ ಇದೆ.



# ಟ್ರೋಲ್ ಮಾಡಿದವರಿಗೆ ಎಚ್ಚರಿಕೆ


ಅರ್ಜುನ್ ಕಪೂರ್ ಅವರ ವೃತ್ತಿಜೀವನ ಮತ್ತು ವೈಯಕ್ತಿಕ ಜೀವನದ ವೈಫಲ್ಯದಿಂದಾಗಿ ಆಗಾಗ್ಗೆ ಟ್ರೋಲ್ ಆಗುತ್ತಾರೆ. ಸಾಮಾಜಿಕ ಮಾಧ್ಯಮದಲ್ಲಿ ಅವರ ಹೆಸರಿನಲ್ಲಿ ಹಲವಾರು ಮೀಮ್ಸ್ ಮತ್ತು ಮೀಮ್ಸ್ ಪುಟಗಳು ಕಂಡುಬರುತ್ತವೆ. ಈಗ ಅರ್ಜುನ್ ಕಪೂರ್ ಅವರ ಮಲಸಹೋದರಿ ಮತ್ತು ನಟಿ ಜಾನ್ವಿ ಕಪೂರ್ ಇಂತಹ ಟ್ರೋಲಿಂಗ್‌ಗೆ ಪ್ರತಿಕ್ರಿಯಿಸಿದ್ದಾರೆ.

ಯಾವುದೇ ಕಾರಣವಿಲ್ಲದೆ ನಿಮ್ಮನ್ನು ಬಲಿಪಶುವನ್ನಾಗಿ ಮಾಡಲಾಗುತ್ತಿದೆ ಎಂದು ಅವರು ಹೇಳಿದ್ದಾರೆ. ಸಾಮಾಜಿಕ ಮಾಧ್ಯಮ ಸಂಸ್ಕೃತಿ ನನಗೆ ಹೆಚ್ಚು ಅರ್ಥವಾಗುತ್ತಿದೆ. ಪ್ರತಿಯೊಬ್ಬರೂ ವೀವ್ಸ್ ಬಯಸುತ್ತಾರೆ. ವೈರಲ್ ಆಗಲು ಬಯಸುತ್ತಾರೆ, ತಮ್ಮದೇ ಆದ ಅಸ್ತಿತ್ವವನ್ನು ಕಾಪಾಡಿಕೊಳ್ಳಲು ಬಯಸುತ್ತಾರೆ ಎಂದು ನನಗೆ ಅನಿಸುತ್ತದೆ. ಆದ್ದರಿಂದ ಅವರು ನಿಮ್ಮ ಬಗ್ಗೆ ಹಲವು ವಿಷಯಗಳನ್ನು ಹುಟ್ಟುಹಾಕುತ್ತಾರೆ. ಅವರು ನಿಮ್ಮ ಹೆಸರನ್ನು ಕ್ಲಿಕ್‌ಬೈಟ್ ಮತ್ತು ಅಂತಹ ವಿಷಯಗಳಿಗೆ ಬಳಸುತ್ತಿದ್ದಾರೆ. ಅದು ಅವರಿಗೆ ಎಂಗೇಜ್‌ಮೆಂಟ್ ಮಾತ್ರ ನೀಡುತ್ತದೆ.

ಆದರೆ ನಿಮ್ಮನ್ನು ತಪ್ಪಾಗಿ ಬಿಂಬಿಸಿದಾಗ ನೋವುಂಟು ಮಾಡುತ್ತದೆ. ನನ್ನ ಸಹೋದರನೊಂದಿಗೆ ಇದೆಲ್ಲವೂ ನಡೆಯುತ್ತಿರುವುದನ್ನು ನಾನು ನೋಡಿದ್ದೇನೆ. ಈ ರೀತಿಯ ನಡವಳಿಕೆಗೆ ಯಾವುದೇ ಕ್ಷಮೆ ಇಲ್ಲ' ಎಂದಿದ್ದಾರೆ ಅವರು. ಅರ್ಜುನ್ ಕಪೂರ್ ಅವರ ಸಾಮಾಜಿಕ ಮಾಧ್ಯಮದಲ್ಲಿ ನಿರಂತರವಾಗಿ ನಕಾರಾತ್ಮಕ ಕಾಮೆಂಟ್‌ಗಳು ಬರುತ್ತಿವೆ. ಅವರನ್ನು ಬಹಳಷ್ಟು ಟ್ರೋಲ್ ಮಾಡಲಾಗುತ್ತಿತ್ತು. ಕಳೆದ ತಿಂಗಳು, ಅರ್ಜುನ್ ತಮ್ಮ ತಾಯಿಯ ಹುಟ್ಟುಹಬ್ಬದ ಸಂದರ್ಭದಲ್ಲಿ ಸಾಮಾಜಿಕ ಮಾಧ್ಯಮದಲ್ಲಿ ಭಾವನಾತ್ಮಕ ಪೋಸ್ಟ್ ಬರೆದಿದ್ದರು. ಇದನ್ನು ಕೂಡ ಟ್ರೋಲ್ ಮಾಡಲಾಯಿತು.

# ಹಾಡಿನ ವಿವಾದಕ್ಕೆ ಸ್ಪಷ್ಟನೆ

ಗಾಯಕಿ ಶ್ರೇಯಾ ಘೋಷಾಲ್ ಅವರು 'ಚಿಕ್ನಿ ಚಮೇಲಿ' ಹಾಡಿನ ಬಗ್ಗೆ ನೀಡಿದ ಹೇಳಿಕೆಯಿಂದ ವಿವಾದ ಆಗಿತ್ತು. ಸೋಶಿಯಲ್ ಮೀಡಿಯಾದಲ್ಲಿ ತಮ್ಮನ್ನು ಟ್ರೋಲ್ ಮಾಡಿದವರಿಗೆ ಶ್ರೇಯಾ ಘೋಷಾಲ್ ಅವರು ಸ್ಪಷ್ಟನೆ ನೀಡಿದ್ದಾರೆ. ಅಶ್ಲೀಲ ಸಾಹಿತ್ಯ ಇರುವ ಹಾಡುಗಳಿಗೆ 'ನೋ' ಎಂದು ಶ್ರೇಯಾ ಘೋಷಾಲ್ ಅವರು ಹೇಳಿದ್ದಾರೆ. ಖ್ಯಾತ ಗಾಯಕಿ ಶ್ರೇಯಾ ಘೋಷಾಲ್ ಇತ್ತೀಚೆಗೆ 'ಚಿಕ್ನಿ ಚಮೇಲಿ' ರೀತಿಯ ಹಾಡುಗಳ ಬಗ್ಗೆ ನೀಡಿದ ಹೇಳಿಕೆ ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಚರ್ಚೆಗೆ ಕಾರಣವಾಗಿತ್ತು. ನಾನು ಇನ್ಮುಂದೆ ಇಂತಹ ಹಾಡುಗಳನ್ನು ಹಾಡುವುದಿಲ್ಲ' ಎಂದು ಅವರು ಹೇಳಿದ್ದನ್ನು ಕೆಲವರು ಟ್ರೋಲ್ ಮಾಡಿದ್ದರು. ಈಗ ಈ ಎಲ್ಲಾ ಟ್ರೋಲ್‌ಗಳಿಗೆ ಶ್ರೇಯಾ ಖಡಕ್ ಆಗಿಯೇ ಉತ್ತರ ನೀಡಿದ್ದು, ತಮ್ಮ ನಿಲುವನ್ನು ಸ್ಪಷ್ಟಪಡಿಸಿದ್ದಾರೆ.



ಇತ್ತೀಚೆಗೆ ರಾಜ್ ಶಾಮನಿ ಅವರ ಪಾಡ್‌ಕಾಸ್ಟ್‌ನಲ್ಲಿ ಭಾಗವಹಿಸಿದ್ದ ಶ್ರೇಯಾ ಘೋಷಾಲ್ , ಚಿತ್ರರಂಗದಲ್ಲಿ ಮಹಿಳೆಯರನ್ನು ಅತಿ ಹೆಚ್ಚು ಲೈಂಗಿಕವಾಗಿ ಬಿಂಬಿಸುವ ಸಾಹಿತ್ಯದ ಬಗ್ಗೆ ತಮ್ಮ ಅಸಮಾಧಾನ ವ್ಯಕ್ತಪಡಿಸಿದ್ದರು. ಶ್ರೇಯಾ ಘೋಷಾಲ್ ಅವರು ತಮ್ಮ ವೃತ್ತಿಜೀವನದಲ್ಲಿ ಎದುರಾದ ಕೆಲವು ಮುಜುಗರದ ಕ್ಷಣಗಳನ್ನು ಹಂಚಿಕೊಂಡಿದ್ದಾರೆ. 'ಚಿಕ್ನಿ ಚಮೇಲಿ ಹಿಟ್ ಆದ ನಂತರ, ನನಗೆ ಅಂತಹದ್ದೇ ಅನೇಕ ಹಾಡುಗಳ ಆಫರ್ ಬಂದವು. ಒಮ್ಮೆ ನನ್ನ ಆಪ್ತ ಸಂಗೀತ ಸಂಯೋಜಕರೊಬ್ಬರು 'ನನ್ನನ್ನು ಚಿಕನ್ ಮಾಡಿ ತಿನ್ನು' ಎಂಬಂತಹ ಅತ್ಯಂತ ಅಶ್ಲೀಲ ಸಾಹಿತ್ಯವಿದ್ದ ಹಾಡನ್ನು ಹಾಡಲು ಕೇಳಿದ್ದರು. ಆ ಸಾಹಿತ್ಯ ಕೇಳಿಯೇ ನನಗೆ ನಾಚಿಕೆಯಾಯಿತು, ತಕ್ಷಣವೇ ಅದನ್ನು ನಿರಾಕರಿಸಿದೆ' ಎಂದು ಶ್ರೇಯಾ ಘೋಷಾಲ್ ಅವರು ತಿಳಿಸಿದ್ದಾರೆ. 2012ರ 'ಅಗ್ನಿಪಥ್' ಸಿನಿಮಾದ 'ಚಿಕ್ನಿ ಚಮೇಲಿ' ಸೂಪರ್ ಹಿಟ್ ಹಾಡಿನ ಬಗ್ಗೆ ಮಾತನಾಡುತ್ತಾ, 'ಆ ಸಮಯದಲ್ಲಿ ನನಗೆ ಅಷ್ಟು ಪ್ರಭುದ್ಧತೆ ಇರಲಿಲ್ಲ. ನಾನು ಏನು ಹಾಡುತ್ತಿದ್ದೇನೆ ಎಂಬುದು ಪೂರ್ಣವಾಗಿ ಅರ್ಥವಾಗುತ್ತಿರಲಿಲ್ಲ. ಆ ಹಾಡಿನ ಮೂಲ ಸಾಹಿತ್ಯ ಇನ್ನೂ ಗಾಢವಾಗಿತ್ತು, ನಂತರ ಅದನ್ನು ಸ್ವಲ್ಪ ಮಟ್ಟಿಗೆ ಕಡಿಮೆ ಮಾಡಲಾಗಿತ್ತು' ಎಂದು ಶ್ರೇಯಾ ಅವರು ಹೇಳಿದ್ದಾರೆ.



ಧ್ರುವ ವಿಕ್ರಂ ಅವರ ನಾಲ್ಕನೇ ಸಿನಿಮಾ

# ರಿಲೀಸ್ ಆಗಲಿದೆ 'ಲವ್ ಮಾಕ್ಟೇಲ್ 3' ಸಿನಿಮಾ

ಏಪ್ರಿಲ್ ತಿಂಗಳಲ್ಲಿ ರಿಲೀಸ್ ಆಗಬೇಕಿದ್ದ 'ಲವ್ ಮಾಕ್ಟೇಲ್ 3' ಚಿತ್ರ ಮಾರ್ಚ್ 19ರಂದು ಬರಲಿದೆ. 'ಟಾಕ್ಸಿಕ್' ಸಿನಿಮಾದ ಬಿಡುಗಡೆ ದಿನಾಂಕ ಮುಂದಕ್ಕೆ ಹೋದ ಬೆನ್ನಲ್ಲೇ ಈ ತೀರ್ಮಾನ ಮಾಡಲಾಗಿದೆ. 'ಕೆವಿಎನ್' ಸಂಸ್ಥೆಯೇ 'ಲವ್ ಮಾಕ್ಟೇಲ್ 3' ಸಿನಿಮಾವನ್ನು ವಿತರಣೆ ಮಾಡಲಿದೆ.

ಮಾರ್ಚ್ 19ರಂದು 'ಟಾಕ್ಸಿಕ್' ಸಿನಿಮಾ ನೋಡಲು ಸಿನಿಪ್ರಿಯರು ಕಾದಿದ್ದರು. ಆದರೆ ಕಾರಣಾಂತರಗಳಿಂದ ಆ ಸಿನಿಮಾದ ರಿಲೀಸ್ ದಿನಾಂಕವನ್ನು ಮುಂದೂಡಲಾಗಿದೆ. ಈಗ 'ರಾಕಿಂಗ್ ಸ್ಟಾರ್' ಯಶ್ ನಟನೆಯ 'ಟಾಕ್ಸಿಕ್' ಚಿತ್ರದ ಬಿಡುಗಡೆ ದಿನಾಂಕ ಮುಂದಕ್ಕೆ ಹೋಗುತ್ತಲೇ, ಆ ದಿನಾಂಕದಲ್ಲಿ 'ಲವ್ ಮಾಕ್ಟೇಲ್ 3' ಸಿನಿಮಾವನ್ನು ಬಿಡುಗಡೆ ಮಾಡಲು ಡಾರ್ಲಿಂಗ್ ಕೃಷ್ಣ ಸಜ್ಜಾಗಿದ್ದಾರೆ. ಆ ಮೂಲಕ ಅವರು ಅಭಿಮಾನಿಗಳಿಗೆ ಗುಡ್ ನ್ಯೂಸ್ ನೀಡಿದ್ದಾರೆ.



ಯುಗಾದಿಯ ರಜೆ, ಅದರ ಬೆನ್ನಲ್ಲಿಯೇ ಶುರುವಾಗುವ ವೀಕೆಂಡ್ ಸೇರಿದಂತೆ ಮಾರ್ಚ್ 19 ಎಲ್ಲಾ ರೀತಿಯಿಂದಲೂ ಚಿತ್ರತಂಡಗಳಿಗೆ ಸೂಕ್ತವಾದ ದಿನಾಂಕ. ಆ ದಿನಾಂಕದಂದು 'ಟಾಕ್ಸಿಕ್' ಬಿಡುಗಡೆ ಆಗದಿದ್ದರೂ, ಅದೇ ದಿನ 'ಲವ್ ಮಾಕ್ಟೇಲ್ 3' ಚಿತ್ರವನ್ನು ಬಿಡುಗಡೆ ಮಾಡಲು 'ಕೆವಿಎನ್' ಸಂಸ್ಥೆ ತೀರ್ಮಾನಿಸಿದೆ. ಈ ಸಿನಿಮಾವನ್ನು ಕೆವಿಎನ್ ಸಂಸ್ಥೆ ವಿತರಿಸುತ್ತಿದೆ. 'ಲವ್ ಮಾಕ್ಟೇಲ್ 3' ಸಿನಿಮಾಗೆ ಡಾರ್ಲಿಂಗ್ ಕೃಷ್ಣ ನಿರ್ದೇಶನ ಮಾಡಿ, ನಾಯಕನಾಗಿ ನಟಿಸಿದ್ದಾರೆ. 'ಟಾಕ್ಸಿಕ್' ಬಿಡುಗಡೆ ದಿನಾಂಕ ಮುಂದೆ ಹೋಗುತ್ತಲೇ 'ಲವ್ ಮಾಕ್ಟೇಲ್ 3' ಪಾಲಿಗೆ ಅದೃಷ್ಟ ಖುಲಾಯಿಸಿದೆ. ಈ ಚಿತ್ರವನ್ನು ಏಪ್ರಿಲ್ 10ರಂದು ಬಿಡುಗಡೆ ಮಾಡಲು ಪ್ಲ್ಯಾನ್ ಮಾಡಲಾಗಿತ್ತು. ಆದರೆ ಬದಲಾದ ಸನ್ನಿವೇಶದಲ್ಲಿ, ಯುಗಾದಿ ರಜೆಯಂದೇ 'ಲವ್ ಮಾಕ್ಟೇಲ್ 3' ತೆರೆಕಾಣಿಸಲು ಚಿತ್ರತಂಡ ತೀರ್ಮಾನಿಸಿದೆ.

# ಅಲ್ಲು ಸಿನಿಮಾಗೆ ಸ್ಟಾರ್ ನಟ ನಿರ್ದೇಶನ

ಅಲ್ಲು ಅರ್ಜುನ್ 'ಪುಷ್ಪ 2' ಬಳಿಕ ಅದಕ್ಕಿಂತಲೂ ದೊಡ್ಡ ಸಿನಿಮಾವನ್ನೇ ಮಾಡಬೇಕು ಎಂಬ ಯೋಜಿತ ನಿರ್ಧಾರ ಹಾಕಿಕೊಂಡೇ ಮುಂದಿನ ಹೆಜ್ಜೆಗಳನ್ನು ಇಡುತ್ತಿದ್ದಾರೆ. ಇದೀಗ ಅಟ್ಲಿ ಜೊತೆಗೆ ಹಾಲಿವುಡ್ ಮಾದರಿಯ ಫ್ಯಾಂಟಸಿ, ಸೂಪರ್ ಹೀರೋ ಸಿನಿಮಾ ಮಾಡುತ್ತಿರುವ ಅಲ್ಲು ಅರ್ಜುನ್, ತಮ್ಮ ಮುಂದಿನ ಸಿನಿಮಾಕ್ಕೆ ಭಿನ್ನ ಶೈಲಿಯ ನಿರ್ದೇಶಕರೊಬ್ಬರಿಗೆ ಓಕೆ ಹೇಳಿದ್ದಾರೆ. ಅಲ್ಲು ಅರ್ಜುನ್ ಪ್ರಸ್ತುತ ಟಾಪ್ ಪ್ಯಾನ್ ಇಂಡಿಯಾ ಸ್ಟಾರ್ ನಟರುಗಳಲ್ಲಿ ಒಬ್ಬರು. ಅವರೊಟ್ಟಿಗೆ ಸಿನಿಮಾ ಮಾಡಲು ದೊಡ್ಡ ನಿರ್ಮಾಣ ಸಂಸ್ಥೆಗಳು, ನಿರ್ದೇಶಕರುಗಳು ಸಾಲುಗಟ್ಟಿ ನಿಂತಿದ್ದಾರೆ. ಅಲ್ಲು ಅರ್ಜುನ್ ಸಹ 'ಪುಷ್ಪ 2' ಬಳಿಕ ಅದಕ್ಕಿಂತಲೂ ದೊಡ್ಡ ಸಿನಿಮಾವನ್ನೇ ಮಾಡಬೇಕು ಎಂಬ ಯೋಜಿತ ನಿರ್ಧಾರ ಹಾಕಿಕೊಂಡೇ ಮುಂದಿನ ಹೆಜ್ಜೆಗಳನ್ನು ಇಡುತ್ತಿದ್ದಾರೆ. ಇದೀಗ ಅಟ್ಲಿ ಜೊತೆಗೆ ಹಾಲಿವುಡ್ ಮಾದರಿಯ ಫ್ಯಾಂಟಸಿ, ಸೂಪರ್ ಹೀರೋ ಸಿನಿಮಾ ಮಾಡುತ್ತಿರುವ ಅಲ್ಲು ಅರ್ಜುನ್, ತಮ್ಮ ಮುಂದಿನ ಸಿನಿಮಾಕ್ಕೆ ಭಿನ್ನ ಶೈಲಿಯ ನಿರ್ದೇಶಕರೊಬ್ಬರಿಗೆ ಓಕೆ ಹೇಳಿದ್ದಾರೆ.

ಮಲಯಾಳಂ ಸಿನಿಮಾಗಳ ಮೂಲಕ ತಮ್ಮ ನಟನೆ ಇಂದ ದೇಶದಾದ್ಯಂತ ಪ್ರತ್ಯೇಕ ಅಭಿಮಾನಿ ವರ್ಗವನ್ನೇ ಗಳಿಸಿರುವ ಬಾಸಿಲ್ ಜೋಸೆಫ್ ಅವರು ಅಲ್ಲು ಅರ್ಜುನ್ ಅವರ ಮುಂದಿನ ಸಿನಿಮಾ ನಿರ್ದೇಶಿಸಲಿದ್ದಾರೆ. ಬಾಸಿಲ್ ಜೋಸೆಫ್, ಮಲಯಾಳಂ ಚಿತ್ರರಂಗದ ಜನಪ್ರಿಯ ನಟರಲ್ಲಿ ಒಬ್ಬರು. ಅವರ ನಟನೆಯ ಹಲವು ಸಿನಿಮಾಗಳು ಸೂಪರ್ ಹಿಟ್ ಆಗಿವೆ. ಇದೀಗ ಅವರು ತುಸು ಸಮಯ ನಟನೆಯಿಂದ ವಿರಾಮ ಪಡೆದು ಅಲ್ಲು ಅರ್ಜುನ್ ಅವರಿಗಾಗಿ ಸಿನಿಮಾ ನಿರ್ದೇಶನ ಮಾಡಲಿದ್ದಾರಂತೆ.



# ಆರ್‌ಸಿಬಿ ಅಭಿಮಾನಿಗಳಿಗೆ 3 ಗುಡ್‌ನ್ಯೂಸ್

ಇಂಡಿಯನ್ ಪ್ರೀಮಿಯರ್ ಲೀಗ್ ಸೀಸನ್-19 ರಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಎರಡು ತವರು ಮೈದಾನದಲ್ಲಿ ಕಣಕ್ಕಿಳಿಯಲಿದೆ. ಅಂದರೆ ಐದು ಪಂದ್ಯಗಳನ್ನು ಬೆಂಗಳೂರಿನಲ್ಲಿ ಆಡಿದರೆ, ಇನ್ನೆರಡು ಮ್ಯಾಚ್‌ಗಳನ್ನು ರಾಯ್‌ಪುರದಲ್ಲಿ ಆಡಲು ನಿರ್ಧರಿಸಲಾಗಿದೆ. ಇದಾಗ್ಯೂ, ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಒಟ್ಟು 7 ಪಂದ್ಯಗಳು ಜರುಗಲಿದೆ. ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಮತ್ತೆ ಕ್ರಿಕೆಟ್ ಕಲರವ ಶುರುವಾಗಲಿದೆ. ಕಳೆದ ಕೆಲ ತಿಂಗಳುಗಳಿಂದ ನಿಷೇಧಕ್ಕೆ ಒಳಗಾಗಿದ್ದ ಮೈದಾನದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಕಣಕ್ಕಿಳಿಯುವುದು ಖಚಿತವಾಗಿದೆ.

ಈ ಖಚಿತತೆಯೊಂದಿಗೆ ಆರ್‌ಸಿಬಿ ಅಭಿಮಾನಿಗಳಿಗೆ ಮೂರು ಗುಡ್ ನ್ಯೂಸ್ ಕೂಡ ಸಿಕ್ಕಿದೆ. ಇದರ ಜೊತೆಗೆ ಒಂದು ಬ್ಯಾಡ್ ನ್ಯೂಸ್ ಕೂಡ ಇದೆ. ಇಲ್ಲಿ ಗುಡ್ ನ್ಯೂಸ್ ಏನೆಂದರೆ ಈ ಬಾರಿಯ ಐಪಿಎಲ್‌ನ ಪ್ರಮುಖ ಪಂದ್ಯಗಳು ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲೇ ನಡೆಯಲಿದೆ ಎಂದು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಕಾರ್ಯದರ್ಶಿ ಸಂತೋಷ್ ಮೆನನ್ ಅವರು ಖಚಿತಪಡಿಸಿದ್ದಾರೆ. ಅದರಂತೆ ಐಪಿಎಲ್ 2026ರ ಮೂರು ಪ್ರಮುಖ ಪಂದ್ಯಗಳು ಬೆಂಗಳೂರಿನಲ್ಲಿ ನಡೆಯಲಿದೆ. ಆ ಪಂದ್ಯಗಳಾವುವು ಎಂದರೆ

ಆರ್‌ಸಿಬಿ 5+2 ಪಂದ್ಯ

**ಉದ್ಘಾಟನಾ ಪಂದ್ಯ:** ಇಂಡಿಯನ್ ಪ್ರೀಮಿಯರ್ ಲೀಗ್‌ನ ಉದ್ಘಾಟನಾ ಪಂದ್ಯಕ್ಕೆ ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂ ಆತಿಥ್ಯವಹಿಸಲಿದೆ ಎಂದು ಕೆಎಸ್‌ಸಿಎ ಕಾರ್ಯದರ್ಶಿ ಸಂತೋಷ್ ಮೆನನ್ ತಿಳಿಸಿದ್ದಾರೆ. ಅಂದರೆ ಈ ಭಲಅರಿಯ ಐಪಿಎಲ್ ಶುರುವಾಗುವುದು ಬೆಂಗಳೂರಿನಲ್ಲಿ.

**ಪ್ಲೇಆಫ್ ಪಂದ್ಯ:** ಉದ್ಘಾಟನಾ ಪಂದ್ಯವಲ್ಲದೇ, ಪ್ಲೇಆಫ್ ಸುತ್ತಿನ ಒಂದು ಪಂದ್ಯ ಕೂಡ ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಜರುಗಲಿದೆ. ಅದು ಎಲಿಮಿನೇಟರ್ ಪಂದ್ಯ ಆಗಿರಬಹುದು ಇಲ್ಲಾ ಮೊದಲ ಕ್ವಾಲಿಫೈಯರ್ ಮ್ಯಾಚ್ ಆಗಿರಬಹುದು.



**ಫೈನಲ್ ಪಂದ್ಯ:** ಈ ಬಾರಿಯ ಐಪಿಎಲ್‌ನ ಫೈನಲ್ ಪಂದ್ಯ ಕೂಡ ಚಿನ್ನಸ್ವಾಮಿ ಸ್ಟೇಡಿಯಂನಲ್ಲೇ ಆಯೋಜಿಸಲು ನಿರ್ಧರಿಸಲಾಗಿದೆ. ಅದರಂತೆ ಐಪಿಎಲ್ 2026ರ ಕೊನೆಯ ಪಂದ್ಯ ಕೂಡ ಬೆಂಗಳೂರಿನಲ್ಲೇ ನಡೆಯಲಿದೆ. ಆರ್‌ಸಿಬಿ ತಂಡದ 5 ಪಂದ್ಯಗಳೊಂದಿಗೆ ಈ ಬಾರಿ ಹೆಚ್ಚುವರಿ 2 ಮ್ಯಾಚ್‌ಗಳೂ ಕೂಡ ಬೆಂಗಳೂರಿನಲ್ಲಿ ನಡೆಯುತ್ತಿರುವುದು ಆರ್‌ಸಿಬಿ ಅಭಿಮಾನಿಗಳ ಪಾಲಿಗೆ ಗುಡ್ ನ್ಯೂಸ್ ಎಂದೇ ಹೇಳಬಹುದು.

**ಪ್ರೇಕ್ಷಕರ ಮಿತಿ:** ಈ ಬಾರಿಯ ಐಪಿಎಲ್ ಪಂದ್ಯಗಳಿಗೆ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಪ್ರೇಕ್ಷಕರ ಮಿತಿ ಇರಲಿದೆ. ಅಂದರೆ ಕ್ರೀಡಾಂಗಣದ ಸುರಕ್ಷತೆಯ ದೃಷ್ಟಿಯಿಂದ ಪ್ರೇಕ್ಷಕರ ಸಂಖ್ಯೆಯನ್ನು 30 ರಿಂದ 35 ಸಾವಿರಕ್ಕೆ ಸೀಮಿತಗೊಳಿಸಲು ನಿರ್ಧರಿಸಲಾಗಿದೆ. ಅಂದರೆ ಈ ಬಾರಿ ಸಂಪೂರ್ಣ ಸೀಟಿಂಗ್ ಟಿಕೆಟ್‌ಗಳನ್ನು ಮಾರಾಟ ಮಾಡುವುದಿಲ್ಲ.

ಹೀಗಾಗಿ ಸೀಮಿತ ಪ್ರೇಕ್ಷಕರಿಗೆ ಮಾತ್ರ ಸ್ಟೇಡಿಯಂನಲ್ಲಿ ಪಂದ್ಯ ವೀಕ್ಷಿಸಲು ಅವಕಾಶ ದೊರೆಯಲಿದೆ ಎಂದು ತಿಳಿದು ಬಂದಿದೆ.

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಈ ಬಾರಿ 2 ಹೋಮ್ ಗ್ರೌಂಡ್‌ನಲ್ಲಿ ಕಣಕ್ಕಿಳಿಯಲಿದೆ. ಅಂದರೆ ಲೀಗ್ ಹಂತದ 7 ಪಂದ್ಯಗಳಲ್ಲಿ ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ 5 ಮ್ಯಾಚ್‌ಗಳನ್ನು ಮಾತ್ರ ಆಡಲಿದೆ.

ಇನ್ನುಳಿದ ಎರಡು ಪಂದ್ಯಗಳನ್ನು ಛತ್ತೀಸ್‌ಗಢದ ರಾಯ್‌ಪುರದಲ್ಲಿರುವ ಶಾಹೀದ್ ವೀರ್ ನಾರಾಯಣ್ ಸಿಂಗ್ ಅಂತರಾಷ್ಟ್ರೀಯ ಕ್ರೀಡಾಂಗಣದಲ್ಲಿ ಆಡಲಿದೆ.

ಇದಾಗ್ಯೂ, ಪ್ಲೇಆಫ್ ಪಂದ್ಯ ಹಾಗೂ ಫೈನಲ್ ಪಂದ್ಯ ಬೆಂಗಳೂರಿನಲ್ಲೇ ಜರುಗುತ್ತಿರುವುದರಿಂದ ಆರ್‌ಸಿಬಿ ಅಭಿಮಾನಿಗಳಿಗೆ ಒಟ್ಟು 7 ಪಂದ್ಯಗಳನ್ನು ವೀಕ್ಷಿಸಲು ಅವಕಾಶ ದೊರೆಯಲಿದೆ.



# ಸಿದ್ಧಿ ವಿನಾಯಕನ ಪಾದಕ್ಕೆರಗಿದ ಟೀಂ ಇಂಡಿಯಾ ಆಟಗಾರರು

2026 ರ ಟಿ20 ವಿಶ್ವಕಪ್‌ನ ಎರಡನೇ ಸೆಮಿಫೈನಲ್ ಪಂದ್ಯದಲ್ಲಿ ಭಾರತ ಹಾಗೂ ಇಂಗ್ಲೆಂಡ್ ತಂಡಗಳು ಮುಖಾಮುಖಿಯಾಗಲಿವೆ. ಈ ಪಂದ್ಯ ಮಾರ್ಚ್ 5 ರಂದು ನಡೆಯಲಿದೆ. ಈ ಪಂದ್ಯದಲ್ಲಿ ಗೆದ್ದ ತಂಡಕ್ಕೆ ಫೈನಲ್ ಟಿಕೆಟ್ ಸಿಕ್ಕರೆ, ಸೋತ ತಂಡಕ್ಕೆ ಟಿ20 ವಿಶ್ವಕಪ್‌ನಿಂದ ಗೇಟ್‌ಪಾಸ್ ಸಿಗಲಿದೆ. ಹೀಗಾಗಿ ಇಂತಹ ಮಹತ್ವದ ಪಂದ್ಯಕ್ಕೂ ಮುನ್ನ ಟೀಂ ಇಂಡಿಯಾದ ಇಶಾನ್ ಕಿಶನ್, ಅಭಿಷೇಕ್ ಶರ್ಮಾ ಮತ್ತು ಅಕ್ಷರ್ ಪಟೇಲ್ ಮುಂಬೈನ ಪ್ರಸಿದ್ಧ ಸಿದ್ಧಿವಿನಾಯಕ ದೇವಸ್ಥಾನಕ್ಕೆ ಭೇಟಿ ನೀಡಿ ಭಗವಂತನ ಆಶೀರ್ವಾದ ಪಡೆದಿದ್ದಾರೆ.

ವಾಸ್ತವವಾಗಿ ಪ್ರಮುಖ ಪಂದ್ಯಗಳಿಗೂ ಮೊದಲು ಭಾರತೀಯ ಆಟಗಾರರು ದೇವಾಲಯಗಳಿಗೆ ಭೇಟಿ ನೀಡುವುದು ವಾಡಿಕೆ. ಅದರಂತೆ ಇಶಾನ್ ಕಿಶನ್, ಅಭಿಷೇಕ್ ಶರ್ಮಾ ಮತ್ತು ಅಕ್ಷರ್ ಪಟೇಲ್ ಸಿದ್ಧಿವಿನಾಯಕ ದೇವಸ್ಥಾನಕ್ಕೆ ಭೇಟಿ ನೀಡಿ ಸಾಂಪ್ರದಾಯಿಕ ಪೂಜಾ ವಿಧಿವಿಧಾನಗಳನ್ನು ನೆರವೇರಿಸಿದ್ದಾರೆ. ಮೂವರು ಆಟಗಾರರು ಟೀಂ ಇಂಡಿಯಾದ ಪ್ಲೇಯಿಂಗ್ 11ನಲ್ಲಿ ಆಡುವವರಾಗಿದ್ದಾರೆ. ಅದರಲ್ಲೂ ಕಳಪೆ ಫಾರ್ಮ್‌ನಿಂದ ಬಳಲುತ್ತಿರುವ ಅಭಿಷೇಕ್ ಶರ್ಮಾಗೆ ಸೆಮಿಫೈನಲ್ ಕಾಳಗ ನಿರ್ಣಾಯಕವಾಗಿದೆ. ಇತ್ತ ಉತ್ತಮ ಫಾರ್ಮ್‌ನಲ್ಲಿರುವ ಇಶಾನ್ ಕಿಶನ್ ಮತ್ತು ಆಲ್‌ರೌಂಡರ್ ಆಗಿ ನಿರ್ಣಾಯಕ ಪಾತ್ರ ವಹಿಸುತ್ತಿರುವ ಅಕ್ಷರ್ ಪಟೇಲ್ ಕೂಡ ಭಗವಂತನ ದರ್ಶನ ಪಡೆದರು. 2026 ರ ಟಿ20 ವಿಶ್ವಕಪ್ ಪ್ರಾರಂಭವಾಗುವ ಮೊದಲು ಕುಲ್ದೀಪ್ ಯಾದವ್ ಮತ್ತು ವರುಣ್ ಚಕ್ರವರ್ತಿ ಕೂಡ ಸಿದ್ಧಿವಿನಾಯಕ ದೇವಸ್ಥಾನಕ್ಕೆ ಭೇಟಿ ನೀಡಿ ಗಣೇಶನ ಆಶೀರ್ವಾದ ಪಡೆದಿದ್ದರು. ವೆಸ್ಟ್ ಇಂಡೀಸ್ ವಿರುದ್ಧದ ಅಂತಿಮ ಸೂಪರ್ 8 ಪಂದ್ಯಕ್ಕೂ ಮುನ್ನ ಕೋಲ್ಕತ್ತಾದ ಕಾಳಿಘಾಟ್ ಕಾಳಿ ದೇವಸ್ಥಾನದಲ್ಲಿ ಅಕ್ಷರ್ ಪಟೇಲ್ ಮತ್ತು ಅಭಿಷೇಕ್ ಶರ್ಮಾ ಪೂಜೆ ಸಲ್ಲಿಸಿದ್ದರು. ಭಾರತದ ನಾಯಕ ಸೂರ್ಯಕುಮಾರ್ ಯಾದವ್ ಮತ್ತು ಅವರ ಪತ್ನಿ ದೇವಿಶಾ ಶೆಟ್ಟಿ ಕೂಡ ಹಾಜರಿದ್ದರು.

# 25 ಸ್ಥಾನ ಮೇಲೇರಿದ ಸಂಜು ಸ್ಯಾಮ್ಸನ್!

ಐಸಿಸಿ ನೂತನ ಟಿ20 ರ್‍ಯಾಂಕಿಂಗ್ ಬಿಡುಗಡೆಗೊಂಡಿದ್ದು, ಭಾರತೀಯ ಆಟಗಾರರು ಭರ್ಜರಿ ಮುನ್ನಡೆ ಸಾಧಿಸಿದ್ದಾರೆ. ಸಂಜು ಸ್ಯಾಮ್ಸನ್ 25 ಸ್ಥಾನ ಮೇಲೇರಿ 40ನೇ ಸ್ಥಾನಕ್ಕೆ ತಲುಪಿದ್ದಾರೆ. ಇಶಾನ್ ಕಿಶನ್, ತಿಲಕ್ ವರ್ಮಾ, ಜಸ್ಪ್ರೀತ್ ಬುಮ್ರಾ ಮತ್ತು ಅರ್ಶ್‌ದೀಪ್ ಸಿಂಗ್ ಕೂಡ ತಮ್ಮ ಶ್ರೇಯಾಂಕಗಳನ್ನು ಸುಧಾರಿಸಿಕೊಂಡಿದ್ದಾರೆ. ಕಳಪೆ ಪ್ರದರ್ಶನದ ಹೊರತಾಗಿಯೂ ಅಭಿಷೇಕ್ ಶರ್ಮಾ ನಂಬರ್ ಒನ್ ಸ್ಥಾನದಲ್ಲಿ ಮುಂದುವರಿದಿದ್ದಾರೆ.

2026 ರ ಟಿ20 ವಿಶ್ವಕಪ್ ನಡುವೆ ಐಸಿಸಿ, ನೂತನ ಟಿ20 ರ್‍ಯಾಂಕಿಂಗ್ ಪಟ್ಟಿಯನ್ನು ಬಿಡುಗಡೆ ಮಾಡಿದ್ದು, ಈ ಪಟ್ಟಿಯಲ್ಲಿ ಭಾರತೀಯ ಬ್ಯಾಟ್ಸ್‌ಮನ್‌ಗಳು ಮತ್ತು ಬೌಲರ್‌ಗಳು ಭರ್ಜರಿ ಮುಂಬಡ್ತಿ ಪಡೆದಿದ್ದಾರೆ.

ಅದರಲ್ಲೂ ವೆಸ್ಟ್ ಇಂಡೀಸ್ ವಿರುದ್ಧದ ಸೂಪರ್ 8 ಸುತ್ತಿನ ಕೊನೆಯ ಪಂದ್ಯದಲ್ಲಿ 97 ರನ್‌ಗಳ ಅಜೇಯ ಇನ್ನಿಂಗ್ಸ್ ಆಡಿದ್ದ ಸಂಜು ಸ್ಯಾಮ್ಸನ್ 25 ಸ್ಥಾನ ಮೇಲೇರಿದ್ದಾರೆ. ಸಂಜು ಸ್ಯಾಮ್ಸನ್ ಜೊತೆಗೆ ಇಡೀ ಟಿ20 ವಿಶ್ವಕಪ್‌ನಲ್ಲಿ ಟೀಂ ಇಂಡಿಯಾ ಪರ ಉತ್ತಮ ಪ್ರದರ್ಶನ ನೀಡುತ್ತಾ ಬಂದಿರುವ ತಿಲಕ್ ವರ್ಮಾ ಮತ್ತು ಇಶಾನ್ ಕಿಶನ್ ಕೂಡ ನೂತನ ರ್‍ಯಾಂಕಿಂಗ್ ಪಟ್ಟಿಯಲ್ಲಿ ಲಾಭ ಗಳಿಸಿದ್ದಾರೆ. ಬೌಲರ್‌ಗಳಲ್ಲಿ, ಸ್ಟಾರ್ ಬೌಲರ್‌ಗಳಾದ ಜಸ್ಪ್ರೀತ್ ಬುಮ್ರಾ ಮತ್ತು ಅರ್ಶ್‌ದೀಪ್ ಸಿಂಗ್ ತಮ್ಮ ಶ್ರೇಯಾಂಕಗಳನ್ನು ಸುಧಾರಿಸಿಕೊಂಡಿದ್ದಾರೆ.

ಈ ಮೊದಲು 65ನೇ ಸ್ಥಾನದಲ್ಲಿದ್ದ ಸಂಜು ಸ್ಯಾಮ್ಸನ್ ಇದೀಗ ಬರೋಬ್ಬರಿ 25 ಸ್ಥಾನಗಳನ್ನು ಮೇಲೇರಿ 549 ರೇಟಿಂಗ್ ಪಾಯಿಂಟ್‌ಗಳೊಂದಿಗೆ 40 ನೇ ಸ್ಥಾನಕ್ಕೆ ಜಿಗಿದಿದ್ದಾರೆ. ಹಾಗೆಯೇ ಮತ್ತೊಬ್ಬ ಆರಂಭಿಕ ಆಟಗಾರ ಇಶಾನ್ ಕಿಶನ್ ಕೂಡ ಲಾಭ ಪಡೆದಿದ್ದು, ಐದನೇ ಸ್ಥಾನದಿಂದ ನಾಲ್ಕನೇ ಸ್ಥಾನಕ್ಕೆ ಏರಿದ್ದಾರೆ.

ತಿಲಕ್ ವರ್ಮಾ ಕೂಡ ಒಂದು ಸ್ಥಾನ ಮೇಲಕ್ಕೆ ಜಿಗಿದು ಏಳನೇ ಸ್ಥಾನದಿಂದ ಆರನೇ ಸ್ಥಾನಕ್ಕೆ ಬಂದಿದ್ದಾರೆ. ಆದಾಗ್ಯೂ, ನಾಯಕ ಸೂರ್ಯಕುಮಾರ್ ಯಾದವ್ ಹಿನ್ನಡೆ ಅನುಭವಿಸಿದ್ದು, ಏಳನೇ ಸ್ಥಾನಕ್ಕೆ ಕುಸಿದಿದ್ದಾರೆ. ಒಳ್ಳೆಯ ಸುದ್ದಿ ಏನೆಂದರೆ ಕಳಪೆ ಪ್ರದರ್ಶನದ ಹೊರತಾಗಿಯೂ ಅಭಿಷೇಕ್ ಶರ್ಮಾ ನಂಬರ್ ಒನ್ ಬ್ಯಾಟ್ಸ್‌ಮನ್ ಆಗಿ ಉಳಿದಿದ್ದು, ಅಗ್ರ ಸ್ಥಾನದಲ್ಲಿ ತಮ್ಮ ಹಿಡಿತವನ್ನು ಕಾಯ್ದುಕೊಂಡಿದ್ದಾರೆ. ಬೌಲರ್‌ಗಳ ಶ್ರೇಯಾಂಕದಲ್ಲಿ ಭಾರತೀಯ ಬೌಲರ್‌ಗಳು ಕೂಡ ಪ್ರಾಬಲ್ಯ ಸಾಧಿಸಿದ್ದು, ಜಸ್ಪ್ರೀತ್ ಬುಮ್ರಾ ಒಂದು ಸ್ಥಾನ ಜಿಗಿದು 8 ರಿಂದ 7 ನೇ ಸ್ಥಾನಕ್ಕೆ ಏರಿದ್ದಾರೆ.



ಟಿ20 ರ್‍ಯಾಂಕಿಂಗ್ ಪಟ್ಟಿ ಬಿಡುಗಡೆ

# ಟಿ20 ವಿಶ್ವಕಪ್ ನಡುವೆ ಊರಿಗೆ ತೆರಳಿ ಸಿಕ್ಕಾಕೊಂಡ ನ್ಯೂಝಿಲೆಂಡ್ ಆಟಗಾರ

ಟಿ20 ವಿಶ್ವಕಪ್‌ನ ಮೊದಲ ಸೆಮಿಫೈನಲ್ ಪಂದ್ಯವು ಮಾರ್ಚ್ 4 ರಂದು ನಡೆಯಲಿದೆ. ಈ ಪಂದ್ಯದಲ್ಲಿ ಸೌತ್ ಆಫ್ರಿಕಾ ಮತ್ತು ನ್ಯೂಝಿಲೆಂಡ್ ತಂಡಗಳು ಮುಖಾಮುಖಿಯಾಗಲಿದೆ.

ಇನ್ನು ಮಾರ್ಚ್ 5 ರಂದು ಜರುಗಲಿರುವ ದ್ವಿತೀಯ ಸೆಮಿಫೈನಲ್‌ನಲ್ಲಿ ಭಾರತ ಮತ್ತು ಇಂಗ್ಲೆಂಡ್ ಕಣಕ್ಕಿಳಿಯಲಿವೆ. ಟಿ20 ವಿಶ್ವಕಪ್‌ನ ಮೊದಲ ಸೆಮಿಫೈನಲ್ ಪಂದ್ಯದಲ್ಲಿ ನ್ಯೂಝಿಲೆಂಡ್ ಮತ್ತು ಸೌತ್ ಆಫ್ರಿಕಾ ತಂಡಗಳು ಮುಖಾಮುಖಿ ಆಗಲಿದೆ.

ಕೊಲ್ಕತ್ತಾದ ಈಡನ್ ಗಾರ್ಡನ್ಸ್ ಮೈದಾನದಲ್ಲಿ ನಡೆಯಲಿರುವ ಈ ನಿರ್ಣಾಯಕ ಪಂದ್ಯದಲ್ಲಿ ನ್ಯೂಝಿಲೆಂಡ್ ವೇಗಿ ಮ್ಯಾಟ್ ಹೆನ್ರಿ ಕಣಕ್ಕಿಳಿಯಲಿದ್ದಾರಾ ಎಂಬುದೇ ಈಗ ದೊಡ್ಡ ಪ್ರಶ್ನೆ. ಏಕೆಂದರೆ ಮಂಗಳವಾರ ಸಂಜೆ ತನಕ ಹೆನ್ರಿ ನ್ಯೂಝಿಲೆಂಡ್ ತಂಡವನ್ನು ಕೂಡಿಕೊಂಡಿರಲಿಲ್ಲ. ಇಂಗ್ಲೆಂಡ್ ವಿರುದ್ಧದ ಸೂಪರ್-8 ಪಂದ್ಯದ ಮುಕ್ತಾಯದ ಬೆನ್ನಲ್ಲೇ ಮ್ಯಾಟ್ ಹೆನ್ರಿ ನ್ಯೂಝಿಲೆಂಡ್‌ಗೆ ತೆರಳಿದ್ದರು. ತಮ್ಮ ಎರಡನೇ ಮಗುವಿನ ಜನನದ ಹಿನ್ನೆಲೆಯಲ್ಲಿ ತವರಿಗೆ ತೆರಳಿದ್ದ ಹೆನ್ರಿಗೆ ಹಿಂತಿರುಗಲು ವಿಮಾನಯಾನದ ಸಮಸ್ಯೆ ಎದುರಾಗಿದೆ. ಇಸ್ರೇಲ್, ಅಮೆರಿಕ ಮತ್ತು ಇರಾನ್ ನಡುವಣ ಯುದ್ಧದಿಂದಾಗಿ ವಾಯು ಮಾರ್ಗಗಳಲ್ಲಿ ವ್ಯತ್ಯಯ ಉಂಟಾಗಿದ್ದು, ಹೀಗಾಗಿ ಹಲವು ದೇಶಗಳ ವಿಮಾನ ಯಾನಗಳು ರದ್ದಾಗಿದೆ. ಇತ್ತ ಸೆಮಿಫೈನಲ್‌ಗೂ ಎರಡು ದಿನ ಮುಂಚಿತವಾಗಿ ತಂಡವನ್ನು ಕೂಡಿಕೊಳ್ಳುವ ನಿರೀಕ್ಷೆಯೊಂದಿಗೆ ತವರಿಗೆ ತೆರಳಿದ್ದ ಮ್ಯಾಟ್ ಹೆನ್ರಿಗೆ ಭಾರತಕ್ಕೆ ಹಿಂತಿರುಗಲು ವಿಮಾನದ ಸಮಸ್ಯೆ ಎದುರಾಗಿದೆ. ಹೀಗಾಗಿಯೇ ಮಂಗಳವಾರ ಸಂಜೆಯವರೆಗೆ ಮ್ಯಾಟ್ ಹೆನ್ರಿಗೆ ನ್ಯೂಝಿಲೆಂಡ್ ತಂಡವನ್ನು ಕೂಡಿಕೊಳ್ಳಲು ಸಾಧ್ಯವಾಗಿಲ್ಲ.



ಇದಾಗ್ಯೂ ಅವರು ರಾತ್ರಿ ವೇಳೆ ಕೊಲ್ಕತ್ತಾಗೆ ಆಗಮಿಸುವ ನಿರೀಕ್ಷೆಯಲ್ಲಿದ್ದಾರೆ ನ್ಯೂಝಿಲೆಂಡ್ ಟೀಮ್ ಮ್ಯಾನೇಜ್ಮೆಂಟ್. ಒಂದು ವೇಳೆ ರಾತ್ರಿ, ಅವರು ತಂಡವನ್ನು ಸೇರಿಕೊಂಡರೆ ಮಾತ್ರ ಸೆಮಿಫೈನಲ್ ಪಂದ್ಯದಲ್ಲಿ ಕಣಕ್ಕಿಳಿಯಲು ಅವಕಾಶ ನೀಡುವುದಾಗಿ ನಾಯಕ ಮಿಚೆಲ್ ಸ್ಯಾಂಟ್ನರ್ ತಿಳಿಸಿದ್ದಾರೆ.

ಆದರೆ ಅದಕ್ಕೂ ಮುನ್ನ ಮ್ಯಾಟ್ ಹೆನ್ರಿ ಫಿಟ್‌ನೆಸ್ ಟೆಸ್ಟ್‌ನಲ್ಲಿ ಪಾಲ್ಗೊಳ್ಳಬೇಕಾಗುತ್ತದೆ. ಏಕೆಂದರೆ ಸುದೀರ್ಘ ವಿಮಾನ ಪ್ರಯಾಣ ಮಾಡಿ ಬರುವ ಕಾರಣ ಅವರನ್ನು ದೈಹಿಕ ಪರೀಕ್ಷೆಗೆ ಒಳಪಡಿಸಿ ಆಡುವ ಬಳಗಕ್ಕೆ ಸೇರಿಸಿಕೊಳ್ಳಲು ನಿರ್ಧರಿಸಲಾಗಿದೆ. ಹೀಗಾಗಿ ರಾತ್ರಿ, ಅಥವಾ ಬುಧವಾರ ಬೆಳಿಗ್ಗೆ ಬಂದರೂ ಮ್ಯಾಟ್ ಹೆನ್ರಿ, ಸೆಮಿಫೈನಲ್ ಆಡುವ ಬಗ್ಗೆ ಯಾವುದೇ ಖಚಿತತೆ ಇಲ್ಲ.

**Printed by : A. BALACHANDRA, Printed at : RAJHANS ENTERPRISES** No. 134, 4th Main Road, Industrial Town, Rajajinagar, Bengaluru - 560044, Karnataka. **Owned By, Published By, Editor :T. HOMBE GOWDA,** No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
**ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966**